ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್ ಪದವಿಯ
ಸಂಪ್ರಬಂಧ

ಅಧ್ಯಯನದ ವಿಷಯ

"ಕುಮಾರವ್ಯಾಸ ಭಾರತದ 'ಆದಿಪರ್ವ'ದಲ್ಲಿ ಪಾಠಾಂತರ ವಿಶ್ಲೇಷಣೆ"

ಸಂಶೋಧನ ವಿದ್ಯಾರ್ಥಿ
ರೇಖಾ.ಎಂ.

ಮಾರ್ಗದರ್ಶಕರು
ಡಾ.ಕೆ.ವಿ.ಶ್ರೀನಿವಾಸಮೂರ್ತಿ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು.

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್.ಪದವಿಯ
ಸಂಪ್ರಬಂಧ

ಅಧ್ಯಯನದ ವಿಷಯ

"ಕುಮಾರವ್ಯಾಸ ಭಾರತದ 'ಆದಿಪರ್ವ'ದಲ್ಲಿ ಪಾಠಾಂತರ ವಿಶ್ಲೇಷಣೆ"

ಸಂಶೋಧನ ವಿದ್ಯಾರ್ಥಿ
ರೇಖಾ.ಎಂ.

ಮಾರ್ಗದರ್ಶಕರು
ಡಾ.ಕೆ.ವಿ.ಶ್ರೀನಿವಾಸಮೂರ್ತಿ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬೆಂಗಳೂರು.

ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007–2008ನೇ ಸಾಲಿನ ಎಂ.ಫಿಲ್.ಪದವಿಗಾಗಿ **"ಕುಮಾರವ್ಯಾಸ ಭಾರತದ 'ಆದಿಪರ್ವ'ದಲ್ಲಿ ಪಾಠಾಂತರ ವಿಶ್ಲೇಷಣೆ'** ಎಂಬ ಸಂಪ್ರಬಂಧವನ್ನು ಡಾ: ಕೆ.ವಿ.ಶ್ರೀನಿವಾಸಮೂರ್ತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ;– 13/10/2008

ಸ್ಥಳ : ಬೆಂಗಳೂರು

ಸಹಿ/

(ರೇಖಾ.ಎಂ.)

<u>ಮಾರ್ಗದರ್ಶಕರ ಪ್ರಮಾಣಪತ್ರ</u>

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ.ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007–2008ನೇ ಸಾಲಿನ ಎಂ.ಫಿಲ್.ಪದವಿಗಾಗಿ **"ಕುಮಾರವ್ಯಾಸ ಭಾರತದ 'ಆದಿಪರ್ವ'ದಲ್ಲಿ ಪಾಠಾಂತರ ವಿಶ್ಲೇಷಣೆ'** ಎಂಬ ಸಂಪ್ರಬಂಧವನ್ನು ರೇಖಾ.ಎಂ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಧೃಡೀಕರಿಸುತ್ತೇನೆ.

ದಿನಾಂಕ: 13/10/08
ಸ್ಥಳ : ಬೆಂಗಳೂರು.

ಸಹಿ

(ಡಾ.ಕೆ.ವಿ.ಶ್ರೀನಿವಾಸಮೂರ್ತಿ)

ಪರಿವಿಡಿ

ಅಧ್ಯಾಯ –1
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ –1

ಉದ್ದೇಶ ಮತ್ತು ವ್ಯಾಪ್ತಿ

19ನೇ ಶತಮಾನ ಹಲವು ದೃಷ್ಟಿಯಿಂದ ಮಹತ್ವವಾದದ್ದು. ಅದರಲ್ಲಿ ಸಾಹಿತ್ಯದ ಹಲವು ಹೊಸ ಪ್ರಕಾರಗಳ ಜೊತೆಗೆ ವಿಮರ್ಶೆ, ಸಂಶೋಧನೆ, ಗ್ರಂಥಸಂಪಾದನೆಯಂತಹ ಮಹತ್ತರ ಕೊಡುಗೆಗಳು ಬ್ರಿಟಿಷರಿಂದ ಕನ್ನಡ ಸಾಹಿತ್ಯಕ್ಕೆ ಒದಗಿ ಬಂದದ್ದು ಸಹ ಒಂದು. ಅದರಲ್ಲಿಯೂ 'ಮುದ್ರಣ ಸಂಸ್ಕೃತಿ' ಒಂದು ಚಾರಿತ್ರಿಕ, ಸಾಹಿತ್ಯಿಕ ಬೆಳವಣಿಗೆ ಎನ್ನಬಹುದು. ಇದರಿಂದಾಗಿ ಹಲವು ಗ್ರಂಥರಾಶಿ ಇಂದು ನಮ್ಮ ಕಣ್ಣ ಮುಂದೆ ಇರಲು ಸಾಧ್ಯವಾಗಿದೆ.

ಕನ್ನಡದಲ್ಲಿ ವಿಪುಲವಾದ ಗ್ರಂಥರಾಶಿಯಿದ್ದರೂ ಅವುಗಳ ಸಂರಕ್ಷಣೆ, ಸಂಗ್ರಹ, ಪರಿಷ್ಕರಣೆ, ಸಂಪಾದನೆಯಿಲ್ಲದೆ ಸಾಹಿತ್ಯರಾಶಿ ಇದ್ದು ಇಲ್ಲದಂತಾಗಿದೆ. ಬ್ರಿಟಿಷರ ಕ್ರೈಸ್ತ ಮಿಷನರಿಗಳು ಮೊದಲು ಈ ಕಾರ್ಯಕ್ಕೆ ಕೈಹಾಕಿದವು. ಈ ಹಿನ್ನೆಲೆಯಲ್ಲಿ ಹಲವು ವಿದ್ವಾಂಸರ ಪರಿಶ್ರಮದಿಂದಾಗಿ 'ಶಬ್ದಮಣಿದರ್ಪಣ', 'ಕರ್ನಾಟಕ ಕಾದಂಬರಿ', 'ಛಂದೋಂಬುಧಿ', 'ಭಾಷಾಭೂಷಣ', ಶಬ್ದಾನುಶಾಸನ', 'ಜೈಮಿನಿಭಾರತ', ಮೊದಲಾದ ಕೃತಿಗಳು–ಪ್ರತಿಗಳು ಬೆಳಕು ಕಂಡವು. ಮೋಗ್ಲಿಂಗ್, ಬಿ.ಎಲ್.ರೈಸ್, ಮೆಕೆಂಜಿ, ಡಿ.ಎಲ್.ನರಸಿಂಹಚಾರ್, ಆರ್.ನರಸಿಂಹಚಾರ್ಯ, ಕಿಟ್ಟಲ್ ಮೊದಲಾದವರು ಈ ಹಿನ್ನೆಲೆಯಲ್ಲಿ ಹೆಸರಿಸಲೇ ಬೇಕಾದ ಸಂಪಾದಕರುಗಳಾಗಿದ್ದಾರೆ.

ಇದೇ ನಿಟ್ಟಿನಲ್ಲಿ ಹೊರಬಂದಂತಹ ಮತ್ತೊಂದು ಪ್ರಮುಖವಾದ ಹಾಗೂ ಕನ್ನಡ ಸಾಹಿತ್ಯದಲ್ಲಿ 'ಕಲಿಯದವರ ಕಾಮಧೇನು' ಎಂದೇ ಹೆಸರಾಗಿರುವ 'ಕುಮಾರವ್ಯಾಸ' ಕವಿ ವಿರಚಿತ 'ಕರ್ಣಾಟಕಭಾರತಕಥಾಮಂಜರಿ'. ಈ ಸಂಪ್ರಬಂಧದ ಕೇಂದ್ರಬಿಂದು ಸಹ ಈ ಭಾರತದ ಕಥಾಮಂಜರಿಯ ಮೊದಲ ಪರ್ವ ಮಾತ್ರ. ಒಬ್ಬ ಕವಿ ನಿರ್ಮಿತವಾದ ಕೃತಿ

ಕಾಲದಿಂದ ಕಾಲಕ್ಕೆ ಹಲವರ ಕೈಯಿಂದ ಹಲವಾರು ಪ್ರತಿಗಳಾಗಿ ವಿಭಿನ್ನ ಪಾಠಗಳು ಉಂಟಾಗುವುದು ಸಹಜ. ಅದರಲ್ಲಿಯೂ ಕುಮಾರವ್ಯಾಸ ಭಾರತದಂತಹ ಜನಪ್ರಿಯ ಕಾವ್ಯದಲ್ಲಿ ಈ ರೀತಿಯ ಪಾಠಾಂತರಗಳು ಇನ್ನೂ ಹೆಚ್ಚು.

ಆದರೂ ಸಹ ದೊರೆತಿರುವ ಹಸ್ತಪ್ರತಿಗಳ ಸಹಾಯದಿಂದ ಹಲವು ವಿದ್ವಾಂಸರು ಕವಿಯ ಮೂಲ ಅಥವಾ ಶುದ್ಧಪಾಠವನ್ನು ಸಂಪಾದಿಸಿ ಕೊಟ್ಟಿದ್ದಾರೆ. ಎಂ.ವಿ.ಸೀತಾರಾಮಯ್ಯ, ತ.ಸು.ಶಾಮರಾಯರು, ಮಾಸ್ತಿ–ಕುವೆಂಪು, ನಂಜನಗೂಡು ಶ್ರೀಕಂಠಶಾಸ್ತ್ರೀ, ವಿ.ಶ್ಯಾಮಚಾರಿ (ಓರಿಯಂಟಲ್ ಲೈಬ್ರರಿಯ ಪ್ರತಿ), ಟಿ.ಎನ್.ಕೃಷ್ಣಯ್ಯಶೆಟ್ಟಿ (ಪ್ರಕಾಶಕರು)ಯವರ ಪೇಟೆ ಪ್ರತಿ ಮೊದಲಾದವರು ಈ ನಿಟ್ಟಿನಲ್ಲಿ ಪ್ರಮುಖರು.

ಈ ಸಂಪ್ರಬಂಧದ ಪ್ರಮುಖ ಉದ್ದೇಶ ಪಾಠಾಂತರಗಳ ವಿಶ್ಲೇಷಣೆ. ಪ್ರಮುಖ ಸಂಪಾದಕರಾದ ಎಂ.ವಿ.ಸೀತಾರಾಮಯ್ಯ, ತ.ಸು.ಶಾಮರಾಯರು, ಮಾಸ್ತಿವೆಂಕಟೇಶ್ ಅಯ್ಯಂಗಾರ್, ಕೆ.ಆರ್.ಶೇಷಗಿರಿ ಹಾಗೂ ವಿ.ಶ್ಯಾಮಚಾರಿಯವರ ಸಂಪಾದನಾ ಕೃತಿಗಳನ್ನು ಮಾತ್ರ ಆಧರಿಸಿದೆ. ಈ ಕೃತಿಗಳಲ್ಲಿ ಬಳಕೆಯಾಗಿರುವ ಹಸ್ತಪ್ರತಿಗಳು, ಪಾಠಾಂತರಗಳು, ಪಾಠ ವಿಶ್ಲೇಷಣೆ, ಸಾಮಗ್ರಿಗಳು, ವ್ಯತ್ಯಾಸ, ಬಿಟ್ಟುಹೋಗಿರುವ ಭಾಗಗಳು ಮೊದಲಾದವನ್ನು ಗುರುತಿಸುವುದು ಪ್ರಮುಖ ಉದ್ದೇಶವಾಗಿದೆ.

ಇದರಲ್ಲಿ ಎಂ.ವಿ.ಸೀತಾರಾಮಯ್ಯನವರ ಸಂಗ್ರಹ ಹೆಚ್ಚು ವೈಜ್ಞಾನಿಕವಾದದ್ದು. ಸಂಪಾದನೆಯ ಕಾರ್ಯದಲ್ಲಿ ತಾವು ಬಳಸಿಕೊಂಡಿರುವ ಆಧಾರ ಪ್ರತಿಗಳು, ಒಂದು ಪದಕ್ಕೆ, ಅಕ್ಷರಕ್ಕೆ ಇರುವ ಇತರ ಪಾಠಾಂತರಗಳು ಹಾಗೂ ಯಾವ ಪ್ರತಿಯಲ್ಲಿ ಯಾವ ಪಾಠಾಂತರವಿದೆ. ಸ್ವೀಕೃತ ಪಾಠವನ್ನು ಯಾವ ಪ್ರತಿಯಿಂದ ಆರಿಸಿಕೊಳ್ಳಲಾಗಿದೆ. ಪಾಠಾಂತರಗಳ ಅರ್ಥವೇನು? ಇವಿಷ್ಟನ್ನು 'ಪಾಠಾಂತರ' ಎಂಬ ಹೆಸರಿನಲ್ಲಿ ಪ್ರತಿಪುಟದ ಕೆಳಗೆ ನೀಡಿದ್ದಾರೆ. ಅದರ ಕೆಳಗೆ ಕೆಲವು ಕಡೆ 'ವಿಶೇಷ ಸೂಚನೆ' ಎಂದು ಸೂಚಿಸಿ

ಪಾಠಾಂತರಕ್ಕೆ ಸಂಬಂಧಪಟ್ಟಂತೆ ವಿಶೇಷ ಅಂಶಗಳನ್ನು ಸೂಚಿಸಿದ್ದಾರೆ. ಈ ಅಧ್ಯಯನದ ಮುಖ್ಯ ಉದ್ದೇಶವು ಇದೆ. ಇತರೆ ಆವೃತ್ತಿಗಳಲ್ಲಿ ಇರುವ ವ್ಯತ್ಯಾಸವೇನು? ಎಂಬುದರತ್ತ ಗಮನಹರಿಸುವುದು. ಕೆಲವುದರಲ್ಲಿ ಹೊಸ ಪಾಠಗಳ (ಪದ, ಪದ್ಯ, ಅಕ್ಷರ. ಸೇರ್ಪಡೆಇದ್ದರೆ ಕೆಲವುದರಲ್ಲಿ ಅವು ಇರುವುದಿಲ್ಲ. ಕೆಲವು ಗ್ರಂಥಗಳಲ್ಲಿ ಒಂದೇ ಒಂದು ಅಕ್ಷರ ಸಾದೃಶ್ಯವಿರುತ್ತದೆ. ಇದರಿಂದಾಗಿ ಅದರ ಅರ್ಥವೇ ಬದಲಾಗುತ್ತದೆ. ಇವೆಲ್ಲದರ ಪರಿಶೀಲನೆ ಈ ಅಧ್ಯಯನದ ವ್ಯಾಪ್ತಿಗೆ ಬರುತ್ತದೆ.

'ಕುಮಾರವ್ಯಾಸ' ಒಬ್ಬ, ಅವನ 'ಭಾರತ' ಒಂದು. ಆದರೆ ಅದರ ರೂಪಗಳು(ಪ್ರತಿಗಳು) ಇಂದು ನಮಗೆ ಹಲವು ದೊರೆಯುತ್ತಿವೆ. ಕವಿಯ ಸ್ವಹಸ್ತಪ್ರತಿಯ ಪಾಠ ಅಥವಾ ಶುದ್ಧಪಾಠ ಯಾವುದು ಎಂಬುದರ ನಿರ್ಣಯವೇ ಈ ಗ್ರಂಥಗಳ ವೈವಿಧ್ಯಕ್ಕೆ ಕಾರಣ. ಈ ಸಂಪ್ರಬಂಧ ಸಾಗರದಲ್ಲಿ ಒಂದು ಕೊಡ ನೀರನ್ನು ಮಾತ್ರ ಎತ್ತುವಂತಹ ಪ್ರಯತ್ನ ಮಾತ್ರವಾಗಿದೆ. ಆದರೂ ಸಹಾ ಇದೊಂದು ಹೊಸ ಪ್ರಯತ್ನವೂ ಹೌದು. ಒಂದು ಗ್ರಂಥಕ್ಕಿಂತ, ಒಂದು ಹೇಗೆ ಭಿನ್ನ, ಯಾವುದು ಹೆಚ್ಚು ವೈಜ್ಞಾನಿಕ, ಸೂಕ್ತ ಆಧಾರಗಳನ್ನು ಬಳಸಿಕೊಂಡಿದೆ ಹಾಗೂ ಎಲ್ಲಿ, ಯಾವ ಭಾಗದಲ್ಲಿ ಪಾಠಾಂತರವಿದೆ ಎಂದು ಈ ಅಧ್ಯಯನದಿಂದ ತಿಳಿಯುತ್ತದೆ.

ಆದರೆ ಈ ಅಧ್ಯಯನದ ವ್ಯಾಪ್ತಿ ಸೀಮಿತವಾದದ್ದು. 'ಆದಿಪರ್ವ'ಕ್ಕೆ ಮಾತ್ರ ಪರಿಮಿತ. ಪ್ರಧಾನವಾಗಿ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ ಹೊರ ತಂದಿರುವ 'ಕುಮಾರವ್ಯಾಸ ವಿರಚಿತ ಆದಿಪರ್ವ' ಕೃತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ. ಇದರ ಸಂಪಾದಕರು ಕೆ.ಆರ್.ಶೇಷಗಿರಿಯವರು. ಉಳಿದ ಗ್ರಂಥಗಳಾದ ಬಿ.ಎಂ.ಶ್ರೀ.ಪ್ರತಿಷ್ಠಾನ ಬೆಂಗಳೂರು ಹೊರ ತಂದಿರುವ ಎಂ.ವಿ.ಸೀತಾರಾಮಯ್ಯನವರ ಸಂಪಾದಕತ್ವದ 'ಕುಮಾರವ್ಯಾಸ ಭಾರತ ಸಂಗ್ರಹ', ಮೈಸೂರು ಓರಿಯಂಟಲ್ ಲೈಬ್ರರಿಯ ವಿ.ಶ್ಯಾಮಚಾರಿ

ಸಂಪಾದಕತ್ವದ 'ಕರ್ಣಾಟಕ ಮಹಾಭಾರತ ಸಂಪುಟಗಳು(1 ಮತ್ತು2), ಮಾಸ್ತಿ-ಕುವೆಂಪು ಸಂಪಾದಿಸಿರುವ 'ಕರ್ಣಾಟಕ ಭಾರತ ಕಥಾಮಂಜರಿ', ತ.ಸು.ಶಾಮರಾಯರು ಸಂಪಾದಿಸಿರುವ 'ಕುಮಾರವ್ಯಾಸಭಾರತ'(ಸಂಗ್ರಹ), ಗ್ರಂಥಗಳಲ್ಲಿನ ಪಾಠಾಂತರಗಳ ತೌಲನಿಕ ವಿಶ್ಲೇಷಣೆ. ಈ ಸಂಪ್ರಬಂಧದ ಉದ್ದೇಶ ಮತ್ತು ವ್ಯಾಪ್ತಿಯಾಗಿದೆ.

ಅಲ್ಲದೆ ಈವರೆಗೂ 'ಕುಮಾರವ್ಯಾಸಭಾರತ'ದ ಎಷ್ಟು ಹಸ್ತಪ್ರತಿಗಳು ದೊರೆತಿವೆ, ಎಲ್ಲಿವೆ ಹಾಗೂ ಅವುಗಳ ಮುದ್ರಕಾರ್ಯ, ಅವುಗಳ ಸಂಪಾದಕರು, ಮೊದಲಾದವುಗಳ ಒಟ್ಟಾರೆ ಸಮೀಕ್ಷೆಯನ್ನು ಅಥವಾ ಪಕ್ಷಿನೋಟವನ್ನು ಸಹ ಒಳಗೊಂಡಿದೆ. ಈ ಕಾರ್ಯದಲ್ಲಿ ಕ್ರೈಸ್ತ ಮಿಷನರಿಗಳು, ಖಾಸಗಿ ಸಂಸ್ಥೆಗಳು, ವ್ಯಕ್ತಿಗಳು, ಸರ್ಕಾರಿ ಸಂಸ್ಥೆಗಳು, ವಿಶ್ವವಿದ್ಯಾಲಯಗಳ ಪಾತ್ರ ಮೊದಲಾದವುಗಳು ಇದರ ವ್ಯಾಪ್ತಿಯಲ್ಲಿದೆ.

20ನೇ ಶತಮಾನದಿಂದಿಚೀನ ಪರಿಷ್ಕರಣ, ಆವೃತ್ತಿಗಳ ಪಟ್ಟಿ, ಮೊದಲಾದವನ್ನು ದಾಖಲಿಸಿರುವುದು ಈ ಅಧ್ಯಯನದ ವಿಶೇಷ. ಅಂದರೆ ಒಟ್ಟಾರೆ ಈವರೆಗಿನ 'ಅಧ್ಯಯನಗಳ ಸಮೀಕ್ಷೆ' ಯನ್ನು ಸಹಾ ಒಳಗೊಂಡಿದೆ.

ಅಧ್ಯಾಯ–2
'ಕುಮಾರವ್ಯಾಸ ಭಾರತ'ದ ಅಧ್ಯಯನ ಸಮೀಕ್ಷೆ

ಅಧ್ಯಾಯ –2

'ಕುಮಾರವ್ಯಾಸಭಾರತ'ದ ಪರಿಷ್ಕರಣೆಗಳ ಸಮೀಕ್ಷೆ

1) ಹಸ್ತಪ್ರತಿಗಳ ಸಂಗ್ರಹ:

"ಈವರೆಗೆ '(1)ಕುಮಾರವ್ಯಾಸಭಾರತ'ದ ಸುಮಾರು 120 ಹಸ್ತಪ್ರತಿಗಳು ನಮ್ಮ ಗಮನಕ್ಕೆ ಬಂದಿದೆ." ಕನ್ನಡಅಧ್ಯಯನಸಂಸ್ಥೆ ಬೆಂಗಳೂರುವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಉಸ್ಮಾನಿಯವಿಶ್ವವಿದ್ಯಾಲಯ, ಮಂಗಳೂರುವಿಶ್ವವಿದ್ಯಾಲಯ, ಮೈಸೂರು ಅರಮನೆ ಸಂಸ್ಕೃತಿ ಭಂಡಾರ, ಕನ್ನಡಸಾಹಿತ್ಯಪರಿಷತ್ತು, ಕೆಳದಿ ವಸ್ತುಸಂಗ್ರಹಾಲಯಗಳಲ್ಲಿ ಒಟ್ಟು 41 ಹಸ್ತಪ್ರತಿಗಳ ಸುಳಿವು ದೊರೆಯುತ್ತದೆ.

ಇದರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ (76) ಹಸ್ತಪ್ರತಿಗಳು ಕಾಲದ ದೃಷ್ಟಿಯಿಂದ ಪ್ರಾಚೀನವಾದದ್ದು, ಅನಂತರದ್ದು ಕನ್ನಡ ಸಾಹಿತ್ಯ ಪರಿಷತ್ತಿನ 7 ಹಸ್ತಪ್ರತಿಗಳು (16–17ನೇ ಶತಮಾನದ್ದು), ಉಳಿದೆಲ್ಲವು ಬಹುಶ: 18–19ನೆ ಶತಮಾನದಲ್ಲಿ ಲಿಖಿತವಾದವು. ಕವಿ ಕಾಲಕ್ಕೆ ಹತ್ತಿರವಾದ ಹಸ್ತಪ್ರತಿಗಳು ದೊರೆತ್ತಿಲ್ಲ.

ಹತ್ತು ಪರ್ವಗಳು ಪೂರ್ತಿಯಾಗಿ ದೊರೆಯುವ ಹಸ್ತಪ್ರತಿಗಳು 15 ಮಾತ್ರ ಲಭ್ಯವಿದೆ. ಕನ್ನಡಅಧ್ಯಯನಸಂಸ್ಥೆಯ ಕೆ.205ನೆಯ ಹಸ್ತಪ್ರತಿ ಕಾಲದ ದೃಷ್ಟಿಯಿಂದ ಪ್ರಾಚೀನವಾದದ್ದು. ಇದರಲ್ಲಿನ (ೞ) ಶಕಟರೇಫದ ಪ್ರಯೋಗದಿಂದ ಇದನ್ನು ಸಾಬೀತುಪಡಿಸಬಹುದು. ಇದರಿಂದ ಇದು ಕವಿಯ ಕಾಲಕ್ಕೆ ಹತ್ತಿರವಾದ ಹಸ್ತಪ್ರತಿಯೆಂದು ಭಾವಿಸಲಾಗಿದೆ. ಮೈಸೂರು ವಿಶ್ವವಿದ್ಯಾಲಯ ಇತ್ತೀಚಿನ ಬಿಡಿ ಪರ್ವಗಳ ಸಂಪಾದನೆಯಲ್ಲಿ ಆಧಾರವಾಗಿ ಇದನ್ನು ಸ್ವೀಕರಿಸಿದೆ.

---

1)ಎಂ.ವಿ.ಸೀತಾರಾಮಯ್ಯ(ಸಂ): "ಕುಮಾರವ್ಯಾಸಭಾರತ ಸಂಗ್ರಹ"–ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ಬೆಂಗಳೂರು 1990. ಪುಟ ಸಂ.57.

2) ಮುದ್ರಣ ಕಾರ್ಯ:

ಕರ್ನಾಟಕದಲ್ಲಿ ಕ್ರೈಸ್ತ ಮಿಷಿನರಿಗಳು ಕೈಗೊಂಡ ಮುದ್ರಣ ಕಾರ್ಯದಿಂದಾಗಿ ಕುಮಾರವ್ಯಾಸ ಭಾರತದ ಹಲವು ಪ್ರತಿಗಳು ಹೊರಬಂದವು. ಕ್ರಿ.ಶ.1851ರಲ್ಲಿ ಮಂಗಳೂರಿನ 'ಜರ್ಮನ್ ಮಿಷನ್ ಪ್ರೆಸ್' ಮೊದಲ ನಾಲ್ಕು ಪರ್ವಗಳ ಕಲ್ಲಚ್ಚು ಮುದ್ರಣ ಹೊರತಂದಿತು. ಕ್ರಿ.ಶ.1865ರಲ್ಲಿ ಬೆಂಗಳೂರಿನ 'ವಿಚಾರದರ್ಪಣ ಮುದ್ರಾಕ್ಷರ ಶಾಲೆ' ಹೊಳೆಕಲ್ಲು ನರಸಿಂಹಯ್ಯನವರ ನೇತೃತ್ವದಲ್ಲಿ ಮೊದಲ ಐದು ಪರ್ವಗಳನ್ನು ಕೂಡಿಸಿ 'ಕನ್ನಡ ಭಾರತದೊಳ್ ಆದಿ ಪಂಚಕ' ಎಂಬುದನ್ನು ಹೊರತಂದಿತು. ಇದೇ ವರ್ಷ ಇದೇ ಮುದ್ರಾಕ್ಷರ ಶಾಲೆಯಿಂದ 'ಕನ್ನಡ ಭಾರತ ದಶಪರ್ವ'ವನ್ನು ತಂದದ್ದೇ ಈ ಗ್ರಂಥದ ಮೊದಲ ಪರಿಷ್ಕರಣವಾಯಿತು.

ಕ್ರಿ.ಶ.1880ರಲ್ಲಿ ಮದರಾಸಿನ 'ಸರಸ್ವತಿ ವಿಲಾಸ ಮುದ್ರಾಕ್ಷರ ಶಾಲೆ' 'ಕರ್ಣಾಟಕ ಭಾರತ ಕಥಾಮಂಜರಿ' ಎಂಬ ನಿಜನಾಮದಲ್ಲಿ ಪರಿಷ್ಕರಣೆ ಸಿದ್ಧಪಡಿಸಿತು. ಕ್ರಿ.ಶ.1888ರಲ್ಲಿ ಬೆಂಗಳೂರಿನ 'ವಾಹೇಶ್ವರಿ ಮುದ್ರಾಕ್ಷರ ಶಾಲೆ' 'ಕನ್ನಡ ಮಹಾಭಾರತದ ಪ್ರಥಮಾದಿ ಪರ್ವಗಳು' ಎಂಬುದನ್ನು ಹೊರತಂದಿತು. ಈ ಮೇಲಿನ ಪ್ರಕಟಣೆಗಳು 19ನೇ ಶತಮಾನದ ಉತ್ತರಾರ್ಧದ ಪರಿಷ್ಕರಣೆಗಳು ಈ ಅವಧಿಯಲ್ಲಿ ಹೆಚ್ಚಾಗಿ ಬಿಡಿ ಪರ್ವಗಳು ಸಹ ಪ್ರಕಟವಾದವು. ಉದಾಹರಣೆಗೆ: ಮದರಾಸಿನ 'ಸರಸ್ವತಿ ವಿಲಾಸ ಮುದ್ರಾಕ್ಷರ ಶಾಲಾ'ದ (ಕ್ರಿ.ಶ.1877) 'ವಿರಾಟಪರ್ವ', ಉದ್ಯೋಗಪರ್ವ, ಬೊಂಬಾಯಿಯ ಭಾರತಿ ಪ್ರೆಸ್‌ನ ಕೃಷ್ಣ ಸಂಧಾನ' ಮೊದಲಾದವು.

20ನೇ ಶತಮಾನದ ಪರಿಷ್ಕರಣೆಗಳು:

'ಮೈಸೂರಿನ ವಾಣಿವಿಲಾಸ ಬುಕ್ ಡಿಪೋ' ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಸಂಪಾದಿಸಿದ 'ಕನ್ನಡ ಭಾರತದ ದಶಪರ್ವ' ಈ ಅವಧಿಯ ಮೊದಲ ಪರಿಷ್ಕರಣ ಗ್ರಂಥ. ತದನಂತರದಲ್ಲಿ ಒಂದಾದ ಮೇಲೊಂದು ಪರಿಷ್ಕರಣ ಆವೃತ್ತಿಗಳು ಬಂದವು.

ಉದಾ;(ಕ್ರಿ.ಶ1916)ಬೆಂಗಳೂರಿನ ವಾಜಪೇಯಂ ಗೋವಿಂದಯ್ಯನವರ 'ಕನ್ನಡ ಮಹಾಭಾರತದ ದಶಪರ್ವ', (ಕ್ರಿ.ಶ.1925). ಟಿ.ಎನ್.ಕೃಷ್ಣಯ್ಯಶೆಟ್ಟರ್ ಬುಕ್ ಡಿಪೋ ಹೊರತಂದ 'ಅಷ್ಟಾದಶಪರ್ವ',(ಕ್ರಿ.ಶ.1928). ಭಾರತೀಸಂಪಗಿರಾಮ ಅವರು ಸಂಪಾದಿಸಿದ ಬೆಂಗಳೂರಿನ ಸರಸ್ವತಿ ರತ್ನಾಕರ ಬುಕ್ ಡಿಪೋ ಪ್ರಕಟಿಸಿದ 'ಶ್ರೀಮನ್ಮಹಾಭಾರತ ದಶಪರ್ವ' ಮೊದಲಾದವು.

ಮೈಸೂರಿನ ವಿಶ್ವವಿದ್ಯಾಲಯದ ಓರಿಯಂಟಲ್ ಲೈಬ್ರರಿ ಹಾಕಿಕೊಂಡ ಯೋಜನೆಯ ಅನ್ವಯ ಕುಮಾರವ್ಯಾಸಭಾರತ ಪರ್ವಗಳು 'ಕರ್ಣಾಟಕ ಮಹಾಭಾರತ'ದ ಭಾಗಗಳಾಗಿ ಕ್ರಿ.ಶ.1912ರಿಂದ ಒಂದು ರೀತಿಯಲ್ಲಿ ವ್ಯವಸ್ಥಿತವಾಗಿ ಬರತೊಡಗಿದವು. 'ಕರ್ಣಾಟಕ ಭಾರತಕಥಾಮಂಜರಿ' ಎಂಬ ನಿಜನಾಮದೊಂದಿಗೆ ಕ್ರಿ.ಶ.1950ರಲ್ಲಿ ಮೈಸೂರು ಸಂಸ್ಥಾನದ 'ಸಾಹಿತ್ಯಮತ್ತುಸಂಸ್ಕೃತಿಅಭಿವೃದ್ಧಿಇಲಾಖೆ' ದಶಪರ್ವಗಳ ಕುಮಾರವ್ಯಾಸಭಾರತವನ್ನು ಒಂದು ಸಂಪುಟವಾಗಿ ಹೊಸರೀತಿಯಲ್ಲಿ ಪ್ರಕಟಿಸಿದ್ದು ಈ ಗ್ರಂಥದ ಪ್ರಕಟಣೆಯಲ್ಲಿ ಒಂದು ಮುಖ್ಯವಾದ ಘಟ್ಟವೆಂದು ಹೇಳಬಹುದು. ಇದರ ಸಂಪಾದಕರು ಕುವೆಂಪು ಮತ್ತು ಮಾಸ್ತಿವೆಂಕಟೇಶ ಅಯ್ಯಂಗಾರ್ ಇದುವರೆಗೂ ಇದು ಮೂರು ಪುನರ್ ಮುದ್ರಣಗಳನ್ನು ಕಂಡಿದೆ.

ತದನಂತರದಲ್ಲಿ ಇಂದಿನವರೆಗೂ ಹಲವು ಪರಿಷ್ಕರಣ ಆವೃತ್ತಿಗಳು ಹೊಸ ಮುದ್ರಿತ ಕೃತಿಗಳು ಬರುತ್ತಲೆ ಇವೆ. ಕ್ರಿ.ಶ.1990ರಲ್ಲಿ ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ.ಯವರ ಸಂಪಾದಕತ್ವದಲ್ಲಿ ಕುಮಾರವ್ಯಾಸಭಾರತ ಸಂಗ್ರಹವನ್ನು ಹೊರತಂದಿತ್ತು.

ಅಧ್ಯಾಯ –3

ಪಾಠಾಂತರ ವಿಶ್ಲೇಷಣೆಯಲ್ಲಿ ಪ್ರಮುಖ ಸಂಪಾದನ ಕೃತಿಗಳು,

ಸಂಪಾದಕರು ಮತ್ತು ಆಕರಗಳು

ಅ) ಕರ್ಣಾಟಕ ಮಹಾಭಾರತ(ಸಂಪುಟ 1ಮತ್ತು2)
(ಸಂ)ವಿ.ಶ್ಯಾಮಚಾರ್ಯ(ಓರಿಯಂಟಲ್ ಲೈಬ್ರರಿ)

ಆ) ಕುಮಾರವ್ಯಾಸವಿರಚಿತ 'ಆದಿಪರ್ವ'
(ಸಂ)ಕೆ.ಆರ್.ಶೇಷಗಿರಿ(ಕನ್ನಡ ಅಧ್ಯಯನ ಸಂಸ್ಥೆ)

ಇ) ಕರ್ಣಾಟಕಭಾರತಕಥಾಮಂಜರಿ
(ಸಂ)ಮಾಸ್ತಿ ಮತ್ತು ಕುವೆಂಪು

ಈ) ಕುಮಾರವ್ಯಾಸ ಭಾರತ ಸಂಗ್ರಹ
(ಸಂ).ಪ್ರೊ.ಎಂ.ವಿ.ಸೀತಾರಾಮಯ್ಯ

ಉ) ಕುಮಾರವ್ಯಾಸ ಭಾರತ ಸಂಗ್ರಹ
(ಸಂ)ತ.ಸು.ಶಾಮರಾಯ

ಅಧ್ಯಾಯ–3

ಪಾಠಾಂತರ ವಿಶ್ಲೇಷಣೆಯಲ್ಲಿ ಪ್ರಮುಖ ಸಂಪಾದನ ಕೃತಿಗಳು– ಸಂಪಾದಕರು– ಆಕರಗಳು

ಈ ಸಂಪ್ರಬಂಧದಲ್ಲಿ ಪ್ರಮುಖವಾಗಿ ಐದು ಗ್ರಂಥಗಳಲ್ಲಿನ ಪಾಠಾಂತರವನ್ನು ವಿಶ್ಲೇಷಣೆಗೆ ತೆಗೆದುಕೊಳ್ಳಲಾಗಿದೆ. ಇವುಗಳಲ್ಲಿ ಬಳಸಿಕೊಂಡಿರುವ ಆಕರಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

1) ಕರ್ಣಾಟಕ ಮಹಾಭಾರತ ಸಂಪುಟ:

ಸಂಪುಟ 1 ಮತ್ತು 2 ಮೈಸೂರಿನ ಓರಿಯಂಟಲ್ ಲೈಬ್ರರಿ ಕ್ರಿ.ಶ.1912–1913ರಲ್ಲಿ ವಿ.ಶ್ಯಾಮಚಾರಿಯವರ ಸಂಪಾದಕತ್ವದಲ್ಲಿ ಹೊರತಂದಿತು. ಸಂಪುಟ 1ರಲ್ಲಿ ಹತ್ತು ಪ್ರತಿಗಳನ್ನು ಬಳಸಿಕೊಳ್ಳಲಾಗಿದೆ. ಈ ಪ್ರತಿಗಳ ಚಿಹ್ನೆಗಳೆಂದರೆ ಕ, ಖ, ಗ, ಘ, ಚ, ಛ, ಜ, ಝ, ಟ, ಠ, ಇದರಲ್ಲಿ ಕ, ಖ, ಚ, ಜ, ಟ, ಠ, ಪ್ರತಿಗಳು ಸಮಗ್ರ ಪ್ರತಿಗಳು, ಉಳಿದವು ಅಸಮಗ್ರ ಪ್ರತಿಗಳು "(1)ಇದರಲ್ಲಿ ಚ, ಛ, ಟ, ಮೂರು ಪ್ರತಿಗಳು ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಮುದ್ರಿಸಲ್ಪಟ್ಟಿರುವ ಪುಸ್ತಕಗಳ ಪಾಠಕ್ಕೆ ಸರಿಹೋಗುವವು. ಉಳಿದ ಏಳು ಪ್ರತಿಗಳ ಪಾಠಗಳು ಸಂಪಾದನೆಯ ಪಾಠಕ್ಕೆ ಆಧಾರವಾಗಿದೆ."

ಸಂಪುಟ 2 ಮೊದಲನೇಯ ಸಂಪುಟದ ಮುಂದುವರೆದ ಭಾಗವಾಗಿದೆ. ಸಂಪುಟ 1ರಲ್ಲಿ ಆದಿಪರ್ವದೊಳ ಸಂಭವಪರ್ವದವರೆಗೂ ಬಂದಿದೆ. ಸಂಪುಟ 2ರಲ್ಲಿ ಆದಿ ಪರ್ವದೊಳ ಜತುಗೃಹಾದಿ ಪರ್ವಗಳು ಬಂದಿವೆ. ಸಂಪುಟ 1ರಲ್ಲಿ ಬಳಸಿಕೊಂಡಿರುವ ಆಕಾರಗಳನ್ನೇ ಇಲ್ಲಿಯೂ ಬಳಸಿಕೊಳ್ಳಲಾಗಿದೆ. ಆದರೆ ಮೊದಲ ಸಂಪುಟದಲ್ಲಿ ಬಳಸದೇ ಇರುವ 'ಡ' ಪ್ರತಿಯನ್ನು ಇಲ್ಲಿ ಬಳಸಲಾಗಿದೆ.

---

(1) ಕರ್ಣಾಟಕ ಮಹಾಭಾರತ(ಸಂಪುಟ–1).(ಸಂ).ವಿ.ಶ್ಯಾಮಚಾರಿ–ಓರಿಯಂಟಲ್ ಲೈಬ್ರರಿ, ಮೈಸೂರು 1912 ಪುಟ 16

'ಡ' ಪ್ರತಿ ಲೈಬ್ರರಿಯ 227ನೇಯ ನಂಬರಿನ ಪುಸ್ತಕ ಇದು 'ಥಿಯಾಲಾಜಿಕಲ್ ಕಾಲೇಜಿನಿಂದ 'ಆರ್ಕಿಲಾಜಿಕಲ್ ಆಫೀಸ್' ದ್ವಾರ 'ಓರಿಯಂಟಲ್ ಲೈಬ್ರರಿಗೆ' ಬಹುಮಾನವಾಗಿ ದೊರೆತ ಪ್ರತಿ ಇದು. ಒಟ್ಟಾರೆ ಈ ಸಂಪುಟದಲ್ಲಿ ಕ, ಖ, ಚ, ಜ, ಟ, ಡ ಪ್ರತಿಗಳನ್ನು ಆಕರವಾಗಿ ಬಳಸಿಕೊಂಡಿದ್ದಾರೆ. ಈ ಸಂಪುಟದ ಮತ್ತೊಂದು ವಿಶೇಷವೆಂದರೆ ಕೊನೆಯಲ್ಲಿ ಎರಡು ಪರಿಶಿಷ್ಟಗಳನ್ನು ಕೊಡಲಾಗಿದೆ. ಇದರಲ್ಲಿ ಹರಿಶ್ಚಂದ್ರರಾಯನ ಕಥೆ, ಯಯಾತಿರಾಯನ ಕಥೆಯನ್ನು ಕೊಡಲಾಗಿದೆ. ಆದರೆ ಇದು ಹೆಚ್ಚು ಯಾವ ಕೃತಿಯಲ್ಲೂ ಕಂಡು ಬರುವುದಿಲ್ಲ. ಗ, ಫ, ಜ, ಠ ಅಂದರೆ 218, 210, 2, 273 ಲೈಬ್ರರಿ ನಂಬರಿನ ಪುಸ್ತಕಗಳಲ್ಲಿ ಕಂಡು ಬಂದುದರಿಂದ ಮುದ್ರಣ ಮಾಡಲಾಗಿದೆ ಎಂದು ಸಂಪಾದಕರು ಉಲ್ಲೇಖಿಸಿದ್ದಾರೆ.

ಬೆಂಗಳೂರು ಮೊದಲಾದ ಸ್ಥಳಗಳಲ್ಲಿ ಮುದ್ರಿತವಾದ ಪುಸ್ತಕಗಳಂತೆ ಮತ್ತು ಚ, ಛ, ಟ, ಗುರ್ತುಗಳುಳ್ಳ ಪ್ರತಿಗಳನ್ನು ಈ ಸಂಪುಟ ಪ್ರಮುಖವಾಗಿ ಆಧರಿಸಿದೆ.

2) ಕುಮಾರವ್ಯಾಸ ವಿರಚಿತ ಆದಿಪರ್ವ:

ಕನ್ನಡಅಧ್ಯಯನಸಂಸ್ಥೆ,ಮೈಸೂರುವಿಶ್ವವಿದ್ಯಾಲಯ ಕ್ರಿ.ಶ.1972ರಲ್ಲಿಕೆ.ಆರ್.ಶೇಷಗಿರಿಯವರ ಸಂಪಾದಕತ್ವದಲ್ಲಿ 'ಆದಿಪರ್ವ'ವನ್ನು ಹೊರತಂದಿತು. ಇವರು ಗ್ರಂಥಪರಿಷ್ಕರಣ ಕಾರ್ಯದಲ್ಲಿ ಒಟ್ಟು 17 ಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಅದರಲ್ಲಿ 2 ಕಾಗದ ಪ್ರತಿಗಳು, ಒಂದು ಮುದ್ರಿತವಾದ ಪುಸ್ತಕ ಇನ್ನುಳಿದವು ಓಲೆಗ್ರಂಥಗಳು ಇದರಲ್ಲಿ ಅತಿ ಪ್ರಾಚೀನ ಪ್ರತಿಯಾದ ಕೆ.205ನೇಯ ನಂಬರಿನ (ಕ್ರಿ.ಶ.1554) ಓಲೆಯ ಪ್ರತಿಯನ್ನು ಮುಖ್ಯ ಆಧಾರ ಪ್ರತಿಯನ್ನಾಗಿ ಸ್ವೀಕರಿಸಿದೆ.

ಇದರಲ್ಲಿನ ಗ್ರಂಥಪಾತಗಳನ್ನು 'ಮ' ಪ್ರತಿಯಿಂದ ಸ್ವೀಕರಿಸಲಾಗಿದೆ. 17 ಪ್ರತಿಗಳನ್ನು ಸಂಪಾದಕರು 5 ವಿಭಾಗಮಾಡಿ ಸಂಕೇತಾಕ್ಷರ ಅಥವಾ ಪ್ರತಿಗಳ ಚಿಹ್ನೆ ನೀಡಿದ್ದಾರೆ. ಅವೆಂದರೆ;

ಅ) 'ಕ' ಪ್ರತಿ (ಕೆ.205ಪ್ರತಿ)

ಆ) ಐರಾವತ ಸಂಧಿ ಇಲ್ಲದಿರುವ ಪ್ರತಿಗಳು–ಚ, ಡ, ಖ, ಮ, ಲ, ವ

ಇ) ಐರಾವತ ಸಂಧಿ ಇರುವ ಪ್ರತಿಗಳು–ಖ, ಣ, ಪ, ರ

ಈ) ಐರಾವತ ಸಂಧಿದೊಡನೆ ಸಂಭವಪರ್ವಗಳಿರುವ ಪ್ರತಿಗಳು–ಗ, ಟ, ತ, ನ

ಉ) ಐರಾವತ ಸಂಧಿಯಿಲ್ಲದೆ ಸಂಭವಪರ್ವಗಳಿರುವ ಪ್ರತಿಗಳು–ಜ, ದ

ಇದರಲ್ಲಿ ಕ, ಖ, ಗ, ಚ, ಡ, ಣ, ದ, ಪ, ಬ, ಮ, ರ, ವ, ಪ್ರತಿಗಳು ಪೂರ್ಣಪ್ರತಿಗಳು ಉಳಿದವು ಅಪೂರ್ಣಪ್ರತಿಗಳು.

3) ಕರ್ಣಾಟಕ ಭಾರತ ಕಥಾಮಂಜರಿ–(ಸಂ) ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಕುವೆಂಪು

ಈ ಕೃತಿಯನ್ನು ಕ್ರಿ.ಶ.1985ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಹೊರತಂದಿತು. ಇದರಲ್ಲಿ ನಾಲ್ಕು ಪ್ರತಿಗಳನ್ನು ಆಕಾರವಾಗಿ ಬಳಸಿಕೊಳ್ಳಲಾಗಿದೆ. ಅವೆಂದರೆ:

ಅ) ಕ ಚಿಹ್ನೆಯ ಪ್ರತಿ–205ನೆಯ ನಂಬರಿನ ಪ್ರತಿ

ಆ) 'ಎ' ಚಿಹ್ನೆಯ ಪ್ರತಿ–57ನೇ ಕಲ್ಲಚ್ಚಿನ ಪ್ರತಿ(ಕ್ರಿ.ಶ.1851ರಲ್ಲಿ ಮಂಗಳೂರಿನಲ್ಲಿ ಮುದ್ರಿತವಾದದ್ದು) ಇದರಲ್ಲಿ ನಾಲ್ಕು ಪರ್ವ ಮಾತ್ರ ಇದೆ.

ಇ) ಶ್ರೀ.ಟಿ.ಎನ್.ಕೃಷ್ಣಯ್ಯಶೆಟ್ಟರ್ ಮುದ್ರಿತ ಪ್ರತಿ(ಸುಮಾರು ಕ್ರಿ.ಶ.1925) ಇದರಲ್ಲಿ 18 ಪರ್ವಗಳಿವೆ.

ಈ) ಓರಿಯಂಟಲ್ ಲೈಬ್ರರಿಯ ಹಿಂದಿನ ಪ್ರಕಟಣೆಗಳು

ಆದರೆ ಇದು ಜನಪ್ರಿಯ ಪ್ರತಿ. ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಪಾದಿಸಿರುವಂತಹದು "(1)ಅಂದರೆ ಸಂಶೋಧನೆಗೆ ಗಮನಯಿತ್ತಿಲ್ಲವೆಂದಲ್ಲ. ಎಲ್ಲೆಲ್ಲಿ ಸಾಧ್ಯವೊ ಎಲ್ಲೆಲ್ಲಿ ಅನಿವಾರ್ಯವೊ ಅಲ್ಲಿ ನಾಲ್ಕು ಓಲೆಯ ಪ್ರತಿಗಳನ್ನು ನೋಡಲಾಗಿದೆ".

4) <u>ಕುಮಾರವ್ಯಾಸಭಾರತ ಸಂಗ್ರಹ: (ಸಂ)ಪ್ರೊ.ಎಂ.ವಿ.ಸೀತಾರಾಮಯ್ಯ</u>

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಬೆಂಗಳೂರು ಮೂಲಕ 1990ರಲ್ಲಿ ಈ ಕೃತಿ ಹೊರಬಂದಿತು. ಇದರಲ್ಲಿ ಒಟ್ಟು ಮೂರು ಪ್ರತಿಗಳನ್ನು ಆಕರವಾಗಿ ಬಳಸಿಕೊಂಡಿದ್ದಾರೆ. ಅವೆಂದರೆ:-

ಅ) ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿರುವ ಬಿಡಿಪರ್ವಗಳು('ಅ' ಎಂಬ ಸಂಕೇತ ನೀಡಲಾಗಿದೆ.)

ಆ) ಬಿ.ಎಂ.ಶ್ರೀ. ಮುಂತಾದವರು ಸಿದ್ಧ ಮಾಡಿದ್ದ ಕಾಗದದ ಪ್ರತಿ (ಅಸಮಗ್ರ) ಇದನ್ನು ಆಧಾರ ಪ್ರತಿಯಾಗಿ ಬಳಸಿಕೊಳ್ಳಲಾಗಿದೆ.(ಇದಕ್ಕೆ 'ಆ' ಎಂಬ ಸಂಕೇತಾಕ್ಷರ ನೀಡಲಾಗಿದೆ.)

ಇ) ಓರಿಯಂಟಲ್ ಗ್ರಂಥಾಲಯದ ಪ್ರತಿ('ಓ' ಎಂಬ ಸಂಕೇತಾಕ್ಷರ ನೀಡಲಾಗಿದೆ.)

5) ಕುಮಾರವ್ಯಾಸಭಾರತ (ಸಂಗ್ರಹ)-(ಸಂ)ತ.ಸು.ಶಾಮರಾಯ:-

1996ರಲ್ಲಿ ಸಾಹಿತ್ಯ ಅಕಾಡೆಮಿ, ಹೊಸದೆಹಲಿ. ತ.ಸು.ಶಾಮರಾಯರ ಸಂಪಾದಕತ್ವದಲ್ಲಿ ಕುಮರವ್ಯಾಸಭಾರತ ಸಂಗ್ರಹವನ್ನು ಹೊರ ತಂದಿದೆ. ಇಲ್ಲಿ ಬಳಸಿಕೊಂಡಿರುವ ಆಕರಗಳ ಬಗ್ಗೆ ಉಲ್ಲೇಖಿಸಿಲ್ಲ ಮತ್ತು ಯಾವುದೇ ಪಾಠಾಂತರಗಳನ್ನು ನೀಡಿಲ್ಲ.

-----

(1) ಕರ್ಣಾಟಕಭಾರತಕಥಾಮಂಜರಿ: (ಸಂ) ಮಾಸ್ತಿ ಮತ್ತು ಕುವೆಂಪು: ಕನ್ನಡ ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು-02, 1985. ಪುಟ 23

ಒಟ್ಟಾರೆ ದೊರೆತ ಆಧಾರಗಳಿಂದ ಸಂಗ್ರಹಿಸಲ್ಪಟ್ಟ ಜನಪ್ರಿಯ ಆವೃತ್ತಿಯಾಗಿದೆ. ಇದು ಜನ ಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ರಚನೆಯಾಗಿರುವುದರಿಂದ ಸಂಶೋಧನೆಯ ದೃಷ್ಟಿಯಿಂದ ಮಹತ್ವದ್ದಲ್ಲವಾದರೂ ಕೆಲವೊಂದು ಪಾಠಾಂತರಗಳನ್ನು ಗುರುತಿಸಬಹುದಾಗಿದೆ.

ಅಧ್ಯಾಯ –4

ಆದಿಪರ್ವದ ಸಾಮಾನ್ಯವಸ್ತು ಮತ್ತು ಕೆಲವು ಗ್ರಂಥಗಳ

ವಿಷಯಾನುಕ್ರಮಾಂಕ,ಪದ್ಯಗಳ ಸಂಖ್ಯೆ

ಅಧ್ಯಾಯ-4

ಆದಿಪರ್ವದ ಸಾಮಾನ್ಯವಸ್ತು, ಕೆಲವು ಗ್ರಂಥಗಳ ವಿಷಯಾನುಕ್ರಮಣಿಕೆ ಮತ್ತು ಪದ್ಯಗಳ ಸಂಖ್ಯೆ

ಎಲ್ಲಾ ಕೃತಿಗಳಲ್ಲೂ ಸಾಮಾನ್ಯವಾಗಿ 'ಆದಿಪರ್ವ' ಪೀಠಿಕಾಸಂಧಿ, ಮಂಗಳಾಚರಣೆಯಿಂದ ಪ್ರಾರಂಭವಾಗಿದೆ. ತದನಂತರ ಗಂಗೆ ಮತ್ತು ಶಂತನುವಿನ ಕಥೆ, ಭೀಷ್ಮನ ಜನನ, ಶಂತನು ಮತ್ತು ಯೋಜನಗಂಧಿಯ ವಿವಾಹ, ಪಾಂಡು, ಧೃತರಾಷ್ಟ್ರ, ವಿಧುರನ ಜನನ, ಕೌರವ-ಪಾಂಡವರ ಜನನ, ಬಾಲ್ಯ, ವಿದ್ಯಾಭ್ಯಾಸ, ವೈರತ್ವ, ಶಕುನಿಯ ತಂತ್ರ, ಅರಗಿನಮನೆಯ ಕಿಚ್ಚು, ಬಕಾಸುರ-ಹಿಡಿಂಬರ ವಧೆ, ದ್ರೌಪದಿ ಸ್ವಯಂವರ, ಕೊನೆಯದಾಗಿ ಖಾಂಡವವನ ದಹನ ಇಲ್ಲಿಯವರೆಗಿನ ಕಥೆ ಎಲ್ಲಾ ಸಂಗ್ರಹಗಳಲ್ಲಿಯೂ ಸಾಮಾನ್ಯವಾಗಿ ಒಂದೇ ಆಗಿದೆ. ಆದರೆ ಅವುಗಳ ವಿಷಯದ ವಿಭಾಗ ಕ್ರಮ, ಪಾಠಾಂತರ ಸ್ವೀಕಾರ, ಆಕರಗಳ ಬಳಕೆ, ಪದ್ಯಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆ. ಕೆಲವು ಕಡೆ ಅಂದರೆ ವರ್ಣನೆಗೆ ಅವಕಾಶವಿರುವ ಕಡೆ ಲಿಪಿಗಾರರು ತಮ್ಮ ಸ್ವಂತ ಪದ್ಯಗಳನ್ನು ಸೇರಿಸಿರುವುದರಿಂದ ಪ್ರಕ್ಷೇಪಗಳು ಸೇರಿವೆ. ಅಲ್ಲದೆ ಕಣ್ಣತಪ್ಪು, ಕಿವಿತಪ್ಪು, ಕೈತಪ್ಪುಗಳಿಂದಾಗಿ ಮತ್ತು ಲಿಪಿಗಾರರ ಅಲಸ್ಯ, ಸೋಮಾರಿತನ, ತಪ್ಪು ತೀರ್ಮಾನ, ಉದ್ದೇಶಪೂರ್ವಕ ವ್ಯತ್ಯಾಸಗಳಿಂದಾಗಿ ಪಾಠಾಂತರಗಳು ಸಂಭವಿಸಲು ಕಾರಣವಾಗಿದೆ.

ಈಗ ಕೆಲವು ಗ್ರಂಥಗಳ ವಿಷಯಾನುಕ್ರಮಕ್ಕೆ ಹಾಗೂ ಪದ್ಯಗಳ ಸಂಖ್ಯೆಯಲ್ಲಿನ ವ್ಯತ್ಯಾಸವನ್ನು ಸಂಕ್ಷಿಪ್ತವಾಗಿ ನೋಡಬಹುದು. ಮೈಸೂರಿನ ಓರಿಯಂಟಲ್ ಲೈಬ್ರರಿ ಆದಿಪರ್ವವನ್ನು ಎರಡು ಸಂಪುಟಗಳಲ್ಲಿ ಹೊರತಂದಿದೆ. ಕ್ರಿ.ಶ.1912-13ರಲ್ಲಿ ಹೊರಬಂದ ಈ ಕೃತಿ ಆಗ ದೊರೆತ ಆಧಾರಗಳನ್ನು ಬಳಸಿಕೊಂಡಿದೆ. ಇದರಲ್ಲಿ 'ಆದಿಪರ್ವದೊಳ್ ಸಂಭವಪರ್ವ' ಮತ್ತು 'ಆದಿಪರ್ವದೊಳ್ ಜತುಗೃಹಾದಿಪರ್ವ' ಎಂದು ಶೀರ್ಷಿಕೆಗಳನ್ನು ನೀಡಲಾಗಿದೆ.

ಒಂದೊಂದು ಸಂಪುಟದಲ್ಲಿಯೂ 20 ಸಂಧಿಗಳಿದ್ದು, ಸುಮಾರು ಎರಡು ಸಾವಿರಕ್ಕಿಂತ ಹೆಚ್ಚು ಪದ್ಯಗಳಿವೆ. ಇದರಲ್ಲಿ ಪ್ರಕ್ಷಿಪ್ತ ಭಾಗಗಳೇ ಹೆಚ್ಚಾಗಿವೆ. ಪಾಠಾಂತರಗಳು ಸಹ ವಿಫುಲವಾಗಿ ಸಿಗುತ್ತವೆ.

ಕೆ.ಆರ್.ಶೇಷಗಿರಿಯವರು ಸಂಪಾದಿಸಿರುವ ಕುಮಾರವ್ಯಾಸ ವಿರಚಿತ 'ಆದಿಪರ್ವ'ದಲ್ಲಿ ಪೀಠಿಕಾಸಂಧಿಯಿಂದ ಖಾಂಡವವನದಹನದವರೆಗೂ '20'. ಶೀರ್ಷಿಕೆಯಲ್ಲಿ ವಿಷಯಾನುಕ್ರಮಣಿಕೆ ಇದೆ. ಒಟ್ಟು ಇಪ್ಪತ್ತು ಸಂಧಿಗಳಿವೆ. ಒಟ್ಟು 881 ಪದ್ಯಗಳಿವೆ.

ಕುವೆಂಪು ಮತ್ತು ಮಾಸ್ತಿ ಸಂಪಾದಕತ್ವದ 'ಕರ್ಣಾಟಕ ಭಾರತ ಕಥಾಮಂಜರಿ' ಎಂ.ವಿ.ಸೀತಾರಾಮಯ್ಯ ಸಂಪಾದಿತ 'ಕುಮಾರವ್ಯಾಸಭಾರತ ಸಂಗ್ರಹ', ತ.ಸು.ಶಾಮರಾಯರು ಸಂಪಾದಿಸಿರುವ 'ಕುಮಾರವ್ಯಾಸಭಾರತ (ಸಂಗ್ರಹ)' ಕೃತಿಗಳು ಸಂಗ್ರಹ ಕೃತಿಗಳಾಗಿವೆ. ಅದ್ದರಿಂದ 'ಕನ್ನಡ ಅಧ್ಯಯನ ಸಂಸ್ಥೆ' ಹೊರತಂದಿರುವ 'ಪ್ರತಿ'ಯನ್ನು ಗಮನಿಸುವುದು ಹೆಚ್ಚು ಉತ್ತಮ, ಆದರೂ ಸಹ ಉಳಿದ ಸಂಗ್ರಹ ಕೃತಿಗಳಲ್ಲಿನ ಪಾಠಾಂತರಗಳನ್ನು ಗಣನೆಗೆ ತೆಗೆದುಕೊಂಡು ತುಲನಾತ್ಮಕವಾಗಿ ಈ ಸಂಪ್ರಬಂಧದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಸಂಕೇತಾಕ್ಷರಗಳ ವಿವರ

ಕಅಸಂ – ಕೆ.ಆರ್.ಶೇಷಗಿರಿಯವರು ಸಂಪಾದಿಸಿರುವ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ಹೊರತಂದಿರುವ ಆವೃತ್ತಿ ಮತ್ತು ಆಧಾರ ಪ್ರತಿ(ಕುಮಾರವ್ಯಾಸ ವಿರಚಿತ ಆದಿಪರ್ವ)

ಕುಭಾ – ಕುಮಾರವ್ಯಾಸಭಾರತ (ಆಧಾರಪ್ರತಿ)

'ಪ್ರ' – ಬಿ.ಎಂ.ಶ್ರೀ. ಪ್ರತಿಷ್ಠಾನದ ಎಂ.ವಿ.ಸೀತಾರಾಮಯ್ಯನವರ ಸಂಪಾದಕತ್ವದ ಆವೃತ್ತಿ

'ಕುಮಾ' – ಕುವೆಂಪು ಮತ್ತು ಮಾಸ್ತಿಯವರು ಸಂಪಾದಿಸಿರುವ 'ಕರ್ಣಾಟಕ ಭಾರತ ಕಥಾಮಂಜರಿ'

'ಓ' – ಓರಿಯಂಟಲ್ ಲೈಬ್ರರಿಯ(ಮೈಸೂರು) ಆದಿಪರ್ವದ ಸಂಪುಟ 1ಮತ್ತು2

'ತ' – ತ.ಸು.ಶಾಮರಾಯರು ಸಂಪಾದಿಸಿರುವ 'ಕುಮಾರವ್ಯಾಸಭಾರತ (ಸಂಗ್ರಹ)'

'ಕ,ಬ,ರ,ನ
ಮೊದಲಾದವು – 'ಕಅಸಂ' (ಆಧಾರಪ್ರತಿ) ಪ್ರತಿಯಲ್ಲಿ ಉಲ್ಲೇಖಿಸಿರುವ ಪ್ರತಿಗಳು

ಅ,ಆ – 'ಪ್ರ'ಪ್ರತಿಯಲ್ಲಿ ಉಲ್ಲೇಖಿತ ಪ್ರತಿಗಳು

ಅಧ್ಯಾಯ –5

ಪಾಠಾಂತರಗಳ ವಿಶ್ಲೇಷಣೆ

ಅ) ಪದ್ಯ–ಪದ್ಯಗಳ ಪಾಠಾಂತರ–ಪಲ್ಲಟ–ಪ್ರಕ್ಷೇಪ

ಆ) ಸಾಲು–ಸಾಲುಗಳ ಪಾಠಾಂತರ

ಇ) ಪದ–ಪದಗಳ ಪಾಠಾಂತರ

ಈ) ಅಕ್ಷರ–ಅಕ್ಷರಗಳ ಪಾಠಾಂತರ

ಅಧ್ಯಾಯ–5

ಪಾಠಾಂತರ ವಿಶ್ಲೇಷಣೆ

ಒಂದು ಗ್ರಂಥಸಂಪಾದನೆಯ ಕಾರ್ಯದಲ್ಲಿ 'ಪಾಠಾಂತರ'ಗಳ ಸಂಕಲನ ಪ್ರಮುಖವಾದ ಹಂತ. ನಂತರ ಈ ಪಾಠಾಂತರಗಳಲ್ಲಿ 'ಅಕ್ಷರ ಸ್ವಾಲಿತ್ಯ', 'ಪ್ರಕ್ಷೇಪ', 'ಲೋಪ', 'ಊಹಾತ್ಮಕ ಪಾಠ', ಇತರೆ ಸ್ವಾಲಿತ್ಯ ಇವೆಲ್ಲವನ್ನು ಗುರುತಿಸಬೇಕಾದ ಹೊಣೆ ಸಂಪಾದಕನದು, ನಂತರವೇ ಪಾಠ ಪರಿಷ್ಕರಣೆ ಸಾಧ್ಯವಾಗುವುದು.

ಪಾಠಾಂತರಗಳು ಸಂಭವಿಸಲು ಹಲವು ಕಾರಣಗಳಿವೆ. ಪ್ರಮುಖವಾಗಿ ಅಂತಃಸಂಭಾವ್ಯತೆ ಮತ್ತು ಲಿಪಿಕಾರ ಲೇಖನ ಸಂಭಾವ್ಯತೆಯಿಂದ ಪಾಠಾಂತರಗಳು ಉಂಟಾಗುತ್ತದೆ. ಇದು ಉದ್ದೇಶಪೂರ್ವಕವಾಗಿಯೂ ಆಗಬಹುದು ಅಥವಾ ಲಿಪಿಕಾರನಿಗೆ ಅರಿವಿಲ್ಲದೆಯೂ ಆಗಬಹುದು. ಒಟ್ಟಾರೆ ಭಿನ್ನ ಪಾಠಾಂತರಗಳು ಉಂಟಾಗುತ್ತವೆ. ಈ ಸಂಪ್ರಬಂಧದಲ್ಲಿ ಕೆಲವು ಗ್ರಂಥಗಳಲ್ಲಿನ ಪಾಠಾಂತರವನ್ನು ಮಾತ್ರ ವಿಶ್ಲೇಷಣೆಗೆ ತೆಗೆದುಕೊಳ್ಳಲಾಗಿದೆ. ಅವುಗಳನ್ನು ನಾಲ್ಕು ನೆಲೆಗಳಲ್ಲಿ ಪ್ರಮುಖವಾಗಿ ವಿಶ್ಲೇಷಿಸಬಹುದು. ಅವೆಂದರೆ:

ಅ) ಪದ್ಯ–ಪದ್ಯಗಳ ಪಾಠಾಂತರ ಮತ್ತು ಪಲ್ಲಟ

ಆ) ಸಾಲು–ಸಾಲುಗಳ ಪಾಠಾಂತರ ವಿಶ್ಲೇಷಣೆ

ಇ) ಪದ–ಪದಗಳ ಪಾಠಾಂತರ ವಿಶ್ಲೇಷಣೆ

ಈ) ಅಕ್ಷರ–ಅಕ್ಷರಗಳ ಪಾಠಾಂತರ ವಿಶ್ಲೇಷಣೆ

ಅ) ಪದ್ಯ-ಪದ್ಯಗಳ ಪಾಠಾಂತರ ಮತ್ತು ಪಲ್ಲಟ:

ಅಕ್ಷರಲೋಪಾದಿಗಳನ್ನು ಮಾಡುವುದು ಲಿಪಿಕಾರನಿಗೆ ತಿಳಿದೋ,ತಿಳಿಯದೆಯೋ ಹೇಗೆ ನಡೆಯುತ್ತದೆಯೋ ಅದೇ ರೀತಿ ಇಲ್ಲದಿರುವುದನ್ನು ಸೇರಿಸುವುದು ಕೂಡ ಪಾಠಾಂತರಗಳು ಉಂಟಾಗಲು ಕಾರಣವಾಗುತ್ತದೆ. ಹೀಗೆ ಬಿಡಿ ಅಕ್ಷರಗಳಿಂದ ಹಿಡಿದು ಹಲವು ಅಧ್ಯಾಯಗಳವರೆಗೂ 'ಕುಮಾರವ್ಯಾಸಭಾರತ'ದಲ್ಲಿ ಪಾಠಾಂತರಗಳಿರುವುದಕ್ಕೆ ವಿಪುಲವಾದ ಉದಾಹರಣೆಗಳಿವೆ.

ಲಿಪಿಕಾರನಿಗೆ "(1)ಸ್ವಲ್ಪ ಮಟ್ಟಿಗೆ ಪಾಂಡಿತ್ಯವು, ಪದ್ಯವನ್ನು ಹೆಣೆಯುವ ಸಾಮರ್ಥ್ಯವಿದ್ದರೆ, ಮೂಲ ಗ್ರಂಥದ ನೆರಳಿನಲ್ಲಿ ತನ್ನದು ಕೆಲವು ಪದ್ಯಗಳಾದರೂ ಉಳಿದುಕೊಂಡು ಬರಲೆಂದು ಹೊಸ ಪದ್ಯಗಳನ್ನು ಸೇರಿಸುವುದು, ಇರುವುದನ್ನು ಬಿಡುವುದು, ಅಥವಾ ವ್ಯತ್ಯಾಸಗೊಳಿಸುವುದು ಮಾಡಬಹುದು" ಇದರಿಂದಲೇ 'ಹೆಚ್ಚುವರಿ ಪದ್ಯಗಳು', ಪದ್ಯಗಳ ಪಲ್ಲಟಗಳು ಕಾಣಬರುವುದು ಮತ್ತು ಪದ್ಯಗಳ ಸಂಖ್ಯೆಯಲ್ಲಿ ವ್ಯತ್ಯಾಸವಿರುವುದು ಕುಮಾರವ್ಯಾಸ ಭಾರತದಂತಹ ಜನಪ್ರಿಯ ಆವೃತ್ತಿಯಲ್ಲಿ ಪದ್ಯಗಳ ಸಂಖ್ಯೆ ಬೆಳೆಯಲು ಈ ಅಂಶವು ಮೂಲ ಕಾರಣವಾಗಿದೆ. ಈ ಸಂಪ್ರಬಂಧದಲ್ಲಿ ಸಮಗ್ರವಾಗಿ ಪದ್ಯಗಳ ಪಾಠಾಂತರ, ಪಲ್ಲಟಗಳನ್ನು ಗುರುತಿಸಲು ಸಾಧ್ಯವಿಲ್ಲದಿದ್ದರೂ ಕೆಲವೊಂದನ್ನು ಮಾತ್ರ ಉದಾಹರಿಸಬಹುದಾಗಿದೆ.

ಆದಿಪರ್ವದ ಪೀಠಿಕಾಸಂಧಿಯ ಮೊದಲ ಪದ್ಯ ಎಲ್ಲಾ ಆವೃತ್ತಿಗಳಲ್ಲಿಯೂ ಒಂದೇ ರೀತಿ ಕಂಡು ಬರುತ್ತದೆ. ಆದರೆ ಎರಡನೇ ಪದ್ಯದಿಂದ ಕೊನೆಯವರೆಗೂ ಪಲ್ಲಟ, ಪದ್ಯಗಳ ಸಂಖ್ಯೆಯಲ್ಲಿ ವ್ಯತ್ಯಾಸ ಹಾಗೂ ಹೆಚ್ಚುವರಿ ಪದ್ಯಗಳು ಕಾಣಬರುತ್ತದೆ.

---

(1) ಡಾ.ಡಿ.ಎಲ್.ನರಸಿಂಹಚಾರ್: ಕನ್ನಡ ಗ್ರಂಥಸಂಪಾದನೆ : ಡಿ.ವಿ.ಕೆ.ಮೂರ್ತಿ ಪ್ರಕಾಶನ ಮೈಸೂರು, 1964, ಪುಟ ಸಂಖ್ಯೆ -105

ಅ)   ಗಜಮುಖನೆ ಮೆರೆವೇಕದಂತನೆ

ನಿಜಗುಣಾನ್ವಿತ ಪರಶುಧಾರನೆ

ರಜತಗಿರಿ-------- ವಾರಿಧಿಯೆ

ಅಜನು--------------

-------------- ನಿನ್ನನು

ತ್ರಿಜಗ ವಂದಿತ------- ಮಂಗಳವ.

(ಕು.ಭಾ-ಪೀಠಿಕಾಸಂಧಿ-4ನೇ ಪದ್ಯ)

ಈ ಪದ್ಯ 'ಪ್ರ' ಮತ್ತು 'ತ' ಪ್ರತಿಗಳಲ್ಲಿ 2ನೇ ಪದ್ಯವಾಗಿದೆ. 'ಕುಮಾ' ಪ್ರತಿಯಲ್ಲಿ '4'ನೇ ಪದ್ಯವಾಗಿದೆ. 'ಓ'ಪ್ರತಿಯಲ್ಲಿ ಈ ಪದ್ಯ ಇಲ್ಲವೇ ಇಲ್ಲ. ದೇವತಾಸ್ತುತಿಯಿಂದಲೇ ಎಲ್ಲಾ ಪದ್ಯಗಳು ಪ್ರಾರಂಭವಾಗಿದ್ದರೂ ಪದ್ಯಗಳ ಸಂಖ್ಯೆಯಲ್ಲಿ ವ್ಯತ್ಯಾಸವಿರುವುದರಿಂದ ಮೇಲಿನ ಪದ್ಯ ಪಲ್ಲಟಕ್ಕೆ ಕಾರಣವಾಗಿದೆ. ಆದರೆ ಸ್ವಾರಸ್ಯದ ದೃಷ್ಟಿಯಿಂದ ಯಾವುದೇ ಚ್ಯುತಿಯು ಇಲ್ಲದಿರುವುದು ಗಮನಿಸಬೇಕಾದ ಅಂಶ.

ಅದೇ ರೀತಿ ಪಲ್ಲಟಕ್ಕೆ ಮತ್ತೊಂದು ಉದಾಹರಣೆ ಎಂದರೆ-

ಆ) ಶರಣ ಸಂಗ ವ್ಯಸನ ಭುಜಗಾ

ಭರಣನ---------------

ಚರಣ----------- ನಿರುಪಮಭಾಳ ಶಿಖಿನೇತ್ರ

ಕರಣ-------------

-------ಚವರ್ಣ೦

ಬರನೆ ------------ ಪಾರ್ವತೀರಮಣ

(ಕುಭಾ-ಪೀಠಿಕಾಸಂಧಿ-2ನೇ ಪದ್ಯ)

ಈ ಪದ್ಯ 'ಪ್ರ' ಪ್ರತಿಯಲ್ಲಿ 3ನೇ ಪದ್ಯವಾಗಿದ್ದರೆ 'ಕ', 'ಕುಮಾ', ಪ್ರತಿಗಳಲ್ಲಿ 2ನೇ ಪದ್ಯವಾಗಿದೆ. 'ತ', 'ಓ'. ಪ್ರತಿಗಳಲ್ಲಿ ಈ ಪದ್ಯ ಇಲ್ಲ.

ಇ) ವಾರಿಜಾಸನನೆ ಸಕಲಶಾಸ್ತ್ರವಿ
ಚಾರದೋದ್ಭವೆ--------
----------------- ಸಿದ್ಧಿದಾಯಕಿಯೆ
ಶೌರಿ--------------
----------------- ಯುಕುತಿಯೆ
ಶಾರದೆಯೆ----------- ಜಿಹ್ವೆಯಲಿ

(ಕುಭಾ–ಪೀಠಿಕಾಸಂಧಿ–5ನೇ ಪದ್ಯ)

ಈ ಪದ್ಯ ಎಂ.ವಿ.ಸೀ.ಸಂಪಾದಿತ 'ಪ್ರ' ಪ್ರತಿಯಲ್ಲಿ 4ನೇ ಪದ್ಯ, 'ತ' ಪ್ರತಿಯಲ್ಲಿ 3ನೇ ಪದ್ಯವಾಗಿದೆ. 'ಕುಮಾ' ಪ್ರತಿಯಲ್ಲಿ 5ನೇ ಪದ್ಯವಾಗಿ ಬಂದಿದೆ. 'ಓ' ಪ್ರತಿಯಲ್ಲಿ 6ನೇ ಪದ್ಯವಾಗಿ ಬಂದಿದೆ. ಈ ಪದ್ಯಗಳಲ್ಲಿಯೂ ಅಷ್ಟೆ 'ಪಲ್ಲಟ'ವನ್ನು ಗುರುತಿಸಬಹುದೇ ಹೊರತು ಒಟ್ಟಾರೆ ಕಥಾ ಸ್ವಾರಸ್ಯದ ದೃಷ್ಟಿಯಿಂದ ಕುಂದುಂಟಾಗಿಲ್ಲ.

ಈ ರೀತಿ ಆದಿಪರ್ವದ ಪ್ರಾರಂಭದ ಪೀಠಿಕಾಸಂಧಿಯಲ್ಲಿ ಹೆಚ್ಚಾಗಿ ಪದ್ಯಗಳ ಪಲ್ಲಟಗಳು ಕಾಣಿಸಿಕೊಳ್ಳುತ್ತದೆ. ತದನಂತರದಲ್ಲಿ ಹೆಚ್ಚುವರಿ ಪದ್ಯಗಳ ಸಂಖ್ಯೆ ಬಗ್ಗೆ ಹೇಳುವುದಾದರೆ ಹೊಸ ಹೊಸ ಪದ್ಯಗಳನ್ನು ಲಿಪಿಕಾರರು ಸೇರಿಸುವುದರಿಂದ 'ಪಲ್ಲಟ'ದ ಜೊತೆಗೆ ಪದ್ಯಗಳ ಸಂಖ್ಯೆಯೂ ಬೆಳೆಯುತ್ತದೆ. ಪದ್ಯ–ಪದ್ಯಗಳ ಪಾಠಾಂತರದ ಬಗ್ಗೆ ಹೇಳುವುದಾದರೆ ಇವುಗಳ ಸಂಖ್ಯೆ ಕಡಿಮೆ. ಹೆಚ್ಚಾಗಿ ಪದಗಳ ಹಾಗೂ ಅಕ್ಷರಗಳ ಪಾಠಾಂತರವನ್ನು ಗುರುತಿಸಬಹುದೇ ಹೊರತು ಪದ್ಯಗಳ ಪಾಠಾಂತರ ಕಡಿಮೆ ಅಥವಾ ವಿರಳ ಆದರೂ ಕೆಲವೊಂದನ್ನು ಉದಾಹರಿಸಬಹುದು.

ಅ) ವೀರನಾರಾಯಣನೆ ಕವಿ ಲಿಪಿ
ಗಾರ ಕುಮಾರವ್ಯಾಸ ಕೇಳುವ
ಸುರಿಗಳು ಸನಕಾದಿಗಳು ಜಂಗಮಜನಾರ್ದನರು
ಚಾರು ಕವಿತೆಯಬಳಕೆಯಲ್ಲವಿ
ಚಾರಿಸುವಡಳವಲ್ಲ ಚಿತ್ತವ
ಥಾರು ಹೋ ಸರ್ವಜ್ಞರಾದರು ಸಲುಗೆ ಬಿನ್ನಪವ

(ಕು.ಭಾ.–ಪೀಠಿಕಾ ಸಂಧಿ–8ನೆ ಪದ್ಯ)

ಈ ಪದ್ಯ 'ಪ್ರ', 'ತ', 'ಕುಮಾ', ಪ್ರತಿಗಳಲ್ಲಿ ಪದ್ಯದ ಸಂಖ್ಯೆ ವ್ಯತ್ಯಾಸವಿದ್ದರೂ ಒಂದೇ ರೀತಿಯಾಗಿ ಬಂದಿದೆ. ಆದರೆ 'ಓ' ಪ್ರತಿಯಲ್ಲಿ ಈ ಕೆಳಗಿನಂತೆ ಪಾಠಾಂತರವನ್ನು ಗುರುತಿಸಬಹುದು.

ವೀರನಾರಾಯಣನ ಸುಕವಿಕು
ಮಾರವ್ಯಾಸ ರಚನಾ ಕೃತಿಯಕೇಳುವೆ
ಸೂರಿಗಳು ಸನಕಾದಿಗಳು ಜಂಗಮ ಜನಾರ್ದನರು
ಹಾರಗವಿತೆಯ ಬಳಕೆಯಂತೆ ವಿ
ಚಾರಿಸುಮೊಡವೆಲ್ಲ ಚಿತ್ತವ
ಧಾರು ಹೋ ಸರ್ವಜ್ಞರಾಯರು ಸಲುಗೆಬಿನ್ನಪವ

('ಓ'–ಪೀಠಿಕಾಸಂಧಿ–14ನೆ ಪದ್ಯ)

ಆ) ತಿಳಿಯ ಹೇಳುವೆ ಕೃಷ್ಣ ಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮ --------
ಹಲವು ಜನ್ಮದ-----------
ತೊಳೆವ---------------
ಕುಲಕೆ --------------ಶ್ರುತಿಯ

('ಪ್ರ' ಪ್ರತಿಯ ಎಂ.ವಿ.ಸೀ.ಸಂಪಾದಿತ ಪೀಠಿಕಾಸಂಧಿ-1ರ 3ನೆ ಪದ್ಯ)

ಈ ಪದ್ಯ ಎಲ್ಲಾ ಪ್ರತಿಗಳಲ್ಲೂ ಕಂಡು ಬರುವ ಜನಪ್ರಿಯ ಪದ್ಯ. ಆದರೆ ಕನ್ನಡ ಅಧ್ಯಯನ ಸಂಸ್ಥೆ (ಕಅಸಂ)ಯ 'ಆದಿಪರ್ವ'ದಲ್ಲಿ ಇಲ್ಲ. 'ಪ್ರ' ಪ್ರತಿಯಲ್ಲೂ ಸಹಾ ಎಂ.ವಿ.ಸೀಯವರು 'ಕುಮಾ' ಪ್ರತಿಯಿಂದ ಸ್ವೀಕರಿಸಿರುವುದಾಗಿ ಉಲ್ಲೇಖಿಸಿದ್ದಾರೆ. ಅಲ್ಲದೆ 'ಕಅಸಂ' ಪ್ರತಿಯಲ್ಲಿ ಮೊದಲ ಪೀಠಿಕಾಸಂಧಿ' ಕೇವಲ 10 ಪದ್ಯಗಳಲ್ಲಿಯೇ ಮುಗಿದಿದೆ. 'ಪ್ರ' ಪ್ರತಿಯಲ್ಲಿ 12, 'ತ' ಪ್ರತಿಯಲ್ಲಿ 10, 'ಕುಮಾ' ಪ್ರತಿಯಲ್ಲಿ 23, 'ಓ' ಪ್ರತಿಯಲ್ಲಿ 31 ಪದ್ಯಗಳಿವೆ. 'ಕುಮಾರವ್ಯಾಸಭಾರತದ' ಕಥಾನಾಯಕನನ್ನು ಪರಿಚಯಿಸುವ ಈ ಮೇಲಿನ ಪದ್ಯವನ್ನು ಕೆ.ಆರ್.ಶೇಷಗಿರಿಯವರು (ಕಅಸಂ) ಸಂಪಾದಿಸಿರುವ ಪ್ರತಿಯಲ್ಲಿ ಇಲ್ಲ.

ಕನ್ನಡಅಧ್ಯಯನಸಂಸ್ಥೆಯ ಪ್ರತಿ, ಕುವೆಂಪು, ಮಾಸ್ತಿ ಸಂಪಾದಿತ ಪ್ರತಿ ಮತ್ತು ಓರಿಯಂಟಲ್ ಲೈಬ್ರರಿಯ ಪ್ರತಿಗಳು ಹೆಚ್ಚುಕಡಿಮೆ ಒಂದಕ್ಕೊಂದು ಹೋಲಿಕೆಯನ್ನು ಹೊಂದಿವೆ. 'ಶೇಷಗಿರಿ'ಯವರು ಸಂಪಾದಿಸಿರುವ ಆದಿಪರ್ವದ 2ನೆ ಸಂಧಿಯಿಂದ ಹಿಡಿದು 4ನೆ ಸಂಧಿಯವರೆಗೂ ಇರುವ ಪದ್ಯಗಳು ಬಿ.ಎಂ.ಶ್ರೀ.ಪ್ರತಿಷ್ಠಾನದ ಎಂ.ವಿ.ಸೀ. ಸಂಪಾದಿತ ಪ್ರತಿಯನ್ನು ಹೊರತು ಪಡಿಸಿ ಎಲ್ಲ ಪ್ರತಿಗಳಲ್ಲೂ ಒಂದೇ ರೀತಿಯಾಗಿ ಬಂದಿದೆ. ಎಂ.ವಿ.ಸೀ ಸಂಪಾದಕತ್ವದ 'ಪ್ರ' ಪ್ರತಿಯಲ್ಲಿ ಇವನ್ನು ಕೈಬಿಡಲಾಗಿದೆ.

2 ರಿಂದ 4ನೆ ಸಂಧಿಯವರೆಗೂ ವೇದವ್ಯಾಸರ ಆಗಮನ, ಪುತ್ರಕಾಮೇಷ್ಠಿಯಾಗ, ಬ್ರಾಹ್ಮಣಹತ್ಯಶಾಪ ಇದು ಹೋಗಲು ಭಾರತ ಕಥೆ ಹೇಳುವಂತೆ ವ್ಯಾಸರ ಉಪದೇಶ, ಮತ್ಸ್ಯಗಂಧಿ, ಗಂಗೆ, ಶಂತನು, ರಾಜನ ಕಥೆ, ಭೀಷ್ಮ, ಅಂಬೆ, ಅಂಬಿಕೆ, ಅಂಬಾಲಿಕೆಯರ ಕಥೆ, ಪಾಂಡು, ಧೃತರಾಷ್ಟ್ರ, ವಿದುರರ ಜನನ, ವಿವಾಹ, ಪಾಂಡುವಿನ ಶಾಪ, ಕುಂತಿ, ದುರ್ವಾಸನರ ಪ್ರಸಂಗ, ಕೌರವ, ಪಾಂಡವರ ಜನನ, ಬಾಲ್ಯದ ವರ್ಣನೆ ಹೀಗೆ ವಿಸ್ತಾರವಾದ ವರ್ಣನೆಗಳಿಂದ ಪದ್ಯಗಳು ತುಂಬಿಹೋಗಿದೆ. ಓರಿಯಂಟಲ್ ಲೈಬ್ರರಿಯ ಪ್ರತಿಯಲ್ಲಿ ಇದು 15 ಸಂಧಿಗಳವರೆಗೂ ಬಂದಿದೆ.

ಕೆಲವು ಪದ್ಯಗಳು ಪೂರ್ವಾರ್ಧ ಒಂದೇ ರೀತಿ ಇದ್ದು, ಉತ್ತರಾರ್ಧ ಪಾಠಾಂತರವಿರುವ ಉದಾಹರಣೆಗಳು ಸಿಗುತ್ತವೆ. ಓರಿಯಂಟಲ್ ಲೈಬ್ರರಿಯ ಪ್ರತಿಯಲ್ಲಿ ಇಂತಹ ಪದ್ಯಗಳು ಕೆಲವು ಕಂಡು ಬರುತ್ತವೆ. ಉದಾಹರಣೆಗೆ

ಅ) ಮುನಿಗಳೀಕೆಯ ತಿಳುಹಿಮಾದ್ರಿಗೆ

ಮುನಿಗಳೇ ಮಾಡಿದರು ಮಾದ್ರೀ

ವನಿತೆ ತನ್ನ ಕುಮಾರರಿಬ್ಬರ

ತನುಜ ನೀ ಸಲಹೆಂದು ಕೊಟ್ಟಳು ಧರ್ಮಜನ ಕರೆದು

(ಕು.ಭಾ.–ಆದಿಪರ್ವ5ನೇ ಸಂಧಿ 24ನೆ ಪದ್ಯ)

'ಪ್ರ', 'ತ', 'ಕುಮಾ', ಪ್ರತಿಗಳಲ್ಲಿ ಈ ಪದ್ಯ ಇದೇ ರೀತಿ ಬಂದಿದೆ. ಆದರೆ 'ಓ' ಪ್ರತಿಯಲ್ಲಿ ಮಾತ್ರಾ ಉತ್ತರಾರ್ಧ ಭಿನ್ನಪಾಠವಿದೆ. ಅದನ್ನು ಈ ಕೆಳಗಿನಂತೆ ಗುರುತಿಸಬಹುದು.

ಮುನಿಗಳೀಕೆಯ-----------

ಎನಲು ಮನ್ನಿಸೆ ಕುಂತಿಮಾದ್ರಿಗೆ

ಜನಪತಿಯ ತಾನಿತ್ತು ಮಕ್ಕಳ

ತನುವಿಗಾನತೆಯಾಗಿ ನುಡಿದಳು ಮಾದ್ರಿಧರ್ಮಜಗೆ

('ಒ' ಪ್ರತಿಯ16ನೆ ಸಂಧಿ 25ನೆ ಪದ್ಯ)

ಇಲ್ಲಿ ಪದ್ಯದ ಅರ್ಥಕ್ಕೆ ಯಾವುದೇ ಚ್ಯುತಿಯಿಲ್ಲ. ಪಾಂಡುವಿನ ಮರಣದ ನಂತರ ಮಕ್ಕಳನ್ನು (ಪಾಂಡವರನ್ನು) ಮಾದ್ರಿ ಕುಂತಿಗೆ ಒಪ್ಪಿಸಿ ತಾನು ಸಹಗಮನಕ್ಕೆ ಮುಂದಾಗುವ ಪದ್ಯವಿದು.

ಅದೇ ರೀತಿಯಾಗಿ ಪದ್ಯದ ಉತ್ತರಾರ್ಧ ಭಿನ್ನತೆಗೆ ಮತ್ತೊಂದು ಉದಾಹರಣೆಯನ್ನು ನೋಡಬಹುದು.

ಆ) ಒಂದು ದಿನ ---------

ಬಂದು ನಿಂದರು ಕೋಲಬೀಸುರ್ಟಿ

ವೃಂದ ಹತ್ತಿತು ಮರವ ಕೋಲನು

ತಂದು (ಕಂಡೆ)ಡೆಯಾಡಿ ಬಳಲಿದು ನೋಡಿದನು ಭೀಮ

(ಕು.ಭಾ.ಆದಿಪರ್ವ-6ನೆ ಸಂಧಿ-8ನೆ ಪದ್ಯ)

ಇದಕ್ಕೆ 'ಓರಿಯಂಟಲ್ ಲೈಬ್ರರಿಯ ಪ್ರತಿಯಲ್ಲಿನ ಪಾಠಾಂತರ ಈ ಕೆಳಗಿನಂತಿದೆ.

ಒಂದು ದಿನ------------

ಬಂದು ತಾವಡರಿದುದು ಕೌರವ
ವೃಂದ ಮರನನು ಬಲುಕ ನಾಲ್ವರು
ವೊಂದು ವೃಕ್ಷದಲಿರಲು ತಾಹರಿದಾಡಿದನು ಭೀಮ

('ಓ'ಪ್ರತಿ–ಆದಿಪರ್ವ17ನೆ ಸಂಧಿ–12ನೆ ಪದ್ಯ)

ಇದೇ ರೀತಿ ಅನೇಕ ಪದ್ಯಗಳ ಪಾಠಾಂತರ, ಪಲ್ಲಟ ಹಾಗೂ ಹೆಚ್ಚುವರಿ ಪದ್ಯಗಳನ್ನು ಗುರುತಿಸಬಹುದಾಗಿದೆ. ಹೆಚ್ಚುವರಿ ಪದ್ಯಗಳು (ಪ್ರಕ್ಷೇಪ) 'ಓರಿಯಂಟಲ್ ಲೈಬ್ರರಿ'ಯ ಪ್ರತಿಯಲ್ಲಿ ಹೆಚ್ಚಾಗಿವೆ. 'ಕಅಸಂ' ಪ್ರತಿ, 'ಕುಮಾ' ಪ್ರತಿ, 'ತ' ಪ್ರತಿಗಳಲ್ಲಿ ಒಂದೇ ರೀತಿಯ ಸ್ವೀಕೃತಿಯ ಪಾಠಗಳು ಕಾಣಬರುತ್ತವೆ. ಎಂ.ವಿ.ಸೀ.ಸಂಪಾದಿತ 'ಪ್ರ' ಪ್ರತಿಯಲ್ಲಿ ಮಾತ್ರಾ ಪದ್ಯಗಳ ಸಂಖ್ಯೆ ಕಡಿಮೆ. ಪದ್ಯಗಳ ಸಂಖ್ಯೆಯ ವ್ಯತ್ಯಾಸದಿಂದಾಗಿ ಎಲ್ಲಾ ಪ್ರತಿಗಳಲ್ಲಿಯೂ 'ಪಲ್ಲಟ'ಗಳು ಸರ್ವೇ ಸಾಮಾನ್ಯವಾಗಿ ಕಂಡು ಬರುತ್ತದೆ. 'ಪ್ರ' ಪ್ರತಿಯಲ್ಲಿ (ಎಂ.ವಿ.ಸೀ.ಸಂಪಾದಿತ) 'ಕಅಸಂ' ಪ್ರತಿಯ ಪಾಠವೇ ಸ್ವೀಕೃತವಾಗಿದ್ದು, 'ಓ' ಪ್ರತಿಯ ಪಾಠವನ್ನು ಪಾಠಾಂತರವಾಗಿ ನೀಡಲಾಗಿದೆ.

'ತ', 'ಕುಮಾ' ಪ್ರತಿಗಳಲ್ಲೂ 'ಕಅಸಂ' ಪ್ರತಿಯ ಪಾಠವೇ ಸ್ವೀಕೃತವಾಗಿದ್ದರೂ ಪಾಠಾಂತರವನ್ನು ಗುರುತಿಸುವ ಗೋಜಿಗೆ ಮಾತ್ರ ಈ ಪ್ರತಿಗಳಲ್ಲಿ ಹೋಗಿಲ್ಲ.

ಆ) ಸಾಲು-ಸಾಲುಗಳ ಪಾಠಾಂತರ ವಿಶ್ಲೇಷಣೆ:

ಒಂದು ಗ್ರಂಥದ ಹಸ್ತಪ್ರತಿಯನ್ನು ಮೂಲವಾಗಿಟ್ಟುಕೊಂಡು ಅದರಂತೆ ಇನ್ನೊಂದು ಪ್ರತಿಯನ್ನು ಮಾಡಬೇಕೆಂದು ಸಂಕಲ್ಪಿಸಿ ಬರೆಯಲು ತೊಡಗುವ ಲಿಪಿಕಾರನಿಗೆ ಅರಿವಿಲ್ಲದೆಯೇ ಎಷ್ಟೋ ತಪ್ಪುಗಳು ಉಂಟಾಗುತ್ತವೆ. 'ಅಕ್ಷರ', 'ಪದ'ಗಳಲ್ಲದೆ ಕೆಲವೊಮ್ಮೆ 'ಸಾಲು' ಪಾಠಾಂತರಗಳು ಸೇರುವುದು. ಲಿಪಿಕಾರನಿಗೆ ಸ್ವಲ್ಪಮಟ್ಟಿಗೆ ಪಾಂಡಿತ್ಯವಿದ್ದು ಸಾಲುಗಳನ್ನು ಹೊಸೆಯುವ ಸಾಮರ್ಥ್ಯವಿದ್ದರೆ ಹೊಸ ಸಾಲುಗಳನ್ನು ಸೇರಿಸಬಹುದು.

ಕೆಲವೊಮ್ಮೆ ಲಿಪಿಕಾರನ ಸೋಮಾರಿತನ, ಅವಸರ ಬೇಸರಿಕೆಗಳಿಂದಲೂ ಈ ರೀತಿ ಸಾಲು ಪಾಠಾಂತರಗಳು ಸೇರಬಹುದು. ಬೇಸರಿಕೆಯಿಂದ ಬರೆಯುವಾಗ ಒಂದು ಸಾಲಿಗೆ ಬದಲಾಗಿ ಬೇರೆ ಕಡೆ ಇರುವ ಸಾಲನ್ನು ಸೇರಿಸಬಹುದು ಅಥವಾ ಸಾಲುಗಳನ್ನು ಅದಲು ಬದಲು ಮಾಡಬಹುದು. ಅಥವಾ ಅರ್ಧ ಸಾಲು ಮೇಲಿನದೋ, ಕೆಳಗಿನದೋ ಸಾಲಿನ ಭಾಗವನ್ನು ಸೇರಿಸಬಹುದು.

ಕೆಲವೊಮ್ಮೆ ತ್ರುಟಿತವಾಗಿರುವ, ಜೀರ್ಣವಾಗಿರುವ ಭಾಗಗಳನ್ನು ಲಿಪಿಕಾರನೆ ಊಹಿಸಿ ಬರೆಯುವುದರಿಂದಲೂ ಪಾಠಾಂತರಗಳು ಉಂಟಾಗುತ್ತವೆ. ಈ ಹಸ್ತಪ್ರತಿಗಳನ್ನು ಉಪಯೋಗಿಸಿ ಹೊರಬರುವ ಪರಿಷ್ಕೃತ ಆವೃತ್ತಿಗಳಲ್ಲಿಯೂ ವಿಭಿನ್ನ ಪ್ರತಿಗಳ ಬಳಕೆಯಿಂದಾಗಿ, ವಿಭಿನ್ನ ಸ್ವೀಕೃತಿ ಪಾಠಗಳಿಂದಾಗಿ, ಪಾಠಾಂತರಗಳು ತಪ್ಪಿದ್ದಲ್ಲ. ಹಲವು ಬಗೆಯ ಪಾಠಾಂತರಗಳಲ್ಲಿ ಒಂದಾದ 'ಸಾಲು ಪಾಠಾಂತರ'ಗಳು ಕುಮಾರವ್ಯಾಸ ಭಾರತದ ಆದಿಪರ್ವದಲ್ಲಿ ವಿಪುಲವಾಗಿ ದೊರೆಯುತ್ತದೆ. ಎಲ್ಲಾ ಪಾಠಾಂತರಗಳನ್ನು ಇಲ್ಲಿ ಗುರುತಿಸುತ್ತ ಹೋಗುವುದು ಈ ಪ್ರಬಂಧದ ಎಲ್ಲೆಯನ್ನು ಮೀರಿಸುವುದಾಗಿರುವುದರಿಂದ ಕೆಲವೊಂದು ಮುಖ್ಯ ಸಾಲುಗಳನ್ನು ಮಾತ್ರಾ ಇಲ್ಲಿ ಉದಾಹರಿಸುತ್ತ ಹೋಗಬಹುದು.

ಅ) "ಹಗಲುಹಾವಸೆ ಹರೆದು ದೋಂಕರಿಸೆದುದು ಜಲಹಿಮವ"

(ಕು.ಭಾ.ಆದಿಪರ್ವ-5ನೆಸಂಧಿ-5ನೆ ಪದ್ಯ)

ಇದಕ್ಕೆ ಹಲವು ಭಿನ್ನ ಪಾಠಗಳನ್ನು ಗುರುತಿಸಬಹುದು ಅವೆಂದರೆ:-

ಅ) ಹಗಲು ಹಾವಸೆ ತಿಳಲು ಗೊಂಡುದು ಬಯಸಿ ಹಿಮಜಲವ (ಓ)

ಆ) ಹಂಸೆಯ ನೆಳಲುಗೊಂಡವು ಬಯಸಿ ಮಹಿಜಲವ (ನ)

ಇ) ಹಾವಸೆ ಹರಿದು ಹೊಕ್ಕರಿಸಿದು ದುರುಳ ಮಹಿಯ (ರ)

ಈ) ಹಗಲು ಹಾವಸೆ ಹರಿದು ಹೊಕ್ಕರಿಸಿದುದು ಹಿಮಜಲವ (ಕುಮಾ,ತ)

'ನ' ಮತ್ತು 'ರ' ಪ್ರತಿಯಲ್ಲಿನ ಪಾಠಗಳನ್ನು 'ಕಅಸಂ' ಪ್ರತಿಯಲ್ಲಿ ಉಲ್ಲೇಖಿಸಿರುವ ಪಾಠಾಂತರವಾಗಿದೆ. ಎಂ.ವಿ.ಸೀ ಸಂಪಾದಿತ 'ಪ್ರ' ಪ್ರತಿಯಲ್ಲಿ 'ಕಅಸಂ' ಪ್ರತಿಯ ಪಾಠವೇ ಬಂದಿದೆ. 'ಕುಮಾ' ಮತ್ತು 'ತ' ಪ್ರತಿಗಳಲ್ಲಿನ ಪಾಠ ಅಲ್ಪ ವ್ಯತ್ಯಾಸವಿದ್ದರೂ ಆಧಾರ ಪ್ರತಿಯ (ಕಅಸಂ) ಪಾಠವನ್ನು ಹೋಲುತ್ತದೆ. ಕೊನೆಯ ಪದ 'ಜಲಹಿಮವ' ಎಂಬುದು ಎಲ್ಲಾ ಪ್ರತಿಯಲ್ಲೂ ಅದಲು ಬದಲಾಗಿದೆ. ಆದರೆ 'ಪ್ರ' ಪ್ರತಿಯಲ್ಲಿ 'ಜಲಹಿಮವ'ಎಂದೇ ಬಂದಿದೆ. 'ಜಲಹಿಮವ' ಎಂಬುದು 'ಹಿಮಜಲವ' ಎಂದು ಬದಲಾಗಿರುವುದರಿಂದ ಅರ್ಥವೇ ಬದಲಾಗಿದೆ.

ಇದೇ ಪದ್ಯದ ಮೂರನೆ ಸಾಲು

(ಕು.ಭಾ.ಆದಿಪರ್ವ 5ನೆ ಸಂಧಿ-5ನೆ ಪದ್ಯದ ಸಾಲು)

ಆ) "ಸೆಗಳಿಕೆಗಳಡಗಿದವು ತಂಗಾ"

(ಕು.ಭಾ.ಆದಿಪರ್ವ5ನೆ ಸಂಧಿ-5ನೆ ಪದ್ಯ)

ಇದಕ್ಕಿರುವ ಪಾಠಾಂತರಗಳನ್ನು ಈ ರೀತಿ ಗುರುತಿಸಬಹುದು:

ಅ) ಸೆಗಳಿಕೆಗಳೆರೆದವು ತುಂಗಾ (ಪ್ರ)

ಆ) ಗಳೇರದವುತಂ ('ಫ'–'ಓ' ಪ್ರತಿಯಲ್ಲಿ ಉಲ್ಲೇಖಿಸಿರುವ ಪ್ರತಿ)

ಇ) ಸೆಗಳಿಕೆಗಳಗ್ಗಳಿಸೆ ತಂಗಾ (ಓ)

ಈ) ಸೆಗಳಿಕೆಗಳೇರಿದವು ತಂಗಾ (ಕುಮಾ, 'ತ')

ಇದಕ್ಕೆ ಸಂಬಂಧಿಸಿದಂತೆ 'ಕಅಸಂ' ಪ್ರತಿಯಲ್ಲಿ ಕೆಲವೊಂದು ಭಿನ್ನ ಪಾಠಗಳನ್ನು ನೀಡಲಾಗಿದೆ ಅವೆಂದರೆ:–

ಅ) ಕೆಗಳಿರಿಸಿದವು (ಬ)

ಆ) ಕೆಗಳಿಕ್ಕಿದವು (ದ)

ಇ) ಗೆಗಳಗ್ಗಳನೆ (ನ)

ಇದರಲ್ಲಿ ಎಲ್ಲಾ ಪ್ರತಿಗಳಲ್ಲಿಯೂ 'ತಂಗಾ' ಎಂಬ ಪದವೇ ಬಂದಿದೆ. ಆದರೆ ಎಂ.ವಿ.ಸೀ. ಸಂಪಾದಿತ ಕೃತಿಯಲ್ಲಿ ಮಾತ್ರ 'ತುಂಗಾ' ಎಂದಾಗಿದೆ. ಇದು ಯಾವ ಪ್ರತಿಯಿಂದ ಸ್ವೀಕರಿಸಲಾಗಿದೆ ಎಂಬುದು ತಿಳಿದು ಬರುವುದಿಲ್ಲ. 'ಸೆಗಳಿಕೆಗಳೇ ದವು' ಎಂಬ ಪಾಠದ ಪ್ರಾರಂಭ ಅಕ್ಷರ 'ಸೆ'ಎಂಬುದು 'ಕುಮಾ', 'ಓ', 'ತ', 'ಪ್ರ', ಪ್ರತಿಗಳಲ್ಲಿ ಒಂದೇ ರೀತಿಯಿದೆ. ಉಳಿದ ಪ್ರತಿಗಳಲ್ಲಿ 'ಕ' ಮತ್ತು 'ಗ' ದಿಂದ ಪ್ರಾರಂಭವಾಗಿರುವುದನ್ನು ನೋಡಬಹುದು. ಉಳಿದಂತೆ ಸಂಪೂರ್ಣ ವ್ಯತ್ಯಾಸವಿದೆ. ಅಕ್ಷರಭ್ರಾಂತಿ, ಅಕ್ಷರಗಳ ಪುನರೋಕ್ತಿಗಳಿಂದ ಪಾಠ ಕೆಟ್ಟಿರುವಂತೆ ತೋರುತ್ತದೆ.

ಅದೇ ರೀತಿಯಾಗಿ ಮತ್ತೊಂದು ಸಾಲು ಪಾಠಾಂತರ

ಆ) "ರಾಗಿಗಳಗಳಗಾಣವೆಗ್ಗಳ"

(ಕು.ಭಾ.ಆದಿಪರ್ವ–5ನೆ ಸಂಧಿ–6ನೆ ಪದ್ಯ)

ಇದು ಪದ್ಯದ 4ನೆ ಸಾಲಾಗಿದ್ದು ಇದಕ್ಕಿರುವ ಭಿನ್ನಪಾಠಾಂತರಗಳು ಈ ಕೆಳಗಿನಂತಿವೆ.

ಅ) ಗೂಗೆಗಳ ನಖಸಾಳವಗ್ಗದ (ಕುಮಾ, ತ)

ಆ) ರಾಗಿಗಳ ಗಳನಾಳವಗ್ಗದ (ಓ)

'ಕಅಸಂ' ಪ್ರತಿಯಲ್ಲಿ ಕೆಲವೊಂದು ಪಾಠಾಂತರಗಳನ್ನು ನೀಡಲಾಗಿದೆ ಅವೆಂದರೆ:-

ಇ) ಗೂಗೆಗಳ ನಖಸಾಳ್ವನಗ್ಗದ (ಕ,ಬ)

ಈ) ಗೂಗೆ ರಾಗಿಗಳ ನಾಗವಗ್ಗದ (ದ)

ಉ) ಗಳಿಗರಿ ಸಾಳ್ವನಗ್ಗದ (ರ)

'ಓ' ಓರಿಯಂಟಲ್ ಲೈಬ್ರರಿಯ ಪ್ರತಿಯಲ್ಲಿನ ಪಾಠ ಮಾತ್ರ 'ಕಅಸಂ' ಪ್ರತಿಯ ಪಾಠಕ್ಕೆ ಸ್ವಲ್ಪ ಹತ್ತಿರವಾಗಿದೆ. ಇದು ಅಕ್ಷರಭ್ರಾಂತಿಯಿಂದ ಆಗಿರುವ ಭಿನ್ನತೆಯಿರಬಹುದು. 'ವೆಗ್ಗಳ' ಎಂಬುದು ಸ್ವಲ್ಪವೇ ವ್ಯತ್ಯಾಸದಿಂದ 'ವಗ್ಗದ' ಎಂದಾಗಿದೆ. ಇದು ಉಚ್ಚಾರಣೆಯ ಅಸ್ಪಷ್ಟತೆಯಿಂದ ಕಿವಿತಪ್ಪು ಅಥವಾ ಬಾಯಿತಪ್ಪಿನಿಂದ ಉಂಟಾಗಿರುವ ಪಾಠಾಂತರವಿರಬಹುದು. 'ಕುಮಾ', 'ತ', ಹಾಗೂ ಇತರ ಪ್ರತಿಗಳಲ್ಲಿನ ಪಾಠಗಳು ಸಂಪೂರ್ಣವಾಗಿ ಭಿನ್ನವಾಗಿದೆ.

ಈ) "ಆಳಿನೇ೭ಕೆ 'ಹಿಡಿಗವಡೆಗುರೆ
ಯಾಳು ಚೆಂಡಿನ' --------
(ಕು.ಭಾ.ಆದಿಪರ್ವ-6ನೆಸಂಧಿ-1ನೆಪದ್ಯ-6ನೆ ಸಾಲು)

ಇದಕ್ಕೆ 'ಓ' ಪ್ರತಿಯಲ್ಲಿ ಮಾತ್ರ ಪಾಠಾಂತರ ದೊರೆಯುತ್ತದೆ.

ಅ) ಕವಡೆ ಮುಷ್ಟಿಯ ಮೇಲುಗುರೆಯಾಟದಲಿ (ಓ)

ಈ ಪಾಠ ಸಂಪೂರ್ಣವಾಗಿ ಭಿನ್ನವಾಗಿದೆ. 'ಗವಡೆ' ಎಂಬುದು ಪ್ರಾರಂಭದ ಪದವಾಗಿ 'ಕವಡೆ' ಎಂದು ಬಂದಿದೆ. ಎರಡಕ್ಕೂ ಒಂದೇ ಅರ್ಥ ಬರುವುದಾದರೂ ಮುಂದಿನ ಪದಗಳು ಬೇರೆಯಾಗಿವೆ. ಆದರೆ ಪಾಠ ಆಟದ ವರ್ಣನೆಯನ್ನೆ ಹೇಳುತ್ತದೆ.

'ಕಅಸಂ' ಪ್ರತಿಯಲ್ಲಿ ಮತ್ತೊಂದು ಪಾಠವನ್ನು ಉಲ್ಲೇಖಿಸಲಾಗಿದೆ. ಅದೆಂದರೆ:-

ಆ) ಜೋಡಿನ ಕೋಲು ಚಿಣ್‌ಚೆಂಡುಗಳದಂಡೆಯ

ಹಾರುಗಾತ್ತುಗಳ (ನ)

ಇದು ಸಹ ಸಂಪೂರ್ಣ ಭಿನ್ನವಾಗಿದೆ. ಬಹುಶಃ ಇಲ್ಲಿ ಲಿಪಿಕಾರ ಕವಿ ಪಾಠದೊಂದಿಗೆ ತನಗೆ ತಿಳಿದ 'ಆಟ'ಗಳನ್ನು ಸೇರಿಸಿರಬಹುದು. ಇದು ಉದ್ದೇಶಪೂರ್ವಕವಾಗಿ ಮಾಡಿದ ಬದಲಾವಣೆಯಾಗಿದೆ.

ಇದೇ ರೀತಿ 'ಆಟ'ವನ್ನು ವರ್ಣಿಸುವ ಮತ್ತೊಂದು ಪದ್ಯದ ಸಾಲು ಈರೀತಿ ಇದೆ.

ಉ) "ಕಡೆಗೆ ಕಣ್ಣುಚ್ಚಸವಗಡೆ ಹರಿಲಗ್ಗೆನಿಡುಗವಣೆ".

(ಕು.ಭಾ.ಆದಿಪರ್ವ-6ನೆ ಸಂಧಿ,2ನೆ ಪದ್ಯ-3ನೆ ಸಾಲು)

ಇದಕ್ಕಿರುವ ಭಿನ್ನ ಪಾಠಗಳು:-

ಅ) ಗಡಣೆ ಕಣುಮುಚ್ಚಾಟ ಸವಗಲಿಹಲ್ಲೆಯಾಟಗಳ (ಓ)

ಆ) ಕಡೆಗೆ ಕಣ್ಣುಚ್ಚಸಗವರಿ ಹರಿಲಗೆ ನಿಡುಗವಣೆ (ಪ್ರ)

'ಕುಮಾ', 'ತ', ಪ್ರತಿಗಳಲ್ಲಿನ ಪಾಠ ಆಧಾರ ಪ್ರತಿಯ (ಕಅಸಂ) ಪಾಠವೇ ಇದೆ.

'ಪ್ರ' ಪ್ರತಿಯಲ್ಲಿ ಎಂ.ವಿ.ಸೀ.ಯವರೇ ಹೇಳಿಕೊಂಡಿರುವಂತೆ 'ಕುಮಾ' ಪ್ರತಿಯಲ್ಲಿರುವ ಪಾಠವೇ ಸ್ವೀಕೃತ ಪಾಠವಾಗಿದೆ. 'ತ' ಪ್ರತಿಯಲ್ಲಿ 'ಕುಮಾ'ಪ್ರತಿಯಲ್ಲಿರುವ ಎಲ್ಲಾ ಪದ್ಯಗಳಲ್ಲದಿದ್ದರೂ, ಪಾಠಗಳು ಮಾತ್ರ ತೊಂಭತ್ತೊಂಬತು ಭಾಗ 'ಕುಮಾ' ಪ್ರತಿಯ ಪಾಠವೇ ಆಗಿದೆ.

ಮೇಲಿನ ಪಾಠಾಂತರಕ್ಕೆ ಸಂಬಂಧಿಸಿ ಹೇಳುವುದಾದರೆ 'ಕಅಸಂ' ಪ್ರತಿಯ ಪಾಠವನ್ನು 'ಪ್ರ' ಪ್ರತಿಯ ಪಾಠ ಹೋಲುತ್ತದೆ. 'ಸವಗರಿ' ಎಂಬಲ್ಲಿ 'ಸವಗಡೆ' ಎಂದಾಗಿದೆ. ಒಂದೇ ಒಂದು ಅಕ್ಷರ ಮಾತ್ರ ಇಲ್ಲಿ ಭಿನ್ನವಾಗಿದೆ. 'ಓ' ಪ್ರತಿಯಲ್ಲಿನ ಪಾಠ ಸಂಪೂರ್ಣವಾಗಿ ಭಿನ್ನವಾಗಿದೆ. ಆದರೂ 'ಪ್ರ' (ಎಂ.ವಿ.ಸೀ) ಪ್ರತಿಯ ಪಾಠವನ್ನು ಹೋಲುತ್ತದೆ. ಪಾಠವನ್ನು ಸ್ವಲ್ಪ ಬಿಡಿಸಿ ಬರೆದಂತಿದೆ ಎನಿಸುತ್ತದೆ. (ಕಣ್ಣುಚ್ಚ-ಕಣುಮುಚ್ಚಾಟ) ಅದೇ ರೀತಿ ಹೊಸ ಪದಗಳು ಸೇರಿರುವಂತೆಯೂ ಇದೆ.

ಊ)"ವಾಕುಮಾರರು ತಮ್ಮೊಳೊಂದಿಹರೈದೆಗೆಣೆಯಾಗಿ"

(ಕ-ಆದಿಪರ್ವ-6ನೆ ಸಂಧಿ-7ನೆ ಪದ್ಯ-ಕೊನೆಯ ಸಾಲು)

ಇದಕ್ಕಿರುವ ಪಾಠಾಂತರಗಳು ಈ ಕೆಳಗಿನಂತೆ ಗುರುತಿಸಬಹುದು.

ಅ) ವಾಕುಮಾರರು ತಮ್ಮೊಳೊಂದಾಗಿ ಹರುಗೆಳೆಯಾಗಿ (ಪ್ರ)

ಆ) ವಾಕುಮಾರರು ತಮ್ಮೊಳೊಂದಹರೊಂದು ನಿಮಿಷದಲ್ಲಿ (ಓ, ಕುಮಾ, ತ)

ಮೂರು ಪ್ರತಿಗಳಲ್ಲಿಯೂ ಒಂದೇ ರೀತಿಯ ಪಾಠವಿದೆ. 'ಗೆಣೆಯಾಗಿ' ಪದಕ್ಕೆ ಬದಲಾಗಿ 'ಪ್ರ' ಪ್ರತಿಯಲ್ಲಿ 'ಗೆಳೆಯಾಗಿ' ಎಂಬ ಪಾಠ ಬಂದಿದೆ. ಆದರೆ ಅರ್ಥದ ದೃಷ್ಟಿಯಿಂದ 'ಕಅಸಂ' ಪ್ರತಿಯ ಪಾಠವೇ ಸರಿ. ಆದರೆ ಉಳಿದ ಪ್ರತಿಗಳಲ್ಲಿ 'ನಿಮಿಷ'ದಲ್ಲಿ ಎಂಬ ಪಾಠವಿದೆ. ಇದು ಅರ್ಥ ಹೊಂದಾಣಿಕೆಯಾಗದಿರುವುದರಿಂದ ಸ್ಖಾಲಿತ್ಯವೆಂದು ಸ್ಪಷ್ಟವಾಗುತ್ತದೆ.

ಋ) "ಕುಡಿಸಿದಲ್ಲದೆ ಮುನ್ನಸಾಯೆನು ಕೇಳಿನೀವೆಂದ"

(ಕು.ಭಾ.ಆದಿಪರ್ವ-6ನೆ ಸಂಧಿ 15ನೆ ಪದ್ಯ 6ನೆ ಸಾಲು)

ಪಾಠಾಂತರಗಳು:–

ಅ) ಕುಡಿಸಿದಲ್ಲದೆ ಮುನ್ನ ಸಾವೆನೆ (ಎಂದನಾ ಭೀಮ) (ಪ್ರ)

ಆ) ಮುನ್ನ ಸಾವೆನೆ ಕೇಳಿ ನೀವೆಂದ (ತ, ಕುಮಾ)

ಇ) ಮುನ್ನ ಸಾಯೆನು ಸಾಕು ಬಡಿಯೆಂದ (ಬ,ರ, ಕ, ಪ್ರತಿಯಲ್ಲಿ ಉಲ್ಲೇಖಿತ ಪ್ರತಿಗಳು)

'ಕಅಸಂ' ಪ್ರತಿಯ ಪಾಠವನ್ನು 'ಪ್ರ' ಪ್ರತಿಯ ಪಾಠ ಹೋಲುತ್ತದೆ. 'ಸಾವೆನು' ಬದಲಾಗಿ 'ಸಾಯೆನು' ಎಂಬ ಒಂದಕ್ಷರದ ಬದಲಾವಣೆಯಿದೆ. ಇದು ಬಹುಶ: ಕಣ್ಣು ತಪ್ಪಿರಬಹುದು ಅಥವಾ ಬರೆಯುವ ಆತುರದಲ್ಲಿ 'ವೆ'–'ಯೆ' ಆಗಿರಬಹುದು. ಆದರೆ ಅರ್ಥಕ್ಕೆ ಮಾತ್ರ ಇಲ್ಲಿ ಕುಂದಿಲ್ಲ. ಉಳಿದ ಪ್ರತಿಗಳ ಪಾಠದಲ್ಲಿಯೂ ಅಷ್ಟೇ ಯಾವುದೇ ಅರ್ಥ ಬದಲಾವಣೆಯಾಗುವುದಿಲ್ಲ.

ಎಂ.ವಿ.ಸೀ. ಸಂಪಾದಿತ 'ಪ್ರ' ಪ್ರತಿಯಲ್ಲಿ 'ಎಂದನಾ ಭೀಮ' ಎಂಬ ಉಲ್ಲೇಖವಿದೆ. ಇದು ಯಾವುದೇ ಪ್ರತಿಯಲ್ಲೂ ಕಾಣಬರುವುದಿಲ್ಲ. ಬದಲಿಗೆ 'ಕೇಳಿ ನೀವೆಂದ' ಎಂಬ ಪಾಠವಿದೆ. ಇಲ್ಲೂ ಅರ್ಥ ಬದಲಾವಣೆಯಾಗುವುದಿಲ್ಲ. ಆದರೆ 'ಎಂದನಾಭೀಮ' ಎಂದಾಗ ಭೀಮನೇ ಹೇಳುತ್ತಿರುವುದೆಂದು ಸ್ಪಷ್ಟತೆ ದೊರೆಯುತ್ತದೆ. 'ಬ', 'ರ', ಪ್ರತಿಗಳಲ್ಲಿನ 'ಸಾಕು ಬಿಡಿಯೆಂದ' ಎಂಬುದು 'ಕಅಸಂ' ಪ್ರತಿಯಲ್ಲಿ ವರ್ಜಿತ ಪಾಠವಾಗಿದೆ. ಕಾರಣ ಇದು ತಪ್ಪುಪಾಠವೆಂದು ಸ್ಪಷ್ಟವಾಗಿ ತಿಳಿಯುತ್ತದೆ.

ಎ) 'ಗಳಿಕೆ ಹಾಯ್ದುದು ಜನನಿಜನಕರ'

(ಕಅಸಂ–ಆದಿಪರ್ವ 6ನೆ ಸಂಧಿ–16ನೆ ಪದ್ಯ 2ನೇ ಸಾಲು)

ಇದಕ್ಕೆ ಇದೇ ಪ್ರತಿಯಲ್ಲಿ (ಕಅಸಂ) ಎರಡು ಭಿನ್ನ ಪಾಠಾಂತರಗಳನ್ನು ಉಲ್ಲೇಖಿಸಿದ್ದಾರೆ. ಅದೆಂದರೆ:-

ಅ) ನೆಲೆಗೆ ಬಂದುದು ಎನುತ ಭೀಷ್ಮನು (ನ)

ಆ) ಗಳಿಕೆ ಹಾಯ್ದುದು ಭೀಷ್ಮ ವಿದುರರ (ಬ, ರ)

ಎರಡನೇ ಪಾಠಾಂತರದ ಮೊದಲ ಪದ 'ಗಳಿಕೆ'ಎಂಬುದು ಆಧಾರ ಪ್ರತಿಯಲ್ಲಿನ ಪಾಠವೇ ಆಗಿದೆ. 'ಭೀಷ್ಮ' ಎಂಬ ಪಾಠ ಉಳಿದ ಎರಡು ಪ್ರತಿಗಳಲ್ಲೂ ಇಲ್ಲದ ಪಾಠವಾಗಿದೆ. ಆದರೆ ಇದು ವರ್ಜಿತ ಪಾಠ. 'ಕುಮಾ', 'ತ', 'ಓ', 'ಪ್ರ', ಪ್ರತಿಗಳಲ್ಲಿ ಪಾಠಾಂತರವಿಲ್ಲ. ಆಧಾರ ಪ್ರತಿಯ ಪಾಠವೇ ಬಂದಿದೆ.

ಏ) "ನೂಟ ಮುಂದಿಹುದೆಂದು ಕರಿಕರಿಗುಂದಿದನುಭೀಷ"

(ಕು.ಭಾ.ಆದಿಪರ್ವ-6ನೆ ಸಂಧಿ-35ನೇ ಪದ್ಯ-6ನೇ ಸಾಲು)

ಇದಕ್ಕಿರುವ ಪಾಠಾಂತರಗಳೆಂದರೆ:-

ಅ) ನೂಟ ಮುಂದಿಹುದೆನುತ ಮನದಲಿ ಭೀಷ್ಮ ಚಿಂತಿಸಿದ (ಓ)

ಆ) ನೂಟ ಮುಂದಿಹುದೆಂದು ಕರೆಕರೆಗುಂದಿದನು ಭೀಷ್ಮ (ತ,ಕುಮಾ)

ಇ) ನೂಟ ಮುಂದಿಹುದೆಂದು ಕ(ಿ) ಕ ಗುಂದಿದನು ಭೀಷ್ಮ (ಪ್ರ)

ಮೇಲಿನ ಭಿನ್ನ ಪಾಠಗಳಲ್ಲಿ 'ತ' 'ಕುಮಾ', 'ಪ್ರ' ಪ್ರತಿಗಳಲ್ಲಿ ಪಾಠಗಳು 'ಕಅಸಂ' ಪ್ರತಿಯ ಪಾಠಕ್ಕೆ ಹತ್ತಿರವಾಗಿದೆ. 'ಮುಂದಿಹುದೆಂದು' ಎಂಬುದಕ್ಕೆ ಬದಲಾಗಿ ಮೂರರಲ್ಲಿಯೂ 'ಮುಂದಿಹುದೆನುತ' ಎಂದು ಬಂದಿದೆ. 'ಓ' ಪ್ರತಿಯಲ್ಲಿಯೂ ಇದೆ ಪಾಠವಿದೆ. 'ಕರಿಕರಿಗುಂದಿದನು' ಎಂಬುದು 'ಓ' ಪ್ರತಿಯಲ್ಲಿ ಇಲ್ಲವೇ ಇಲ್ಲ. ಇಡೀ ಪಾಠವೇ ಸಂಪೂರ್ಣವಾಗಿ ಭಿನ್ನವಾಗಿದೆ. ಆದರೆ ಪದದ ಅರ್ಥ ಮಾತ್ರ ಇದಕ್ಕೆ ಹೊಂದಿಕೆಯಾಗುವಂತಿದೆ.

ಎಂ.ವಿ.ಸೀ.ಯವರು ಸ್ವೀಕರಿಸುವ ಶಕಟರೇಫದ ಪಾಠ ಉಳಿದ ಮೂರರ ಪ್ರತಿಯಲ್ಲೂ ಇಲ್ಲ. ಒಂದರಲ್ಲಿ 'ರಿ' ಇದ್ದರೆ ಮತ್ತೊಂದರಲ್ಲಿ 'ರೆ' ಬಂದಿದೆ. ಪಾಠಾಂತರ ಸ್ವೀಕಾರದಲ್ಲಿ 'ಪ್ರಾಚೀನತೆ'ಯನ್ನು ಗಮನದಲ್ಲಿಸಿರಿ ಸ್ವೀಕರಿಸಬೇಕಾದದ್ದು ಒಂದು ಪ್ರಮುಖ ಅಂಶ. ಈ ದೃಷ್ಟಿಯಿಂದ 'ಱ'ದ ಬಳಕೆ ಸರಿಯಾದ ಪಾಠವೆನಿಸುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ಅಂಶವೆಂದರೆ ಕುಮಾರವ್ಯಾಸನ ಕಾಲ 15ನೇ ಶತಮಾನದ ವೇಳೆಗಾಗಲೇ ಶಕಟರೇಫದ (ಱ) ಬಳಕೆ ನಿಂತುಹೋಗಿತ್ತು. ನಡುಗನ್ನಡದಲ್ಲಿ 'ಱ'ಗೆ ಬದಲಾಗಿ 'ರ'ದ ಬಳಕೆಯಿತ್ತು. ಈ ದೃಷ್ಟಿಯಿಂದ 'ಇತರ ಪ್ರತಿಗಳ' ಹಾಗೂ 'ಆಧಾರಪ್ರತಿ'ಯ ಪಾಠವೇ ಸರಿ ಎನಿಸುತ್ತದೆ. ಎಂ.ವಿ.ಸೀ.ಪ್ರತಿಯ ಪಾಠ ವರ್ಜಿತವಾಗುತ್ತದೆ.

'ಶೈಲಿ' ಮತ್ತು 'ಭಾಷೆ' ಭಾಷಾರೂಪಗಳು ಸಹ 'ಪಾಠ ಪರಿಷ್ಕರಣೆಗೆ' 'ಶುದ್ಧಪಾಠ' ನಿರ್ಣಯಕ್ಕೆ ಗಮನಿಸಲೇಬೇಕಾದ ಅಂಶಗಳು. ಕನ್ನಡಅಧ್ಯಯನಸಂಸ್ಥೆಯಪ್ರತಿ, ಓರಿಯಂಟಲ್‌ಲೈಬ್ರರಿಯಪ್ರತಿ, ತ.ಸು.ಶಾಮರಾಯರಸಂಪಾದಕತ್ವದ ಪ್ರತಿಗಳು ಎಂ.ವಿ.ಸೀ.ಸಂಪಾದಕತ್ವದ ಪ್ರತಿಗಿಂತಲೂ ಪ್ರಾಚೀನವು ಆದರೂ 'ರ'ವನ್ನು ಸ್ವೀಕರಿಸಿದೆ. ಆದರೆ ಆರ್ವಾಚೀನ ಪ್ರತಿಯಾದ 'ಪ್ರ' ಪ್ರತಿ ಮಾತ್ರ 'ಱ'ವನ್ನು ಸ್ವೀಕರಿಸಿದೆ.

ಐ) "ವಾಯುವಾದರೆ ಬಂದನಿಭಪುರಿಗಾಗಿ ಕಲಿಕರ್ಣ"

(ಕು.ಭಾ.ಆದಿಪರ್ವ-6ನೇ ಸಂಧಿ-42ನೆ ಪದ್ಯ-6ನೆ ಸಾಲು)

ಇದಕ್ಕಿರುವ ಭಿನ್ನಪಾಠಗಳೆಂದರೆ:-

ಅ) ವಾಯುವಾದೊಡೆ ಬಂದನಾ ಗಜಪುರಿಗೆ ಕಲಿಕರ್ಣ (ಪ್ರ,ಕುಮಾ,ತ)

ಆ) ವಾಯು ಗಂಡವು ಹಿಂದೆ ಮೂವತ್ತಾಱವತ್ಯರವು

'ಕುಮಾ', 'ತ', ಹಾಗೂ 'ಪ್ರ' (ಎಂ.ವಿ.ಸೀ) ಪ್ರತಿಗಳಲ್ಲಿ ಪಾಠಭಿನ್ನತೆಯಿಲ್ಲ. ಆದರೆ 'ಕಅಸಂ' ಪ್ರತಿಯ 'ಗಜಪುರಿಗೆ' ಎಂಬ ಪಾಠಕ್ಕೆ ಬದಲಾಗಿ 'ನಿಭಪುರಿಗಾಗಿ' ಎಂದು ಬಂದಿದೆ. ಆದರೆ ಇಲ್ಲಿ ಮೂಲಭೂತ ವ್ಯತ್ಯಾಸವೇನು ಇಲ್ಲ. ಗಜಪುರಿಯೆಂದರೂ ಹಸ್ತಿನಾಪುರವೇ, ಇಭ(ಗಜ) ಎಂದರೂ ಹಸ್ತಿನಾಪುರವೇ ಆಗಿದೆ. ಕೂಡಿಸಿ ಬರೆಯುವಾಗ ಮಾತ್ರ 'ಇಭಪುರ' ಎಂಬುದು 'ನಿಭ'ಪುರವಾಗಿದೆ.

ಒ) "ಬಯಸುವರು ಹಾರುವರೆಂದ ಮಾತುಗಳ"

(ಕು.ಭಾ.ಆದಿಪರ್ವ–7ನೆ ಸಂಧಿ,10ನೆ ಪದ್ಯ 2ನೆ ಸಾಲು)

ಇದಕ್ಕಿರುವ ಪಾಠಾಂತರಗಳೆಂದರೆ:–

ಅ) ಬಯಸುವರು ದೂರುವರೆಮ್ಮನವರುಗಳ (ಪ್ರ)

ಆ) ಹಾರುವರು ಹಾರುವರೆಂಬರವರುಗಳ (ದ)

ಇ) ಹಾರುವರು ಬಗೆಯರು ನಮ್ಮನವರುಗಳ (ಬ)

ಮೇಲಿನ ಪಾಠಾಂತರಗಳಲ್ಲಿ 'ದೂ ವ' ಎಂಬುದು. 'ಎಂ.ವಿ.ಸೀ.ಯವರ 'ಪ್ರ' ಪ್ರತಿಯಲ್ಲಿ ಮಾತ್ರ. 'ಹಾರುವ' ಎಂಬ ಪದಕ್ಕೆ ಬದಲಾಗಿ ಬಂದಿದೆ. ಬಹುಶ: ಇದು ಬರೆಯುವಾಗ ಆಗಿರುವ ವ್ಯತ್ಯಾಸವಿರಬಹುದು. 'ದೂ' ಎಂಬುದು 'ಹಾ' ಎಂದು ಕೈತಪ್ಪಿನಿಂದಾಗಿರುವ ಪಾಠಾಂತರವಾಗಿದೆ. ಇಲ್ಲೂ ಸಹ 'ಎಂ.ವಿ.ಸೀ'ಯವರು 'ದೂರುವ' ಎಂಬಲ್ಲಿ (ಱ) ಶಕಟರೇಫದ ಪಾಠವನ್ನೇ ಸ್ವೀಕರಿಸಿದ್ದಾರೆ. ಕುಮಾರವ್ಯಾಸನ ಕಾಲದ ಭಾಷಾ ಸ್ವರೂಪದ ದೃಷ್ಟಿಯಿಂದ 'ಕಅಸಂ' ಪ್ರತಿಯ ಪಾಠವೇ ಸರಿಯೆನಿಸುತ್ತದೆ.

ಓ) "ದಳವನ ಯಾ ಭಾರವಿದು ಮೇಲೆಂದನಾಶಕುನಿ"

(ಕು.ಭಾ.ಆದಿಪರ್ವ.7ನೆ ಸಂಧಿ–17ನೆ ಪದ್ಯ ಕೊನೆಸಾಲು)

ಇದಕ್ಕಿರುವ ಪಾಠಾಂತರಗಳು:-

ಅ) ದಳವನ್ಸೂದ ದ ಯದುದರಿ ಮರೂಲಹರೆ ಎಂದ (ಪ್ರ)

ಆ) ದಳವನರುಯಾ ಭಾರರೆ ಮೇಲೆಂದನಾ ಶಕುನಿ (ಕುಮಾ)

ಇ) ದಳಿ ವನಱೆಯಾ ಕಂಡ ಕಾಣದೆ ಮುರುಳಹರೆಯೆಂದ (ಓ)

ಇಲ್ಲಿ 'ಓ' ಪ್ರತಿಯ ಪಾಠ ಮತ್ತು 'ಪ್ರ' ಪ್ರತಿಯ ಪಾಠಕ್ಕೆ ಸಾಮ್ಯವಿದೆ. 'ಕಅಸಂ'(ಆಧಾರಪ್ರತಿ) ಪ್ರತಿ ಹಾಗೂ 'ಕುಮಾ' ಪ್ರತಿಯ ಪಾಠಕ್ಕೆ ಸಾಮ್ಯವಿದೆ. ಎಂ.ವಿ.ಸೀ. ಸಂಪಾದಿತ 'ಪ್ರ' ಪ್ರತಿಯಲ್ಲಿ 'ದ ' ಎಂಬ ದ್ವಿರುಕ್ತಿ ಉಳಿದ ಯಾವ ಪ್ರತಿಯಲ್ಲೂ ಇಲ್ಲ. ಆದರೆ ಶಕಟ ರೇಫದ ಬಳಕೆ 'ಕುಮಾ' ಪ್ರತಿಯಲ್ಲಿ ಬಿಟ್ಟು ಎಲ್ಲಾ ಪ್ರತಿಗಳಲ್ಲೂ ಬಳಕೆಯಾಗಿದೆ. ಹಿಂದಿನ ಪದ್ಯಗಳಲ್ಲಿ (7ನೆ ಸಂಧಿ-10ನೆ ಪದ್ಯ, 6ನೇ ಸಂಧಿ, 35ನೇ ಪದ್ಯ) ನೀಡಿದ ಸಮರ್ಥನೆಯ ಪ್ರಕಾರ ರೇಫವನ್ನು ಬಿಟ್ಟಿದ್ದೆ ಆದರೆ 'ಕುಮಾ' ಪ್ರತಿಯ ಪಾಠ ಮಾತ್ರ ಉತ್ತಮ ಪಾಠವಾಗುತ್ತದೆ.

ಈ ರೀತಿ ಮೇಲ್ಕಂಡ ಹಲವು ಪದ್ಯಗಳಲ್ಲಿನ ಸಾಲುಗಳ ಪಾಠಾಂತರವನ್ನು ವಿಶ್ಲೇಷಿಸಬಹುದಾಗಿದೆ. "(1)ಲಿಪಿಕಾರನಿಗೆ ಲಿಪಿಜ್ಞಾನ, ಪದಜ್ಞಾನ ಇಲ್ಲದಿದ್ದರೂ ತಪ್ಪುಗಳಾಗುತ್ತವೆ. ಹ್ರಸ್ವ-ದೀರ್ಘಗಳ ಗೊಂದಲದಿಂದ, ಅಲ್ಪಪ್ರಾಣ-ಮಹಾಪ್ರಾಣಗಳ ಜ್ಞಾನದ ಅಭಾವದಿಂದ, ಬಿಡಬೇಕಾದ ಹಾಗೂ ಸೇರಿಸಬೇಕಾದ ಭಾಗಗಳನ್ನು ಕೆಲವು ಸೂಚನೆಗಳ ಮೂಲಕ ತಿಳಿಸಿರುವುದನ್ನು ಸರಿಯಾಗಿ ಗಮನಿಸದಿರುವುದರಿಂದ ಪ್ರತಿಕಾರರು ತಪ್ಪು ಮಾಡುವುದುಂಟು" ಈ ತಪ್ಪುಗಳೇ ಪರಿಷ್ಕರಣೆಯಲ್ಲಿ ಯಾವ ಪಾಠ ಸ್ವೀಕರಿಸಬೇಕೆಂಬ ಗೊಂದಲದಲ್ಲಿ ಮುದ್ರಿತ ಪ್ರತಿಗಳಲ್ಲೂ ಭಿನ್ನಪಾಠಗಳು ಉಂಟಾಗುತ್ತದೆ. ಸಾಲು ಪಾಠಾಂತರಗಳಿಗೆ ಇನ್ನೂ ಕೆಲವು ಉದಾಹರಣೆಗಳನ್ನು ಈ ಕೆಳಗಿನಂತೆ ನೋಡಬಹುದು.

---

1) ಹಸ್ತಪ್ರತಿಶಾಸ್ತ್ರ ಪರಿಚಯ: ಬಿ.ಎಸ್.ಸಣ್ಣಯ್ಯ; ಬಿ.ಎಂ.ಶ್ರೀ. ಪ್ರತಿಷ್ಠಾನ ಬೆಂಗಳೂರು:1992 ಪುಟ ಸಂಖ್ಯೆ:71

ಔ) "ಹಿತವರ ಕಾಣೆ ನಾನೆಂದು ದುರ್ಯನರು"

(ಕು.ಭಾ.ಆದಿಪರ್ವ-8ನೆ ಸಂಧಿ,54ನೇ ಪದ್ಯ)

ಈ ಪದ್ಯದ ಪಾಠಾಂತರಗಳು:-

ಅ) ಹಿತವರ ಕಾಣೆ ನಾನಿನ್ನು ಸಮತದಿ (ಪ್ರ)

'ಕಅಸಂ' ಪ್ರತಿಯಲ್ಲಿ ಉಲ್ಲೇಖಿತ ಪಾಠಾಂತರಗಳು:-

ಆ) ಬಾಹವೆ ಕಾರ್ಯ ಹಾನಿಗಳು ದುರ್ಮರಹ (ದ)

ಇ) ಹಿತವರ ಕಾಣೆ ತಾನನ್ನು ಸಮ್ಮತದಿ (ರ)

'ಕಅಸಂ' ಪ್ರತಿ ಹಾಗೂ ಎಂ.ವಿ.ಸೀ.ಸಂಪಾದಿತ 'ಪ್ರ' ಪ್ರತಿಯಲ್ಲಿ ಪ್ರಾರಂಭದ ಎರಡು ಪದಗಳು ಒಂದೇಯಾಗಿದ್ದರು. 'ನಾನೆಂದೂ ದುರ್ಯನರು' ಎಂಬುದಕ್ಕೆ ಬದಲಾಗಿ 'ನಾನಿನ್ನು ಸಮ್ಮತದಿ' ಎಂದು ಬಂದಿದೆ. 'ರ' ಪ್ರತಿಯಲ್ಲಿ ಮಾತ್ರ 'ನಾನಿನ್ನು' ಎಂಬುದು 'ತಾನಿನ್ನು' ಎಂಬುದಾಗಿದೆ. ತಾ>ನಾ ವೇಗದ ಬರವಣಿಗೆ, ರೂಪ ಸಾದೃಶ್ಯದಿಂದ ಈ ಬದಲಾವಣೆಗೆ ಉಂಟಾಗಿರಬಹುದು.

ಅಂ) "ತುರಗರಥ ಭಂಡಾರವನು ದಾಯದ್ಯಮಾರ್ಗದಲಿ"

(ಕ.ಭಾ.ಆದಿಪರ್ವ-8ನೆ ಸಂಧಿ 63ನೆ ಪದ್ಯದ 3ನೇ ಸಾಲು)

ಈ ಪದ್ಯದ ಪಾಠಾಂತರಗಳು:-

ಅ) ತುರಗ ಭಂಡಾರವನು ಸಹದಾಯಾದ ವಿಷಯದಲಿ (ಕುಮಾ, ಓ, ತ)

ಆ) ತುರಗ ರಥ ಭಂಡಾರವನು ಸಮುದಾಯಭಾಗದಲಿ (ಪ್ರ)

ಈ ಪಾಠಾಂತರದಲ್ಲಿ 'ಕಅಸಂ' ಆಧಾರ ಪ್ರತಿಯನ್ನು ಎಂ.ವಿ.ಸೀ. ಸಂಪಾದಿತ 'ಪ್ರ' ಪಾಠವನ್ನು ಹೋಲುತ್ತದೆ. 'ಸಮುದಾಯ ಭಾಗದಲಿ' ಎಂಬುದು ಮಾತ್ರ 'ದಾಯದ್ಯ ಮಾರ್ಗದಲಿ' ಎಂದಾಗಿದೆ. ಇಲ್ಲಿ ಅರ್ಥಕ್ಕೆ ಯಾವುದೆ ಚ್ಯುತಿ ಇಲ್ಲ. ಇಂತಹ ಸ್ವಾಲಿತ್ಯ ಪಾಂಡಿತ್ಯ ಹೊಂದಿರುವ ಲಿಪಿಕಾರನಿಂದ ಮಾತ್ರ ಆಗಲು ಸಾಧ್ಯ.

ಕ) "ಅನಲ ಬಾಣವನುಗಿದಂತ್ತಲು"

(ಕು.ಭಾ.ಆದಿಪರ್ವ.11ನೇ ಸಂಧಿ 36ನೆ ಪದ್ಯ 6ನೆ ಸಾಲು)

ಇದಕ್ಕಿರುವ ಪಾಠಾಂತರಗಳು:–

ಅ) ಅನಲ ಬಾಣವತೆಗೆದನಿತ್ತಲು (ಓ)

ಆ) ಅನಲನನು ನಂದಿಸಿದನಿತ್ತಲು (ಪ್ರ)

'ಕಅಸಂ' ಪ್ರತಿಯಲ್ಲಿ ಉಲ್ಲೇಖಿತ ಪಾಠಗಳು:–

ಇ) ಅನನಿ ಬಾಣವ ತೆಗೆದನಿ (ದ)

ಈ) ಅನಲ ಮಂತ್ರವ ಜಪಿಸಲಿ (ರ)

ಮೇಲಿನ ಪಾಠಾಂತರಕ್ಕೆ ಸಂಬಂಧಿಸಿ ಹೇಳುವುದಾದರೆ ಎಲ್ಲಾ ಪ್ರತಿಯಲ್ಲು 'ಬಾಣವ' ಎಂಬ ಪಾಠ ಬಂದಿದೆ. 'ಪ್ರ' (ಎಂ.ವಿ.ಸೀ.ಸಂಪಾದಿತ) ಪ್ರತಿಯಲ್ಲಿ 'ನಂದಿಸಿದ' ಎಂಬ ಪದ ಬಂದಿದೆ. 'ರ' ಪ್ರತಿಯ ಪಾಠ ಮಾತ್ರ ಪೂರ್ತಿಯಾಗಿ ಕೆಟ್ಟಿದೆ.

ಖ) "ಬಾಳಿಯಲಿ ಸಮತಳಿಸಿದರು ವೈವಾಹಮಂಟಪವ"

(ಕ.ಭಾ.ಆದಿಪರ್ವ–16ನೆ ಸಂಧಿ 12ನೆ ಪದ್ಯ, 6ನೆ ಸಾಲು)

ಮೇಲಿನ ಪಾಠದಲ್ಲಿ ಅಕ್ಷರಗಳ ಸಾಮ್ಯದಿಂದ ಉಂಟಾದ ಪಾಠ ಭಿನ್ನತೆಯಿಂದಾಗಿ ಅರ್ಥವೆ ಬೇರೆಯಾಗಿದೆ. ಪಾ>ಬಾ'ಆಗಿ ಮಾರ್ಪಟ್ಟಿದೆ.

ಇದಕ್ಕೆ ಪಾಠಾಂತರಗಳು ಈ ಕೆಳಗಿನಂತಿದೆ.

1) ಪಾಳಿಯಲ್ಲಿ ಪರುರವಿಸಿದರು ವೈವಾಹಪವ (ಓ)

2) ಮೇಳದಲಿ ಸಮತಳಿಸಿದರು ವೈವಾಹಮಂಟಪವ (ಪ್ರ)

ಈ ರೀತಿಯಾಗಿ 'ಕುಮಾರವ್ಯಾಸ' ಭಾರತದ 'ಆದಿಪರ್ವ'ದಲ್ಲಿ ಸಾಲು ಸಾಲುಗಳ ಪಾಠಾಂತರವನ್ನು ಮೇಲ್ಕಂಡ ಹಲವು ಉದಾಹರಣೆಗಳ ಮೂಲಕ ವಿಶ್ಲೇಷಿಸುತ್ತಾ ಹೋಗಬಹುದು.

'ಪುಸ್ತಕಂ ವನಿತಾ ವಿತ್ತಂ ಪರಹಸ್ತ ಗತಂಗತಂ' ಎಂಬ ವ್ಯಾಖ್ಯೆಯಂತೆ ಒಂದು ಕೃತಿ ಒಬ್ಬೊಬ್ಬರ ಕೈಯಲ್ಲಿ ಒಂದೊಂದು ರೀತಿ ಬದಲಾವಣೆ ಪಡೆದುಕೊಳ್ಳುತ್ತಾ ಹೋಗುತ್ತದೆ. ಕುಮಾರವ್ಯಾಸನಂತಹ ಜನಪ್ರಿಯ ಕಾವ್ಯಗಳಲ್ಲಿಯೂ ಇದು ಸರ್ವೇಸಾಮಾನ್ಯವಾದ ಸಂಗತಿಯಾಗಿದೆ.

ಇ) <u>ಪದ-ಪದಗಳ ಪಾಠಾಂತರ ವಿಶ್ಲೇಷಣೆ</u>:-

'ಪದ'ಗಳಿಗೆ ಸಂಬಂಧಿಸಿದಂತೆ 'ಕುಮಾರವ್ಯಾಸಭಾರತ'ದ 'ಆದಿಪರ್ವದಲ್ಲಿ ಅತಿ ಹೆಚ್ಚು ಪಾಠಾಂತರಗಳು ಕಾಣಿಸಿಕೊಳ್ಳುತ್ತವೆ. ಇತರೆ ಸ್ಖಾಲಿತ್ಯಗಳು ಉಂಟಾಗಲು ಇರುವ ಕಾರಣಗಳೇ ಪದಗಳ ಪಾಠಾಂತರಗಳು ಉಂಟಾಗಲು ಕಾರಣವಾಗಿದೆ. ಉದ್ದೇಶಪೂರ್ವಕ ವ್ಯತ್ಯಾಸಗಳು, ಆಕಸ್ಮಿಕ ವ್ಯತ್ಯಾಸಗಳು, ಕಣ್ಣು-ಕಿವಿಗಳ ಭ್ರಾಂತಿಯಿಂದಾದ ತಪ್ಪುಗಳು, ಸ್ಥಾನಪಲ್ಲಟ, ಲೋಪ, ಪ್ರಕ್ಷೇಪ, ಇಲ್ಲದ್ದನ್ನು ಸೇರಿಸುವುದು, ಒಂದಕ್ಕೆ ಪ್ರತಿಯಾಗಿ ಇನ್ನೊಂದನ್ನು ಸೇರಿಸುವುದು. (ಪ್ರತಿನಿಧಾನ). ಹೀಗೆ ಮೊದಲಾದ ಹಲವು ಕಾರಣಗಳಿಂದಾಗಿ ಪದಗಳ ಪಾಠಾಂತರಗಳು ಉಂಟಾಗುತ್ತವೆ. ಇಂತಹ ಹಲವು ಬಗೆಯ ಪಾಠಾಂತರಗಳನ್ನು ಈ ಕೆಳಗಿನಂತೆ ವಿಶ್ಲೇಷಿಸಬಹುದು.

ಅ) "ಒಸರ್ವ ಮಕರಂದದ 'ಪರಾಗದ'"

(ಕು.ಭಾ.ಆದಿಪರ್ವ 5ನೇ ಸಂಧಿ 6ನೇ ಪದ್ಯ)

ಇದರಲ್ಲಿ 'ಪಾರಾಗದ' ಎಂಬ ಪದಕ್ಕೆ ಮೂರು ರೀತಿ ಪಾಠಾಂತರಗಳಿವೆ. ಅವೆಂದರೆ:–

ಅ) ತುಷಾರದ ('ಪ್ರ' ಎಂ.ವಿ.ಸೀ.ಸಂಪಾದಿತ)

ಆ) ಕರದಂಡಕದ ಪರಾಗದ (ಓ)

ಇ) ತಷಾರ (ಕುಮಾ)

ಇಲ್ಲಿ 'ತುಷಾರ–ಪರಾಗ' ಎಂಬ ಪದಗಳು ಭಿನ್ನಾರ್ಥಕಗಳು. ಇದು 'ಪ್ರತಿನಿಧಾನ'ಕ್ಕೆ ಉದಾಹರಣೆ. ಭಿನ್ನಾರ್ಥಕ ಪದಗಳನ್ನು ಸೇರಿಸುವುದಕ್ಕೆ ಡಾ.ಡಿ.ಎಲ್.ನರಸಿಂಹಾಚಾರ್ ರವರು 'ಭಿನ್ನಾರ್ಥಕ ಪ್ರತಿನಿಧಾನ' ಎಂದು ಕರೆದಿದ್ದಾರೆ. ಸಮಾನ ಅರ್ಥಬರುವ ಪದಗಳಿಗೆ 'ಸಮಾನಾರ್ಥಕ ಪ್ರತಿನಿಧಾನ' ಎನ್ನುವರು. 'ಕುಮಾ' ಪ್ರತಿಯಲ್ಲಿ 'ತುಷಾರ'ಕ್ಕೆ ಬದಲು 'ತಷಾರ'ವಾಗಿದೆ. ಇದಕ್ಕೆ ಅರ್ಥವಿಲ್ಲ. ಇದು ಲಿಪಿಕಾರನ ಗಮನಕ್ಕೆ ಬಾರದೆ ಬರೆಯುವ ಆತುರದಲ್ಲಿ 'ತು'–'ತ' ಆಗಿರಬಹುದು.

ಆ) "ದೇವವಧುಗಳ ಸುಳಿ------

– ವಾ ಚೆಲುವಿಕೆ ಶಿವಶಿವಾ------"

(ಕು.ಭಾ.ಆದಿಪರ್ವ 5ನೆ ಸಂಧಿ, 11ನೇ ಪದ್ಯ 6ನೆ ಸಾಲು)

ಇದಕ್ಕೆ ಈ ಕೆಳಗಿನಂತೆ ಪಾಠಾಂತರಗಳಿವೆ.

ಅ) ನೆನಲಾ (ಪ್ರ)

ಆ) ನೆನುತಾ (ದ)

ಇ) ನಿಂನಾ (ಓ)

ಈ) ನೆನಲಾ (ಕುಮಾ, ತ)

ಇಲ್ಲಿಯೂ ಅರ್ಥಕ್ಕೆ ಯಾವುದೇ ಚ್ಯುತಿಯಿಲ್ಲದಿದ್ದರೂ ಹೇಳುವ ಧಾಟಿಯಲ್ಲಿ ಬದಲಾವಣೆಯಿದೆ. 'ನೆಂನಾ' ಎಂಬುದು 'ನೆನಾ' ಎಂಬುದು ಹ್ರಸ್ವವಾಗಿದೆ. 'ತಾನೆನಲಾ' ಎಂದು ಹೇಳುವ ಬದಲು 'ತಾನೆನುತಾ' ಎಂಬುದು ಇನ್ನು ಸ್ಪಷ್ಟ ಎನ್ನುವಂತೆ ಈ ಪಾಠಾಂತರ ಕಾಣಿಸಿಕೊಂಡಿದೆ. ಇವೆಲ್ಲ ಲಿಪಿಕಾರ ಉದ್ದೇಶಿತ ಸ್ಖಾಲಿತ್ಯಗಳೆಂದು ತಿಳಿಯುತ್ತದೆ. ಮುದ್ರಿತ ಪ್ರತಿಗಳಲ್ಲಿಯೂ, ಸಂಗ್ರಹ ಕೃತಿಗಳಲ್ಲಿಯೂ ಏಕಪಾಠ ದೊರೆಯುವುದಾದರೂ ಪ್ರಮಾಣದಲ್ಲಿ ಕಡಿಮೆಯಿದೆ.

ಇ) "ವನದೊಳಾಡುವ 'ವಧುವ'ಸಾರಿದನ"

(ಕು.ಭಾ.ಆದಿಪರ್ವ–5ನೇಸಂಧಿ–13ನೇಪದ್ಯ)

ಪಾಠಾಂತರಗಳು:–

ಅ) ಸತಿಯ (ಪ್ರ)

ಆ) ವಧುವ (ಕುಮಾ,ತ)

ಈ ಪಾಠಾಂತರಕ್ಕೆ ಸಂಬಂಧಿಸಿ ಹೇಳುವುದಾದರೆ 'ಸತಿ' ಹಾಗೂ 'ವಧು' ಎಂಬ ಪದಗಳು ಹೆಚ್ಚುಕಡಿಮೆ ಪದ್ಯದ ಸಂದರ್ಭಕ್ಕೆ ಎರಡು ಪದಗಳು ಹೊಂದಿಕೆಯಾಗುತ್ತವೆ. ಅರ್ಥದ ದೃಷ್ಟಿಯಿಂದಲೂ ಹೊಂದಿಕೆಯಾಗುತ್ತದೆ. ಇಲ್ಲಿ 'ವಧು' ಎಂಬ ಪಾಠವೇ ಸೂಕ್ತವೆನಿಸುತ್ತದೆ.ಕಾರಣವೆಂದರೆ 'ಮಾದ್ರಿ' ಪಾಂಡುವಿಗೆ ವನದಲ್ಲಿ ಆಡುತ್ತಿರುವ ತನ್ನ ಸತಿ 'ನವವಧುವಿನಂತೆ' ಕಾಣತೊಡಗಿದಳು ಎಂದು ಕವಿ ಇಲ್ಲಿ 'ರೂಪಕ'ವನ್ನು ತಂದಿರಬಹುದು.

ಈ) "ಮುಳುಮೊನೆಗಳಲ್ಲಿ 'ಬೆದಕಿ'ನೆತ್ತರು"

(ಕು.ಭಾ.ಆದಿಪರ್ವ 6ನೆ ಸಂಧಿ–6ನೆ ಪದ್ಯ 4ನೆಸಾಲು)

ಇದಕ್ಕೆ ಎರಡು ಬಗೆಯ ಪಾಠಾಂತರಗಳಿವೆ.

ಅ) 'ಗೀಱ'–(ಪ್ರ–ಎಂ.ವಿ.ಸೀ)

ಆ) ಬೆರಟಿ (ರ)

ಇದು 'ಭಿನ್ನಾರ್ಥ ಪ್ರತಿನಿಧಾನ'ಕ್ಕೆ ಉದಾಹರಣೆಯಾಗಿದೆ. 'ಬೆ ಕಿ' ಎಂಬ ಪದಕ್ಕೂ 'ಬೆರಟಿ' 'ಗೀಱ' ಎಂಬ ಪದಕ್ಕೆ ರೂಪಸಾದೃಶ್ಯವೂ ಇಲ್ಲ, ಅರ್ಥಸಾಮ್ಯತೆಯು ಇಲ್ಲ. 'ಎಂ.ವಿ.ಸೀ.ಯವರು ಹೆಚ್ಚು ಕಡೆಗಳಲ್ಲಿ 'ಶಕಟರೇಫ'ದ ಪಾಠಾಂತರವನ್ನೇ ಸ್ವೀಕರಿಸಿದ್ದಾರೆ. ಆದರೆ 'ಭಾಷಾಸ್ವರೂಪ'ದ ದೃಷ್ಟಿಯಿಂದ ನೋಡಿದರೆ ಇದು ತಪ್ಪಾಗುತ್ತದೆ. ಈ ಹಿನ್ನೆಲೆಯಲ್ಲಿ ಶೇಷಗಿರಿಯವರ (ಕಅಸಂ) 'ಬೆದಕಿ' ಎಂಬ ಪಾಠವೇ ಸರಿಯಾದದ್ದು.

ಉ) "ಸಾಯದುಡುಗೊಱ ಗಳಲಿ ಮನೆಗೆ ಕಳುಹಿದರು"

(ಕ.ಭಾ.ಆದಿಪರ್ವ 7ನೆ ಸಂಧಿ–13ನೆ ಪದ್ಯ–3ನೆ ಸಾಲು)

ಪಾಠಾಂತರಗಳು:–

ಅ) ದುಡುಗೊ ಸಹಿತ (ಎಂ.ವಿ.ಸೀ ಯವರ 'ಪ್ರ'ಪ್ರತಿ)

ಆ) ವುಡುಗೊ ಗಳಿಗೆ (ಓ)

ಎಂಬ ಎರಡು ಪಾಠಾಂತರಗಳಿವೆ. ಇದರಿಂದ ಮುಂದಕ್ಕೆ 'ಪ್ರ' ಪ್ರತಿಯಲ್ಲಿ 'ಸಹಿತ', 'ಮನ್ನಿಸಿ' ಎಂಬ ಪದಗಳು ಬರುತ್ತವೆ. ಆದರೆ ಉಳಿದ ಎರಡು ಪ್ರತಿಗಳಲ್ಲಿ ಈ ಪಾಠವಿಲ್ಲ. 'ಸಹಿತ' ಎಂಬುದಕ್ಕೆ ಬದಲಾಗಿ ಅದೇ ಅರ್ಥಬರುವ 'ಗಳಲಿ', 'ಗಳೊಡ' ಎಂಬ ಪದಗಳು ಬಂದಿವೆ. ಇಲ್ಲೂ ಅರ್ಥಕ್ಕೆ ಯಾವುದೇ ಭಿನ್ನತೆಯಿಲ್ಲದೆ 'ಸಾಯವುಡುಗೊ ಗಳಲಿ(ಗಳೊಡನೆ, ಸಹಿತ) ಮನೆಗೆ ಕಳುಹಿದರು' ಎಂದು ಅರ್ಥಪೂರ್ಣ ವಾಕ್ಯವಾಗುತ್ತದೆ.

ಆದರೆ ಮೂರು ಪ್ರತಿಗಳಲ್ಲಿಯೂ 'ಶಕಟರೇಫ'ದ ಬಳಕೆ ಇರುವುದರಿಂದ ಯಾವುದು ಸರಿ ಪಾಠ ಎಂದು ನಿರ್ಧರಿಸುವುದು ಕಷ್ಟಸಾಧ್ಯ.

ಊ) "ಲಾವಿಬಂಧದ 'ಲೀತನಾ'"

(ಕ.ಭಾ.ಆದಿಪರ್ವ–7ನೆ ಸಂಧಿ–49ನೆ ಪದ್ಯದ 6ನೆ ಸಾಲು)

ಪಾಠಾಂತರಗಳು:–

ಅ) ಲರ್ಜುನನು (ಓ, ಕುಮಾ)

ಆ) [ಲಾತಾನಾ] ಬಾ (ಪ್ರ)

ಮೇಲಿನ ಪಾಠಾಂತರದಲ್ಲಿ ಎಂ.ವಿ.ಸೀ (ಪ್ರ)ಯವರು 'ಲೀತನಾ'ಕ್ಕೆ ಬದಲಾಗಿ ಲಾತಾನಾ ಎಂಬುದನ್ನು ಊಹಾತ್ಮಕ ಪಾಠವಾಗಿ ನೀಡಿದ್ದಾರೆ. 'ಓರಿಯಂಟಲ್ ಲೈಬ್ರರಿ', 'ಕುಮಾ', 'ತ', ಪ್ರತಿಗಳಲ್ಲಿ ಇದೆ ಪಾಠ ಲರ್ಜುನ ಎಂದಾಗಿದೆ. ಇವು ಮೂರು ರೂಪಗಳು ಒಂದಕ್ಕೊಂದು ಹೋಲುವುದಿಲ್ಲ. ಆದ್ದರಿಂದ ಇಲ್ಲಿ ಸರಿಯಾದ ಪಾಠ ಯಾವುದೆಂದು ನಿರ್ಧರಿಸುವುದು ಕಷ್ಟ.

ಋ) "ಉಳಿವುದೇ ಮರೆಯಾನೆ ಬಾರೈಕಂದ ಬಾಯೆನುತ"

(ಕು.ಭಾ.ಆದಿಪರ್ವ–8ನೆ ಸಂಧಿ, 60ನೆ ಪದ್ಯ–3ನೆ ಸಾಲು)

ಪಾಠಾಂತರಗಳು:–

ಅ) ಬಾಯೆಂದು (ಪ್ರ)

ಆ) ಬಾರೆನುತ (ಓ)

ಬಹುಶ: ಈ ಪಾಠಾಂತರ 'ಸ್ಮರಣಶಕ್ತಿಯ ಅಭಾವ'ದಿಂದ ಸಂಭವಿಸಿರುವ ಪಾಠಾಂತರವಿರಬಹುದು. ಒಂದು ಸಾಲನ್ನು ಓದಿಕೊಂಡು ಬರೆದುಕೊಳ್ಳುವಾಗ 'ಬಾರೈಕಂದ ಬಾಯೆನುತ, ಬಾರೆನುತ, ಬಾಯೆಂದು' ಎಂದು ಮೂರು ಬಗೆಯು ಹೊಂದಿಕೊಳ್ಳುತ್ತದೆ. ಈ ರೀತಿಯ ಪಾಠಾಂತರಗಳಲ್ಲಿ ಕವಿಯ ಪಾಠ ಯಾವುದೆಂದು ಗುರುತಿಸುವುದು ಕಷ್ಟಸಾಧ್ಯವಾದ ಕೆಲಸ.

ಒ) "ಕುಹಕಿಗಳು ಕೃತಭಿನ್ನ 'ವಾದರೆ' ಭಾರವದು ಮೇಲೆ"

(ಕ.ಭಾ.ಆದಿಪರ್ವ–8ನೆ ಸಂಧಿ–64ನೆ ಪದ್ಯ–3ನೆ ಸಾಲು)

ಇದಕ್ಕೆ ಎಂ.ವಿ.ಸೀ.ಯವರು ಸಂಪಾದಕತ್ವದ ಪ್ರತಿಯಲ್ಲಿ ಮಾತ್ರ 'ವಾದೊಡೆ' ಎಂಬ ಪಾಠಾಂತರ ದೊರೆಯುತ್ತದೆ. ಉಳಿದಂತೆ 'ಓ', 'ಕುಮಾ', 'ತ', ಪ್ರತಿಗಳಲ್ಲಿ 'ಕಅಸಂ' ಪಾಠವೇ ಬಂದಿದೆ. 'ಪ್ರ' ಪ್ರತಿಯನ್ನು ಎಂ.ವಿ.ಸೀ.ಯವರು ಬಿ.ಎಂ.ಶ್ರೀ ಮೊದಲಾದವರು ಸಿದ್ಧಪಡಿಸಿರುವ 'ಕಾಗದ'ದ ಪ್ರತಿಯನ್ನು ಆಧಾರವಾಗಿ ಬಳಸಿಕೊಂಡಿದೆ. ಬಹುಶಃ ಈ ಕಾರಣದಿಂದಲ್ಲೇ ಇತರೆ ಎಲ್ಲಾ ಪ್ರತಿಗಳಲ್ಲಿ ಒಂದೇ ಪಾಠವಿದ್ದರೂ ಇದರಲ್ಲಿ ಮಾತ್ರ ಭಿನ್ನಪಾಠವಿದೆ. 'ವಾದೊಡೆ', 'ವಾದರೆ' ಎಂಬುದಕ್ಕೆ ಮೂಲಭೂತ ವ್ಯತ್ಯಾಸವೇನು ಇಲ್ಲ. ಎರಡು ಏಕಾರ್ಥ ಪದಗಳೇ ಆದರೆ 'ವಾದೊಡೆ' ಎಂಬುದು ನಡುಗನ್ನಡ ಶೈಲಿ, 'ವಾದರೆ' ಎಂಬುದು ಹೊಸಗನ್ನಡ ಶೈಲಿ. ಈ ದೃಷ್ಟಿಯಿಂದ 'ಕಅಸಂ' ಪ್ರತಿಯ ಕೆ.ಆರ್.ಶೇಷಗಿರಿಯವರ 'ವಾದೊಡೆ' ಪಾಠವೇ ಸೂಕ್ತವಾದದ್ದು.

ಓ) "ನೆನೆದ ಕಾರ್ಯವ ರಾಜಕಾರ್ಯದ"

(ಕು.ಭಾ.ಆದಿಪರ್ವ–8ನೆ ಸಂಧಿ–6ನೆ ಪದ್ಯ–4ನೆ ಸಾಲು)

ಇದಕ್ಕೆ ಎರಡು ಪಾಠಾಂತರಗಳಿವೆ. ಅದೆಂದರೆ:–

ಅ) ನೆನೆ[ದು] ಕೌರವ

ಆ) ನೆನೆದ ರೌರವ

ಇಲ್ಲಿ 'ಕೌ', 'ಕಾ', 'ರೌ' ಎಂಬ ಅಕ್ಷರಗಳಿಗೆ ರೂಪಸಾದೃಶ್ಯವಿರುವುದರಿಂದ ವ್ಯತ್ಯಾಸ ಉಂಟಾಗಲು ಕಾರಣವಾಗಿದೆ. ಬರವಣಿಗೆಯ ಅಸ್ಪಷ್ಟತೆಯಿಂದಲೂ 'ಕೌ' ಮತ್ತು 'ರೌ'ಗಳಿಗೆ ಭಿನ್ನತೆ ಗೋಚರಿಸುವುದಿಲ್ಲ. 'ರೌರವ' ಎಂಬ ಪದಕ್ಕೆ ಅರ್ಥಸ್ಪಷ್ಟತೆ ಸಿಗದ ಕಾರಣದಿಂದ 'ಕಅಸಂ' ಪ್ರತಿಯಲ್ಲಿ 'ಕಾರ್ಯವ' ಎಂಬ ಪಾಠವೇ ಸರಿಯಿರಬಹುದು. ಆದರೆ 'ಪ್ರ' ಪ್ರತಿಯಲ್ಲಿ ಪಾಠವೇ ಭಿನ್ನವಾಗಿದೆ. 'ದು' ಎಂಬುದನ್ನು ಊಹಾತ್ಮಾಕ ಪಾಠವಾಗಿ ಗುರುತಿಸಲಾಗಿದೆ.

ಇದಕ್ಕು ಹಿಂದಿನ ಪ್ರತಿಗಳಲ್ಲಿ 'ದ' ಎಂಬ ಪಾಠವೇ ಸ್ವೀಕೃತ ಪಾಠವಾಗಿದೆ.

ಔ) "ವಿಕಟನಿಕರಕೆ ರಾಜ್ಯವೆಂದುದು ಪೌರಜನಮ ಗಿ)

(ಕು.ಭಾ.ಆದಿಪರ್ವ-8ನೆ ಸಂಧಿ-88ನೆ ಪದ್ಯ-6ನೆ ಸಾಲು)

ಇಲ್ಲಿ 'ವಿಕಟನಿಕರಕೆ' ಎಂಬುದಕ್ಕೆ ಎಂಟು ಬಗೆಯ ಪಾಠಾಂತರಗಳು ದೊರೆಯುತ್ತವೆ. ಅದೆಂದರೆ:-

ಅ) ವಿಕಟಕೇಸುರಿ (ಪ್ರ)

ಆ) ವಿಕಳ ಕೇಸುರಿ (ಓ)

ಇ) ವಿಕಟತೆಯ ಸುರ (ಕುಮಾ)

ಈ) ವಿಕಟಯಸುರ (ತ)

ಉ) ಳಕಕೆಸರಿ('ಕಅಸಂ'ಪ್ರತಿಯಲ್ಲಿ ಉಲ್ಲೇಖಿತ 'ಕ' ಪ್ರತಿ)

ಊ) ವಿಕಳ ವೈಸಲೆ (ದ)

ಋ) ವಿಕಳಿ ಕಲಾ (ನ)

ಎ) ವಿಕಟ ಕೇಸುರಿ (ಬ)

ಇದರಲ್ಲಿ 'ಬ' ಮತ್ತು 'ಓ', 'ಪ್ರ' ಪ್ರತಿಯ ಪಾಠಗಳಿಗೆ ಹೋಲಿಕೆಯಿದೆ. 'ಓ' ಪ್ರತಿಯಲ್ಲಿ 'ವಿಕಟ'ಗೆ ಬದಲಾಗಿ 'ವಿಕಳ' ಎಂದು ಒಂದಾಕ್ಷರ ಮಾತ್ರ ಬದಲಾಗಿದೆ. 'ಬ' ಪ್ರತಿಯ ಪಾಠದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಉಳಿದಂತೆ ಪ್ರತಿಗಳಲ್ಲಿ 'ವಿಕಟ', 'ವಿಕಳಿ' ಎಂಬ ಪಾಠಗಳಿದ್ದರೂ 'ಕೇಸುರಿ' ಎಂಬ ಪದವಿಲ್ಲ. 'ಅಸುರ' ಎಂದು ಹೆಚ್ಚು ಪ್ರತಿಗಳಲ್ಲಿ ಬಳಕೆಯಾಗಿದೆ. ಪಾಂಡವ ರಾಜರನ್ನು ಕಂಡು ಜನತೆ ಮರುಗುವ ಬಗೆ ಇಲ್ಲಿ ಹೇಳುತ್ತಿರುವುದರಿಂದ ಪಾಠಾಂತರಗಳು ಕಾಣಿಸಿಕೊಂಡಿವೆ.

'ವಿಕಟಕೇಸುರಿ', 'ವಿಕಟತೆಯಸುರ', 'ವಿಕಟಯಸುರ' ಎಂದು ನಾನಾಬಗೆಯಾಗಿ ಮ ರುಗುವ ಪರಿ ಬಂದಿದೆ. ಪಾಂಡಿತ್ಯ ಹೊಂದಿರುವ, ಪದಗಳನ್ನು ಹೆಣೆಯುವ ಸಾಮರ್ಥ್ಯವಿರುವ ಲಿಪಿಕಾರನಾದ ಮಾತ್ರ ಇದು ಸಾಧ್ಯ. ಒಟ್ಟಾರೆ ಇದು ಉದ್ದೇಶಪೂರ್ವಕ ಸ್ಖಾಲಿತ್ಯ ಕೆಲವು ಪಾಠವಂತೂ ಸಂಪೂರ್ಣವಾಗಿ ಕೆಟ್ಟು ದುಷ್ಟಪಾಠವಾಗಿದೆ.

ಅಂ) "ಇವರು ಯಾಚಕ'ವಿಷಯದಾತಿ'"

(ಕು.ಭಾ.ಆದಿಪರ್ವ–10ನೆ ಸಂಧಿ–3ನೆ ಪದ್ಯ–4ನೆ ಸಾಲು)

ಪಾಠಾಂತರಗಳು:–

ಅ) ವಿಷಯದಾತಿ (ಕುಮಾ, ತ)

ಆ) ವೃತ್ತಿಯಾತಿ (ಪ್ರ)

ಇದು ಭಿನ್ನಾರ್ಥ ಪ್ರತಿನಿಧಾನಕ್ಕೆ ಉದಾಹರಣೆಯಾಗಿದೆ. ಎಂ.ವಿ.ಸೀ.ಯವರ 'ಪ್ರ' ಪ್ರತಿಯಲ್ಲಿ ವಿಷಯಕ್ಕೆ ಬದಲು 'ವೃತ್ತಿ' ಎಂದು ಬಂದಿದೆ. 'ಯಾಚಕ' ಎಂಬ ಪಾಠಕ್ಕೆ 'ವಿಷಯ' ಎಂಬುದುಕ್ಕಿಂತ ವೃತ್ತಿ ಎಂಬುದು ಹೊಂದಿಕೆಯಾಗುತ್ತ, 'ಯಾಚಕ ವೃತ್ತಿಯಲ್ಲಿ' ಎಂದಾಗುತ್ತದೆ. ಆದರೆ ಇದೇ ಸರಿಯಾದ ಪಾಠವೆಂದು ಹೇಳುವುದು ಸಾಧ್ಯವಿಲ್ಲ.

ಕ) "ದರಸ ಕುಂತೀದೇವಿಗೆಂದನು 'ಧರ್ಮನಂದನನು'"

(ಕು.ಭಾ.ಆದಿಪರ್ವ–11ನೆ ಸಂಧಿ–1ನೆ ಪದ್ಯ–6ನೆ ಸಾಲು)

ಪಾಠಾಂತರಗಳು:–

ಅ) ಧರ್ಮಸುತ ನಗುತ (ಪ್ರ)

ಆ) ನಗುತ ವಿನಯದಲಿ (ದ)

ಇ) ಧರ್ಮಸುತ ನಗುತ (ಬ,ರ)

ಈ)ಧರ್ಮಸುತ ನಗುತ (ಕುಮಾ)

ಮೇಲಿನ ಪಾಠಾಂತರಗಳಲ್ಲಿ ಹೆಚ್ಚಿನ ಪ್ರತಿಗಳಲ್ಲಿ 'ಧರ್ಮಸುತ ನಗುತ' ಎಂಬ ಪಾಠವೇ ಬಂದಿದೆ. 'ಕಅಸಂ' ಪ್ರತಿಯಲ್ಲಿ 'ಸುತ' ಎಂಬ ಪಾಠಕ್ಕೆ ಬದಲಾಗಿ 'ನಂದನ' ಎಂದು ಬಂದಿದೆ. 'ನಗುತ' ಎಂಬ ಪಾಠವೇ ಇಲ್ಲಿ ಎಲ್ಲ. ಹೆಚ್ಚಿನ ಪ್ರತಿಗಳಲ್ಲಿ ಇರುವ 'ಧರ್ಮಸುತ ನಗುತ' ಎಂಬ ಪಾಠವೇ ಸರಿಯಿರಬಹುದಾದರೂ ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಖ) "ಗಾರವರ್ಮನು ಧನುವಕೊಂಡನು ನುಡಿಸಿದನುನರನ"

(ಕು.ಭಾ.ಆದಿಪರ್ವ-11ನೆ ಸಂಧಿ-30ನೆ ಪದ್ಯ-6ನೆ ಸಾಲು)

ಇದಕ್ಕೆ ಪಾಠಾಂತರಗಳು:-

ಅ) ದಿಟ್ಟಿಸಿದನಿವರ (ಓ)

ಆ) 'ನರನತೆಗೆದೆಚ್ಚ (ಪ್ರ)

ಎಂಬ ಭಿನ್ನ ಪಾಠಗಳಿವೆ. ನರನ ತೆಗೆದೆಚ್ಚ ಎಂಬುದಕ್ಕೂ, 'ದಿಟ್ಟಿಸಿದನಿವರ', ನುಡಿಸಿದನುನರನ' ಎಂಬುದಕ್ಕೂ ಯಾವುದೇ ರೀತಿಯ ಹೊಂದಿಕೆಯಾಗುವುದಿಲ್ಲ. ಬಹುಶ: ಇದು 'ಅನ್ಯತಾಜ್ಞಾನ'ದಿಂದ ಉಂಟಾದ ದೋಷವಿರಬಹುದು. ಮೇಲಿನ ಸಾಲಿನ ಪದವನ್ನೇ ಅಥವಾ ಕೆಳಗಿನ ಸಾಲಿನ ಪದವನ್ನೋ ಅಥವಾ ಬೇರೆ ಪದ್ಯದ ಸಾಲಿನ ಪದಗಳನ್ನೊ ಸೇರಿಸುವುದು ಅನ್ಯತಾಜ್ಞಾನದಿಂದ ಉಂಟಾಗುವ ಪಾಠಾಂತರಗಳಾಗಿವೆ.

ಗ) "ಜಾಲವಣಿಗಳ 'ಪಾಟಿ'ಯಾದುದು ಜನದ ಕಣ್ಣನಕೆ"

(ಕು.ಭಾ.ಆದಿಪರ್ವ-12ನೆ ಸಂಧಿ-16ನೆ ಪದ್ಯ-6ನೆ ಸಾಲು)

ಇದಕ್ಕೆ ಪಾಠಾಂತರಗಳು:–

ಅ) ದಿಟ್ಟಿಸಿದನಿವರ (ಓ)

ಆ) 'ನರನತೆಗೆದೆಚ್ಚ (ಪ್ರ)

ಎಂಬ ಭಿನ್ನಪಾಠಗಳಿವೆ. ನರನ ತೆಗೆದೆಚ್ಚ ಎಂಬುದಕ್ಕೂ, 'ದಿಟ್ಟಿಸಿದನಿವರ', 'ನುಡಿಸಿದನುನರನ' ಎಂಬುದಕ್ಕೂ ಯಾವುದೇ ರೀತಿಯ ಹೊಂದಿಕೆಯಾಗುವುದಿಲ್ಲ. ಬಹುಶ: ಇದು 'ಅನ್ಯತಾಜ್ಞಾನ'ದಿಂದ ಉಂಟಾದ ದೋಷವಿರಬಹುದು. ಮೇಲಿನ ಸಾಲಿನ ಪದವನ್ನೊ ಅಥವಾ ಕೆಳಗಿನ ಸಾಲಿನ ಪದವನ್ನೋ ಅಥವಾ ಬೇರೆ ಪದ್ಯದ ಸಾಲಿನ ಪದಗಳನ್ನೊ ಸೇರಿಸುವುದು ಅನ್ಯತಾಜ್ಞಾನದಿಂದ ಉಂಟಾಗುವ ಪಾಠಾಂತರಗಳಾಗಿವೆ.

ಫ) 'ಜಾಲ'ವಣೆಗಳ 'ಪಾಟಿ'ಯಾದುದು ಜನದಕಣ್ಣನಕೆ'

(ಕು.ಭಾ.ಆದಿಪರ್ವ–16ನೆ ಸಂಧಿ–16ನೆ ಪದ್ಯ–6ನೆ ಸಾಲು)

ಇದರಲ್ಲಿ 'ಜಾಲ' ಎಂಬ ಪದಕ್ಕೆ 'ಮೇಳ' (ಪ್ರ) ಎಂಬ ಪಾಠವಿದೆ. ಇದು ಭಿನ್ನಾರ್ಥ ಪ್ರತಿನಿಧಾನಕ್ಕೆ ಉದಾಹರಣೆಯಾಗಿದೆ. 'ಕುಮಾ', 'ತ', ಪ್ರತಿಗಳಲ್ಲಿಯೂ 'ಮೇಳ' ಎಂಬ ಪಾಠವೇ ಬಂದಿದೆ. 'ಕಅಸಂ' ಇನ್ನೂ ಎರಡು ಭಿನ್ನ ಪಾಠಾಂತರಗಳನ್ನು ಉಲ್ಲೇಖಿಸುತ್ತದೆ. ಅದೆಂದರೆ;–

ಅ) ಭಾರ (ನ,ಕ)

ಆ) ಬೋಳ (ದ)

ಆದರೆ ಇವೆರಡು ತಪ್ಪುಪಾಠಗಳು ಎಂಬುದಕ್ಕೆ ಯಾವುದೇ ಸಂಶಯವಿಲ್ಲ. 'ಮೇಳ' ಎಂಬ ಪಾಠವನ್ನು ಇಲ್ಲಿ ಸೂಕ್ತ ಎಂದು ನಿರ್ಧರಿಸಬಹುದು. ಕಾರಣ ಮೇಳವಣೆ, ಪೇಟೆ ಎಂಬುದು ಇಲ್ಲಿ ರೂಪಕವಾಗಿ ಬಂದಿದೆ. ಜಾಲ, ಪಾಟ ಎಂಬುದು ಸಹಾ ರೂಪಕವಾಗುತ್ತದೆ. 'ಕುಮಾ' ಪ್ರತಿಯಲ್ಲಿಯೂ 'ಪಾಟ' ಎಂಬ ಪಾಠವೇ ಬಂದಿದೆ.

ಎಂ.ವಿ.ಸೀ.ಯವರು 'ಕೆ'ಪ್ರತಿಯಲ್ಲಿ 'ಪೇಠೆ' ಎಂದು ಇರುವುದನ್ನು 'ಪೇಟೆ' ಎಂದು ತಿದ್ದಿಕೊಂಡು ಸ್ವೀಕರಿಸಿರುವುದಾಗಿ ಸೂಚಿಸಿದ್ದಾರೆ.'ಕುಮಾರವ್ಯಾಸಭಾರತ'ದ ಆದಿಪರ್ವದಲ್ಲಿ ಇದೇ ರೀತಿ ಅನೇಕ 'ಸಾಲು ಪಾಠಾಂತರ'ಗಳು ದೊರೆಯುತ್ತವೆ. ಆದರೆ ಸಂಪ್ರಬಂಧದ ವ್ಯಾಪ್ತಿಯ ದೃಷ್ಟಿಯಿಂದ ಈ ಅಧ್ಯಯನವನ್ನು ಇಲ್ಲಿಗೆ ಸಮಾಪ್ತಿ ಮಾಡಲಾಗಿದೆ.

ಈ) ಅಕ್ಷರ-ಅಕ್ಷರಗಳ ಪಾಠಾಂತರ ವಿಶ್ಲೇಷಣೆ :-

ಪ್ರತಿಕಾರನು ಎಷ್ಟೇ ಎಚ್ಚರಿಕೆಯಿಂದ ಬರೆದರೂ ಅವನಿಗೆ ಅರಿವಿಲ್ಲದೆಯೇ ಕೆಲವು ತಪ್ಪುಗಳಾಗುವುದುಂಟು. ಅಲ್ಲದೇ ಪ್ರತಿಕಾರನ ಕಾವ್ಯ ಪ್ರೌಢಿಮೆ ಲಿಪಿ ಪರಿಣತೆ ಮೊದಲಾದುವುಗಳೂ ಹಸ್ತಪ್ರತಿಯಲ್ಲಾಗುವ ತಪ್ಪುಗಳ ಮೇಲೆ ಪರಿಣಾಮ ಬೀರುತ್ತವೆ. ಸಾಮಾನ್ಯವಾಗಿ ಉಂಟಾಗುವ ತಪ್ಪುಗಳನ್ನು 'ಡಿ.ಎಲ್.ನರಸಿಂಹಾಚಾರ್' ಅವರು ಕಣ್ಣತಪ್ಪು, ಕಿವಿತಪ್ಪು, ಕೈತಪ್ಪುಗಳೆಂದು ಗುರುತಿಸಿದ್ದಾರೆ.ಅದೇ ರೀತಿಯಾಗಿ ಅಕ್ಷರಗಳ ಸಾದೃಶ್ಯ, ಅಕ್ಷರಭ್ರಾಂತಿ, ಅಕ್ಷರಗಳ ಲೋಪ, ಅಲ್ಪಪ್ರಾಣ-ಮಹಾಪ್ರಾಣ, ದೀರ್ಘ-ಹ್ರಸ್ವಗಳ ಬದಲಾವಣೆ ಮೊದಲಾದ ಕಾರಣಗಳಿಂದಾಗಿ 'ಅಕ್ಷರ'ಗಳ ಪಾಠಾಂತರ ಉಂಟಾಗುತ್ತದೆ. 'ಕುಮಾರವ್ಯಾಸಭಾರತ'ದ 'ಆದಿಪರ್ವ'ದಲ್ಲಿ ಪದ್ಯ, ಸಾಲು, ಪದಗಳ ಪಾಠಾಂತರಕ್ಕಿಂತ ಅಕ್ಷರಗಳ ಪಾಠಾಂತರಗಳು ವಿಪುಲವಾಗಿ ದೊರೆಯುತ್ತದೆ.

ಕೆಲವು ಪದ್ಯಗಳಲ್ಲಿ ಒಂದೇ ಪದ್ಯದಲ್ಲಿಯೇ ಎರಡು ಮೂರು ಕಡೆ ಅಕ್ಷರ ಪಾಠಾಂತರಗಳಿರುತ್ತವೆ. ಉದಾಹರಣೆಗೆ:-

ಅ) ಹಲಗೆ ಬಳ1ಹವ ಹಿಡಯದೊಂದ

ಗ್ಗಳಿಕೆ ಪದವಿಟ್ಟ2ಳು ಪದೊಂದು

------------------ ದಗ್ಗಳಿಕೆ

ಬಳಸಿ ಬರೆಯಲು ಕಂಠಪತ್ರ3 ದೌ

ಳು'ಲು ಹುಗೆಡ-----------

(ಕ.ಭಾ.ಆದಿಪರ್ವ-ಪೀಠಿಕಾಸಂಧಿ-9ನೆ ಪದ್ಯ)

ಮೇಲಿನ ಪಾಠಾಂತರಗಳಲ್ಲಿ 1 'ಹ'ಗೆ ಬದಲಾಗಿ 'ಕುಮಾ' ಪ್ರತಿಯಲ್ಲಿ ಬಳ'ಪ'ವ ಎಂದು ಬಂದಿದೆ. ಅರ್ಥದ ದೃಷ್ಟಿಯಿಂದ ಚ್ಯುತಿಯಿಲ್ಲ. ಆದರೂ ಇದು ರೂಪಸಾದೃಶ್ಯದಿಂದ ಉಂಟಾದ ಪಾಠಾಂತರವಾಗಿದೆ. ಅದೇ ರೀತಿ 2 'ಳು' ಗೆ ಬದಲಾಗಿ ಎಂ.ವಿ.ಸೀ. ಸಂಪಾದಿತ 'ಪ್ರ' ಪ್ರತಿಯಲ್ಲಿ 'ಳಿ' ಎಂಬ ಪಾಠಾಂತರ ದೊರೆಯುತ್ತದೆ. ಸಂಪಾದಕರು ಇದನ್ನು ಪ್ರತಿಷ್ಠಾನದ ಹಸ್ತಪ್ರತಿಯಿಂದ ಸ್ವೀಕರಿಸಿರುವುದಾಗಿ ಹೇಳಿಕೊಂಡಿದ್ದಾರೆ. 3 ದೌಳು ಎಂಬ ಪಾಠಕ್ಕೆ 'ಓ' ಪ್ರತಿಯ 'ದವು' ಎಂಬ ಪಾಠಾಂತರವಿದೆ. ಅಕ್ಷರಗಳ ಪಾಠಾಂತರಗಳಿಂದ ಕೆಲವು ಕಡೆ ಅರ್ಥ ಬದಲಾವಣೆಯಾಗುತ್ತದೆಯಾದರೂ, ಹೆಚ್ಚುಕಡೆ ಬದಲಾಗದೆ ಇರುವ ನಿರ್ದಶನಗಳಿವೆ.

ಆ) ತಿಣುಕಿದನು ಫಣಿರಾಯ –

ತಿಣಿಯ ರಘವರಚರಿತೆಯಲ ಕಾಂಡಲು ತೆರಹಿಲ್ಲ

(ಕ.ಬಾ ಪೀಠಿಕಾಸಂಧಿ ಆದಿಪರ್ವ 10ನೆ ಪದ್ಯ)

ತೆರಹಿ ಲ್ಲ ಎಂಬಲ್ಲಿ 'ಹಿ'ಗೆ ಬದಲಾಗಿ ಎಂ.ವಿ.ಸೀ.ಸಂಪಾದಿತ 'ಪ್ರ' ಪ್ರತಿಯಲ್ಲಿ 'ತೆರಪಿಲ್ಲ' 'ಪಿ' ಎಂದು ಪಾಠವಿದೆ. ಬರವಣಿಗೆಯ ಅಸ್ಪಷ್ಟತೆಯಿಂದಾಗಿ 'ಹಿ' ಎಂಬುದು ಲಿಪಿಕಾರನಿಗೆ 'ಪಿ'ಯಂತೆ ಕಂಡಿರಬಹುದು. ಅದ್ದರಿಂದ ಇದು ಕಣ್ಣತಪ್ಪಿನಿಂದ ಆದ ತಪ್ಪಿರಬಹುದು ಅಥವಾ ಲಿಪಿಕಾರನ ತಪ್ಪು ತಿಳುವಳಿಕೆ ಎಂದು ಸಹಾ ಹೇಳಬಹುದು.

ಇ) “ದೇವಿ ‘ಬ’ನದೊಳಗಾಡುತಿರ್ಪಳು”

(ಕು.ಭಾ.ಆದಿಪರ್ವ–5ನೆ ಸಂಧಿ 11ನೆ ಪದ್ಯ, 1ನೆ ಸಾಲು)

ಪಾಠಾಂತರಗಳು:–

ಅ) ‘ವನ’ (ಪ್ರ)

ಆ) ‘ಜನ’ (ಬ)

ಇಲ್ಲಿ ವನ–ಬನ ಎಂಬ ಪದಗಳು ಸಮಾನಾರ್ಥಕ ಪ್ರತಿನಿಧಾನಗಳು, ‘ಜನ’ ಎಂಬುದು ಪಾಠಕೆಟ್ಟಿರುವಂತಹದ್ದು ಎಂದು ಖಚಿತವಾಗಿ ಹೇಳಬಹುದು.

ಈ) “ತುಱುಬ ಹಿಡಿದೆತ್ತಿದನು ಹೆಣಗಿದ1ರೊಡನೆ2 ಜೊಂಪಿಸಿದ”

(ಕು.ಭಾ.ಆದಿಪರ್ವ–5ನೆ ಸಂಧಿ–13ನೆ ಪದ್ಯ–6ನೆ ಸಾಲು)

ಇದರಲ್ಲಿ 1ರೊಡನೆ ಎಂಬುದಕ್ಕೆ ಎರಡು ಭಿನ್ನಪಾಠಗಳಿವೆ.

ಅ) ‘ನೊ’ಡನೆ (ಪ್ರ)

ಆ) ರುಡಿಗೆ (ದ)

ಇದರಲ್ಲಿ ‘ದ’ ಪ್ರತಿಯ ‘ರುಡಿಗೆ’ ಎಂಬುದು ತಪ್ಪುಪಾಠ. ‘ಪ್ರ’ (ಎಂ.ವಿ.ಸೀ) ಪ್ರತಿಯ ‘ನೊಡನೆ’ ಎಂಬುದು ‘ರೊಡನೆ’ ಎಂಬುದಕ್ಕೆ ಅರ್ಥ ಹೊಂದಾಣಿಕೆಯಾಗುತ್ತದೆ. ಎರಡು ಸಹಾ ‘ಒಡನೆ’ ಎಂಬುದರ ಸಂವಾದಿ ಪದಗಳಾಗಿವೆ. ‘ರೊ’ ಎಂಬುದನ್ನು ಅಸ್ಪಷ್ಟವಾಗಿ (ನೊ) ಎಂದು ಬರೆದಾಗ ಮತ್ತೊಂದು ಪ್ರತಿಯಲ್ಲಿ ‘ನೊಡನೆ’ ಎಂದಾಗಿರಬಹುದು.

2. ಜೊಂಪಿಸಿದ ಎನ್ನುವುದಕ್ಕಿರುವ ಪಾಠಾಂತರಗಳು

ಅ) ಝೋಂಪಿಸಿದ (ಓ)

ಆ) ಜೋಂಪಿಸಿದ (ಪ್ರ)

ಒಂದು ಪ್ರತಿಯಲ್ಲಿ ಮಹಾಪ್ರಾಣದ (ಓ) ಬಳಕೆಯಿದ್ದರೆ, ಮತ್ತೊಂದು ಪ್ರತಿಯಲ್ಲಿ ದೀರ್ಘ ಪ್ರಯೋಗವಾಗಿದೆ (ಪ್ರ) ಇಲ್ಲೂ ಸಹಾ ಅರ್ಥಕ್ಕೆ ಯಾವುದೇ ಕುಂದುಂಟಾಗಿಲ್ಲ. 'ಕಅಸಂ' ಪ್ರತಿಯ 'ಜೊಂಪಿಸಿದ' ಎಂಬ ಪಾಠವೇ ಇದರಲ್ಲಿ ಸರಿಯಾದ ಪಾಠವಾಗಿದೆ.

ಉ) "ಅರಸಿ ನೀನೀ ಮಕ್ಕಳನು ಮುಂ"

ದಿರಿಸಿ-----------------

(ಕ.ಭಾ.ಆದಿಪರ್ವ 5ನೆ ಸಂಧಿ–22ನೆ ಪದ್ಯ–4ನೆ ಸಾಲು)

ಇದಕ್ಕಿರುವ ಪಾಠಾಂತರಗಳು:–

ಅ) ಸಂವರಸಿ (ಪ್ರ)

ಆ) ಸಂಹರಿನೇ (ನ)

ಇ) ಸಂತರಿಸಿ (ಓ,ರ)

ಸಾಮಾನ್ಯವಾಗಿ ಒಂದು ಸಾಲು ಮುಕ್ತಾಯ ಹೊಂದುವಲ್ಲಿ ಮತ್ತು ಪ್ರಾರಂಭವಾಗುವಲ್ಲಿ 'ಅಕ್ಷರ' ಪಾಠಾಂತರ, ಲೋಪ, ವ್ಯತ್ಯಾಸಗಳಾಗುವುದು ಸಹಜ. ಮೇಲಿನ ಉದಾಹರಣೆಯಲ್ಲಿ 'ಮುಂದಿರಿಸಿ', 'ಸಂತರಿಸಿ' ಎಂಬುದು ಪದ್ಯದ ಸಂದರ್ಭಕ್ಕೆ ಎರಡು ಪದಗಳು ಅರ್ಥ ಹೊಂದಾಣಿಕೆಯಾಗುತ್ತದೆ. ಆದರೆ 'ಸಂಹರಿಸಿ' ಎಂಬುದು ಪದ್ಯದ ಅರ್ಥವನ್ನೆ ಕೆಡಿಸುತ್ತದೆ. ಆದ್ದರಿಂದ ಇದು ತಪ್ಪು ಪಾಠಾಂತರ ಸಾಮಾನ್ಯ ಲಿಪಿಕಾರರಿಂದ ಇಂತಹ ತಪ್ಪುಗಳು ಉಂಟಾಗುತ್ತದೆ.

ಊ) "ಮರಳ 'ಲಾ' ನೀವಕ್ಕ ನಿಮ್ಮೈ"

(ಕು.ಭಾ.ಆದಿಪರ್ವ 5ನೆ ಸಂಧಿ–23ನೆ ಪದ್ಯ–1ನೆ ಸಾಲು)

ಪಾಠಾಂತರಗಳು:–

ಅ) ಲಾ (ಕುಮಾ, ಪ್ರ)

ಆ) 'ಕಅಸಂ'ನಲ್ಲಿ ಉಲ್ಲೇಖಿತ ಪಾಠಾಂತರಗಳು

1) ಲೆ (ರ)

2) ತಾ (ನ)

ಇದು ಸಹ ಸಾಮಾನ್ಯ ಲಿಪಿಕಾರರಿಂದ ಆದ ತಪ್ಪಿರಬಹುದು. 'ಮರಳ' 'ಲೇ' ಎಂಬುದನ್ನು 'ಲಾ', 'ಲೆ'ಯಾಗಿ ಬಳಸಲಾಗಿದೆ. 'ನ' ಪ್ರತಿಯ 'ತಾ' ಅನ್ನುತಾ ಎಂದು ಪ್ರತಿಕಾರ ಸ್ವೀಕರಿಸಿರಬಹುದು. ಇದು ಕಣ್ಣತಪ್ಪಿಗೆ ಉದಾಹರಣೆಯಾಗುತ್ತದೆ.

ಋ) "ಭರತ ಕುಲ 'ಪಾ'ಲಕರು ನೂರ್ಕೈ"

(ಕು.ಭಾ.ಆದಿಪರ್ವ.6ನೆ ಸಂಧಿ–9ನೆ ಪದ್ಯ–13ನೆ ಸಾಲು)

ಮೇಲಿನ ಪದ್ಯದಲ್ಲಿ 'ಪಾಲಕರು' ಎಂಬಲ್ಲಿ ಎಂ.ವಿ.ಸೀ. ಸಂಪಾದಿತ 'ಪ್ರ' ಪ್ರತಿಯಲ್ಲಿ (ಬಾ) ಲಕರು ಎಂದು ಗುರುತಿಸಿದ್ದಾರೆ. (ಬಾ) ಎಂಬುದನ್ನು ಊಹಾತ್ಮಕ ಪಾಠವಾಗಿ ಸ್ವೀಕರಿಸಿದ್ದಾರೆ. "ಬಾಲಕರು" "ಪಾಲಕರು" ಎಂಬ ಪದಗಳ ಅರ್ಥವೇ ಬೇರೆಯಾಗುತ್ತದೆ. ಆದರೆ ಪದ್ಯದ ಸಂದರ್ಭದಲ್ಲಿ ಅರ್ಥದ ಹೊಂದಾಣಿಕೆಯಾಗುತ್ತದೆ. 'ಭರತಕುಲ'ದ ಪಾಲಕರ ಆಟದ ವರ್ಣನೆ ಎಂದರೂ ಒಂದೇ. 'ಭರತಕುಲದ ಬಾಲಕರ ಆಟದ ವರ್ಣನೆ' ಎಂದರೂ ಒಂದೇ. ಆದರೆ ಇಲ್ಲಿ 'ಬಾಲಕರ ಎಂಬ ಪಾಠಕ್ಕಿಂತ' 'ಕಅಸಂ' ಪ್ರತಿಯ 'ಪಾಲಕರು' ಎಂಬ ಪಾಠವೇ ಉತ್ತಮ ಪಾಠವಾಗಿದೆ. ಕಾವ್ಯಗಳಲ್ಲಿ ಸಾಮಾನ್ಯಪದಗಳಿಗಿಂತ ಔಚಿತ್ಯದ ಪದಗಳ ಬಳಕೆಯೇ ಹೆಚ್ಚು. ರೂಪಕ ಸಾಮ್ರಾಜ್ಯ ಚಕ್ರವರ್ತಿಯಾದ 'ಕುಮಾರವ್ಯಾಸ'ನ ಶೈಲಿಗೆ 'ಪಾಲಕರು' ಎಂಬುದೇ ಒಪ್ಪುತ್ತದೆ.

ಎ) "ಆದಲಿ ಮಗಳೊಂದಾಗಿ ಸಂಗಡವಹರು ಸೂರುಗಳತ್ತ"

(ಕು.ಭಾ.ಆದಿಪರ್ವ 6ನೆ ಸಂಧಿ–3ನೆ ಪದ್ಯ–6ನೆ ಸಾಲು)

ಇದಕ್ಕಿರುವ ಪಾಠಾಂತರಗಳು:–

ಅ) ದು (ಪ್ರ)

ಆ) ತು (ಆ)

ಮೇಲಿನ ಪಾಠಾಂತರದಲ್ಲಿ 'ತ'ಗೆ ಬದಲಾಗಿ 'ದು', 'ತು'ಎಂಬ ಭಿನ್ನ ಪಾಠಗಳು ಬಾಯಿ ತಪ್ಪಿನಿಂದ ಉಂಟಾಗಿರುವ ತಪ್ಪಿರಬಹುದು. ಬೇರೊಬ್ಬರು ಹೇಳುವಾಗ ಲಿಪಿಕಾರ ಬರೆದುಕೊಳ್ಳುವಾಗ ಉಚ್ಚಾರಣೆಯ ಅಸ್ಪಷ್ಟತೆಯಿಂದ 'ತು' ಎಂಬುದು 'ದು' ಆಗಿರಬಹುದು. 'ತ' ಎಂಬುದು ಕೈತಪ್ಪಿರಬಹುದು. ಬರೆಯುವ ಆತುರದಲ್ಲಿ 'ತು'ವನ್ನು 'ತ' ಎಂದು ಅಷ್ಟಕ್ಕೆ ನಿಲ್ಲಿಸಿರಬಹುದು. ಆದರೆ ಇಲ್ಲಿ ಅರ್ಥದ ಮೇಲೆ ಮೂರು ಪಾಠಗಳು ಯಾವುದೇ ಪರಿಣಾಮವನ್ನು ಬೀರುವುದಿಲ್ಲ.

ಕೆಲವೊಮ್ಮೆ ಪದಗಳನ್ನು ಕೂಡಿಸಿ ಬರೆಯುವಾಗ ಅರ್ಥಕ್ಕೆ ಚ್ಯುತಿ ಇಲ್ಲದೆ 'ಅಕ್ಷರ' ವ್ಯತ್ಯಾಸವಾಗುತ್ತವೆ. ಉದಾಹರಣೆಗೆ :–

ಏ) "ಮುಳುಗಿ ಮೊನೆಗಳಲಿ ಗೀಳಿ ನೆತ್ತರು

'ಕ'ಳೆದು-------------------

(ಕು.ಭಾ.ಆದಿಪರ್ವ–6ನೆ ಸಂಧಿ–11ನೆ ಪದ್ಯ)

ಇದಕ್ಕೆ ಎಂ.ವಿ.ಸೀ.ಸಂಪಾದಿತ 'ಪ್ರ', 'ಕುಮಾ', 'ತ' ಪ್ರತಿಗಳಲ್ಲಿ 'ಗಳೆದು' ಎಂಬ ಪಾಠವಿದೆ. 'ನೆತ್ತರುಗಳೆದು' ಎಂಬುದನ್ನು ಬಿಡಿಸಿ ಬರೆದಾಗ ನೆತ್ತರು+ಕಳೆದು ಎಂದಾಗುತ್ತದೆ. 'ಕಲಸಂ' ಪ್ರತಿಯಲ್ಲಿ ಸಾಲಿನ ಮುಕ್ತಾಯ 'ನೆತ್ತರು' ಎಂದು ಮುಗಿದು ಮುಂದಿನ ಸಾಲು 'ಕಳೆದು' ಎಂದು ಪ್ರಾರಂಭವಾಗಿದೆ. ಉಳಿದ ಪ್ರತಿಗಳಲ್ಲಿ 'ಗಳೆದು' ಎಂದಾಗಿದೆ. ಇದು ಸಾಮಾನ್ಯವಾಗಿ ಕಂಡು ಬರುವಂತಹ ಪಾಠಾಂತರಗಳಾಗಿವೆ.

ಐ) "ಸಾಕು ನಿಮ್ಮೊಳು ನೂಱ್ನಾಲ್ವವ"

ಲೀ------------------

(ಕು.ಭಾ.ಆದಿಪರ್ವ 7ನೆ ಸಂಧಿ-6ನೆ ಪದ್ಯ-2ನೆ ಸಾಲು) 62

ಪಾಠಾಂತರಗಳು:-

ಅ) ನಾಲ್ವರ (ಪ್ರ)

ಆ) ನಾಲ್ವರು (ಕುಮಾ, ಓ)

ಇ) ನಾಲ್ವವರಾ (ಅ)

ಎಂಬ ಭಿನ್ನ ಪಾಠಗಳು ನಾಲ್ವ 'ವ' ಎಂಬುದಕ್ಕಿದೆ. ಇಲ್ಲ 'ವ'ಗೆ ಬದಲಾಗಿ 'ರ', 'ರು', 'ರಾ' ಎಂಬ ಅಕ್ಷರ ವ್ಯತ್ಯಾಸವಾಗಿದ್ದರೂ, ಅರ್ಥದಲ್ಲಿ ಭಿನ್ನತೆ ಇಲ್ಲ. 'ಅ' ಪ್ರತಿಯ 'ನಾಲ್ವವರಾ' ಎಂಬಲ್ಲಿ ಮಾತ್ರ 'ರಾ' ಎಂಬುದು ಅಧಿಕ ಪಾಠವೆನಿಸುತ್ತದೆ.

ಇದೇ ರೀತಿಯಾಗಿ ಅಕ್ಷರ ಸಾದೃಶ್ಯದಿಂದ ಅ-ಲ; ಒ-ಬ; ಕ-ತ; ಖ-ಬ; ಗ-ನ; ಫ-ಪು; ಚ-ಬ, ಜ, ಜ-ಚ, ಡ-ದ, ರ, ವ-ಪ, ದ, ಸ-ನ ಎಂದು ಒಂದಕ್ಷರಕ್ಕೆ ಬದಲು ಮತ್ತೊಂದಕ್ಷರ ಬಂದಿರಬಹುದು. ಅಲ್ಪ-ಮಹಾಪ್ರಾಣಗಳು ಶ,ಷ,ಸ,ಗಳು ಬದಲಾಗುವುದು. ವೈ-ವ್ರ, ಋ-ರು, ಕೈ-ಕ್ರ ಎಂಬಂತೆ ಆಗುವುದು ಉಂಟು. ಇವೆಲ್ಲ ಅಕ್ಷರಗಳ ಪಾಠಾಂತರವೇ ಆಗುತ್ತದೆ.

ಒ) "ಕುಂದು ಕುಂದ 'ನು' ಕಷ್ಟ ವೃತ್ತಿನಾಯನಾಚರಿಸುತಿಹರು"

(ಕು.ಭಾ.ಆದಿಪರ್ವ 8ನೆ ಸಂಧಿ-19ನೆ ಪದ್ಯ-3ನೆ ಸಾಲು)

ಮೇಲಿನ ಸಾಲಿನಲ್ಲಿ 'ಕುಂದನು' ಎಂಬುದರಲ್ಲಿ 'ನು' ಎಂಬುದಕ್ಕೆ ಎರಡು ಪಾಠಾಂತರಗಳಿವೆ.

ಅದೆಂದರೆ 'ಓ' ಪ್ರತಿಯ 'ಹಿಂಗದು' ಮತ್ತು 'ಪ್ರ' (ಎಂ.ವಿ.ಸೀ.) ಪ್ರತಿಯಲ್ಲಿ 'ಕುಂದದು' ಎಂದಿದೆ. 'ಪ್ರ'ಪ್ರತಿಯ ಪಾಠ ಆಧಾರ ಪ್ರತಿಯ ಪಾಠವನ್ನು ಹೋಲುತ್ತದೆ. 'ನು'ಗೆ ಬದಲಾಗಿ 'ದು' ಎಂದು ಬಂದಿದೆ. ಬಹುಶಃ ಇದು ಅಕ್ಷರ ಭ್ರಾಂತಿಯಿಂದ ಆದ ದೋಷವಿರಬಹುದು. 'ಓ' ಪ್ರತಿಯ ಪಾಠದಲ್ಲಿ ಹೊಂದಾಣಿಕೆಯೆ ಇಲ್ಲ.

"ಅವ'ನು' ನಿದ್ರೆಯೊಳ ಯದಿರಲಾ"

(ಕು.ಭಾ.ಆದಿಪರ್ವ–8ನೆ ಸಂಧಿ–87ನೆ ಪದ್ಯ–1ನೆ ಸಾಲು)

ಇದಕ್ಕೆ 'ಪ್ರ' ಪ್ರತಿಯಲ್ಲಿ (ಅವ 'ರು') 'ರು' ಎಂಬ ಪಾಠಾಂತರವಿದೆ. ಆದರೆ ಎಂ.ವಿ.ಸೀ.ಯವರು 'ರು'ವನ್ನು ಊಹಾತ್ಮಕ ಪಾಠವಾಗಿ ಗುರುತಿಸಿದ್ದಾರೆ. 'ಅವನು' ಎಂದರೆ ಒಬ್ಬ ವ್ಯಕ್ತಿಯನ್ನು ಕುರಿತಾದದ್ದು ಏಕವಚನ 'ಅವರು' ಎಂದರೆ ಬಹುವಚನ. ಈ ಪ್ರಕಾರ ಎಂ.ವಿ.ಸೀ.ಯವರ ಪಾಠವೇ ಉತ್ತಮವಾದದ್ದು. ಕಾರಣವೆಂದರೆ ಪಾಂಡವರು ನಿದ್ರೆಯಲ್ಲಿರಲು ಭವನದಲ್ಲಿ ಕಿಚ್ಚು ಕಾಣಿಸಿಕೊಂಡಿತು ಎಂದು ಹೇಳುವ ಸಂದರ್ಭ ಮೇಲಿನ ಪದ್ಯಸಾಲು ಇಲ್ಲಿ ಪಾಂಡವರು ಐದು ಜನರನ್ನೂ ಒಟ್ಟಿಗೆ 'ಅವರು' ಎಂದು ಸಂಬೋದಿಸಬಹುದೆ ಹೊರತು 'ಅವನು' ಎಂದು ಏಕವಚನದಲ್ಲಿ ಅಲ್ಲ.

ಓ) "ನನುಜೆ ತಾನು ಹಿಡಿಂಬಿ 'ಯಾ' ಕಾ

(ಕು.ಭಾ.ಆದಿಪರ್ವ 9ನೆ ಸಂಧಿ–16ನೆ ಪದ್ಯದ 2ನೆ ಸಾಲು)

ಪಾಠಾಂತರಗಳು:–

1) ಹಿಡಿಂಬಿ 'ಈ' ಕಾನನ (ಪ್ರ)
2) ಹಿಡಿಂಬಿ 'ಯಿ' ಕಾನನ (ಓ)
3) ಹಿಡಿಂಬಿ 'ಯಿ' ಕಾನನ (ಕುಮಾ)
4) ಹಿಡಿಂಬಿ 'ಯೀ' ಕಾನನ (ತ) 64

ಮೇಲೆ ನೀಡಿರುವ ಪಾಠಾಂತರಗಳಲ್ಲಿ (ಈ,ಯಿ,ಯಾ, ಯೀ) ಎಲ್ಲಾ ಪಾಠಕ್ಕೂ ಒಂದೇ ಅರ್ಥ ಬರುತ್ತದೆ. ಆದರೆ ಎರಡು ಹ್ರಸ್ವ, ಎರಡು ದೀರ್ಘ ಅಕ್ಷರಗಳಿವೆ. ಒಟ್ಟಾರೆ ಅರ್ಥ 'ಹಿಡಿಂಬಿಯ ಈ ಕಾನನ' ಎಂದು ಅರ್ಥ ಬರತ್ತದೆ. ಆದರೆ 'ಕಅಸಂ' ಪ್ರತಿಯಲ್ಲಿ 'ಹಿಡಿಂಬಿಯಾ ಎಂಬಲ್ಲಿ 'ಯಾ' ಎಂಬುದು ವಿಭಿನ್ನ ಅರ್ಥವನ್ನು ನೀಡುತ್ತದೆ. 'ಹಿಡಿಂಬಿಯಾಕಾನನ' ಎಂದರೆ ಹಿಡಿಂಬಿಯ+ಆ+ಕಾನನ ಎಂದಾಗುತ್ತದೆ. ಆದರೆ ಉಳಿದ ಪ್ರತಿಗಳಲ್ಲಿನ 'ಈ' ಎಂಬುದು ಹಿಡಿಂಬಿಯದಿಂದ ಕಾನನ ಎಂದು ಅರ್ಥ ನೀಡುತ್ತದೆ. ಆದರೆ ಎರಡು ಅರ್ಥಗಳು ಪದ್ಯದ ಸ್ವಾರಸ್ಯಕ್ಕೆ ಹೊಂದಿಕೆಯಾಗುತ್ತದೆ.

ಔ) "ಪುಸಿ ಕಾಣಾಯೆಂದಳು ಹಿದೊಡೆರ"

(ಕ.ಭಾ.ಆದಿಪರ್ವ–8ನೆ ಸಂಧಿ–27ನೆ ಪದ್ಯ 5ನೆ ಸಾಲು)

ಇದಕ್ಕೆ 'ಓ' ಪ್ರತಿಯಲ್ಲಿ 'ಹುಸಿ' ಎಂದು 'ಪ್ರ' ಪ್ರತಿಯಲ್ಲಿ 'ನುಸಿ' ಎಂದು ಪಾಠಾಂತರವಿದೆ. ಎಂ.ವಿ.ಸೀ.ಯವರು 'ನುಸಿ' ಎಂದರೆ ಕ್ಷುದ್ರಕೀಟ ಎಂಬ ಅರ್ಥವನ್ನು ಸೂಚಿಸಿ ಈ ಪಾಠವನ್ನು (ನುಸಿ ಸ್ವೀಕರಿಸಿದ್ದಾರೆ. 'ಓ' ಪ್ರತಿಯಲ್ಲಿನ 'ಹುಸಿ' ಎಂದರೆ 'ಸುಳ್ಳು' ಎಂದಾಗುತ್ತದೆ. ಪುಸಿ(ಕಅಸಂ) ಎಂದರು ಹಳಗನ್ನಡದಲ್ಲಿ 'ಸುಳ್ಳು' ಎಂದಾಗುತ್ತದೆ.

ಇಲ್ಲಿ ಕೇವಲ ಒಂದು ಅಕ್ಷರದ ಭಿನ್ನತೆಯಿಂದ ಇಡೀ ಸಾಲಿನ ಅರ್ಥದಲ್ಲಿ ಭಿನ್ನತೆ ಉಂಟಾಗುತ್ತದೆ.

ಅಂ) "ಅಪ್ಪುದಿಳೆ ಧರ್ಮಜ 'ನ'ತ⊘ವಾ"

(ಕು.ಭಾ.ಆದಿಪರ್ವ 8ನೆ ಸಂಧಿ–58ನೆ ಪದ್ಯ–4ನೆ ಸಾಲು)

ಮೇಲಿನ 'ಧರ್ಮಜನ' ಎಂಬುದಕ್ಕೆ 'ಪ್ರ' ಪ್ರತಿಯಲ್ಲಿ 'ಧರ್ಮಜಗೆ' ಎಂದಿದೆ. 'ನ'ಗೆ ಬದಲು 'ಗೆ' ಎಂದು ಬಂದಿದೆ. ಇದರಿಂದಾಗಿ ಎರಡಕ್ಕೂ ಅರ್ಥಭಿನ್ನತೆ ಉಂಟಾಗಿದೆ. ಇದರಲ್ಲಿ ಯಾವುದು ಸರಿಪಾಠ ಎಂದು ನಿರ್ಧರಿಸುವುದು ಕಷ್ಟಸಾಧ್ಯ.

ಕ) "ಕೇಳನ ದುಃಖಂ ಪಂಚಭಿನ್ನಹ 'ಎ'ನ್ನದೇ ವಚನ"

(ಕು.ಭಾ.ಆದಿಪರ್ವ 10ನೆ ಸಂಧಿ–10ನೆ ಪದ್ಯ ಕೊನೆಸಾಲು)

ಪಾಠಾಂತರಗಳು:–

ಅ) 'ಯೆ'ನ್ನದೇ

ಆ) 'ವೆ'ನ್ನದೇ (ಕುಮಾ)

ಬೇರೊಬ್ಬರು ಹೇಳುವಾಗ ಲಿಪಿಕಾರ ಬರೆದು ಕೊಳ್ಳುವಾಗ ಹೇಳುವವನ ಉಚ್ಚಾರಣೆ ಅಸ್ಪಷ್ಟವಾಗಿದ್ದಾಗ ಅಥವಾ ಒಂದು ಸಾಲನ್ನು ಓದಿಕೊಂಡು ಬರೆದು ಕೊಳ್ಳುವಾಗ ಸ್ಮರಣಶಕ್ತಿಯ

ಅಭಾವದಿಂದ ಒಂದಕ್ಷರದ ಬದಲು ಅದೇ ಅಕ್ಷರದ ಉಚ್ಚಾರಣೆ ಕೊಡುವ ಮತ್ತೊಂದು ಅಕ್ಷರ ಬರುತ್ತದೆ. ಮೇಲಿನ ಪದ್ಯದಲ್ಲಿ ಈ ರೀತಿಯಿಂದಾಗಿಯೇ ಪಾಠಾಂತರ ಉಂಟಾಗಿರುವುದು. ಆದರೆ ಅರ್ಥದಲ್ಲಿ ಭಿನ್ನತೆ ಮಾತ್ರ ಗೋಚರಿಸುವುದಿಲ್ಲ. 'ಎನ್ನದೇ', ಯೆನ್ನದೇ' 'ವೆನ್ನದೆ' ಈ ಮೂರು ಒಂದೇ ಅರ್ಥವನ್ನು ನೀಡುತ್ತದೆ. ಆದರೆ ಇಲ್ಲಿ ಯಾವುದು ಸ್ಖಾಲಿತ್ಯ, ಯಾವುದು ಮೂಲ ಎಂದು ಮಾತ್ರ ಗುರುತಿಸಲಾಗುವುದಿಲ್ಲ.

ಗ) "ಕೊನರು ಗಿಡಗಳ ತಗುದುರಿಯ 'ಕೊಂ

ಡನಲಿ––––––––––––––––––––

(ಕು.ಭಾ.ಆದಿಪರ್ವ 11ನೆ ಸಂಧಿ–33ನೆ ಪದ್ಯ–4ನೆ ಸಾಲು)

ಪಾಠಾಂತರಗಳು:–

ಅ) 'ಕೋ'ಡಿಸಲಿ (ಓ)

ಆ) 'ಕು'ಡಿನಲಿ (ಡ)

ಇ) 'ತೊಂ'ಡಿನಲಿ (ಪ್ರ)

ಮೇಲಿನ ಪಾಠಾಂತರಕ್ಕೆ ಸಂಬಂಧಿಸಿ ಹೇಳುವುದಾದರೆ 'ಕೊಂ' ಎಂಬ ಅಕ್ಷರಕ್ಕೆ ಪ್ರತಿಯಾಗಿ 'ಓ' ಪ್ರತಿಯಲ್ಲಿ 'ಅನುಸ್ವಾರವಿಲ್ಲ' ಬದಲಿಗೆ ದೀರ್ಘವಿದೆ. ಎಂ.ವಿ.ಸೀ.ಸಂಪಾದಿತ 'ಪ್ರ' ಪ್ರತಿಯಲ್ಲಿ ಅಕ್ಷರವೇ ಬದಲಾಗಿ 'ತೊಂ' ಎಂದಾಗಿದೆ. 'ಕೊ' ಮತ್ತು 'ತೊ'ಗಳು ಬರವಣಿಗೆಯ ಅಸ್ಪಷ್ಟತೆಯಿಂದ, ಅಕ್ಷರಭ್ರಾಂತಿಯಿಂದ ಉಂಟಾಗಿರುವ ಸ್ಖಾಲಿತ್ಯ. ಆದರೆ ಒಂದಕ್ಷರದ ಬದಲಾವಣೆಯಿಂದ ಪದದ ಅರ್ಥವೆ ಬದಲಾಗಿದೆ. (ತೊಂಡಿ–ಕೊಂಡಿ). ಆದರೆ ಇಲ್ಲಿ 'ಕಅಸಂ' ಪ್ರತಿಯ 'ಕೊಂಡಿ' ಎಂಬ ಪದವೇ ಸರಿಯಾದದ್ದು. ಪದ್ಯದ ಸಾಲಿನ ಅರ್ಥಕ್ಕೆ 'ತೊಂಡಿ', 'ಕೊಂಡಿ', ಕುಂಡಿ, ಎಂಬವು ಹೊಂದಾಣಿಕೆಯಾಗುವುದಿಲ್ಲ.

ಫ) "ನಾರಿಯರ ಕೈಹೊಯ್ಲ ನಗೆಯ 'ಲಿ'

ಹಾರ ಜಡಿದುದು------------

(ಕು.ಭಾ.ಆದಿಪರ್ವ 14ನೆ ಸಂಧಿ–6ನೆ ಪದ್ಯ 4ನೆ ಸಾಲು)

ಎಂ.ವಿ.ಸೀ. ಸಂಪಾದಿತ 'ಪ್ರ' ಪ್ರತಿಯಲ್ಲಿ ಮಾತ್ರ ನಗೆಯ 'ಲಿ' ಎಂಬುದರಲ್ಲಿ 'ಲಿ' ಎಂಬ ಅಕ್ಷರಕ್ಕೆ 'ನಿ' ಎಂಬ ಪಾಠಾಂತರ ದೊರೆಯುತ್ತದೆ. 'ಲಿ' ಎಂಬ ಅಕ್ಷರವನ್ನು ಅದರ ಹಿಂದಿನ ಪದ 'ನಗೆಯ' ಎಂಬುದಕ್ಕೆ ಸೇರಿಸಿಕೊಂಡು ಓದಿದರೆ 'ನಗೆಯಲಿ' ಎಂದು ಅರ್ಥ ಬರುತ್ತದೆ. ಆದರೆ ಮುಂದಿನ ಪದ 'ಹಾರ' ಎಂಬುದಕ್ಕೆ ಸೇರಿಸಿಕೊಂಡರೆ (ಲಿ+ಹಾರ) ಅರ್ಥ ಬರುವುದಿಲ್ಲ. ಆದರೂ ಇಲ್ಲಿ 'ನಿ' ಎಂಬ ಅಕ್ಷರಕ್ಕಿಂತ 'ಲಿ' ಎಂಬ ಅಕ್ಷರ ಹೊಂದಿಕೊಳ್ಳುತ್ತದೆ. ಮೇಲ್ಕಂಡಂತೆ ಕುಮಾರವ್ಯಾಸಭಾರತದ ಆದಿಪರ್ವದಲ್ಲಿ ಅಕ್ಷರ ಸ್ಖಾಲಿತ್ಯಗಳು–ಪಾಠಾಂತರಗಳು ವಿಪುಲವಾಗಿ ಸಿಗುತ್ತವೆ.

"ಮೌಳಿಹಿಮ್ಮೆಟ್ಟಿದನು '1ಕಡೆಯುವ ತಿರು2ಗಿ' ಕಿರಿದೊಡೆಗೆ"

(ಕು.ಭಾ.ಆದಿಪರ್ವ 14ನೆ ಸಂಧಿ,–12ನೆ ಪದ್ಯ 6ನೆ ಸಾಲು)

ಮೇಲಿನ ಪದ್ಯಸಾಲಿನಲ್ಲಿ '1ಕಡೆಯುವ' ಎಂಬ ಪದದಲ್ಲಿ 'ಕ' ಎಂಬ ಅಕ್ಷರಕ್ಕೆ 'ಖ' ಎಂಬ ಪಾಠಾಂತರ 'ಪ್ರ' ಪ್ರತಿಯಲ್ಲಿ ದೊರೆಯುತ್ತದೆ. 'ಕ-ಖ'ಗಳು ಅಲ್ಪಪ್ರಾಣ ಮಹಾಪ್ರಾಣವಾಗಿ ಮಾರ್ಪಟ್ಟಿರುವುದಕ್ಕೆ ಉದಾಹರಣೆ. ಆದರೆ ಇದರಿಂದ ಅರ್ಥವ್ಯತ್ಯಾಸವೇನು ಆಗುವುದಿಲ್ಲ. ಆದರೆ ಹೇಳುವಧಾಟಿಯಲ್ಲಿ ಬದಲಾವಣೆಯಿದೆ.

ಅದೇ ರೀತಿ '2ತಿರುಗಿ' ಎಂಬ ಪದದಲ್ಲಿ ಕೊನೆಯ ಅಕ್ಷರ 'ಗಿ' ಗೆ ಬದಲಾಗಿ 'ಹಿ' ಎಂಬ ಪಾಠಾಂತರ ಎಂ.ವಿ.ಸೀ.ಸಂಪಾದಿತ 'ಪ್ರ' ಪ್ರತಿಯಲ್ಲಿ ದೊರೆಯುತ್ತದೆ. ಇದು ಬರೆಯುವ ಆತುರದಲ್ಲಿ 'ಗಿ–ಹಿ'ಗಳು ಮಾರ್ಪಟ್ಟಿರಬಹುದು. ಇಲ್ಲೂ ಸಹ ಅರ್ಥ ಬದಲಾವಣೆಯಾಗುವುದಿಲ್ಲ. 'ತಿರುಗಿ', 'ತಿರುಹಿ' ಎರಡು ಪದಗಳು ಒಂದೇ ಅರ್ಥ ನೀಡುತ್ತದೆ. 'ಹಿ–ಗಿ'ಎಂಬುವು ರೂಪಸಾದೃಶ್ಯದಿಂದಲೂ ಮಾರ್ಪಟ್ಟಿರಬಹುದು ಅಥವಾ 'ಗಿ'ಯನ್ನು 'ಹಿ'ಇರಬೇಕೆಂಬ ಭ್ರಾಂತಿಯಿಂದ ಪಾಠಾಂತರ ಉಂಟಾಗಿರಬಹುದು. ವೇಗದ ಬರವಣಿಗೆ, ಅಸ್ಪಷ್ಟತೆಯ ಬರವಣಿಗೆಯಿಂದ ಈ ರೀತಿಯ ಪಾಠಾಂತರಗಳು ಉಂಟಾಗುತ್ತವೆ.

ಎಂ.ವಿ.ಸೀ.ಯವರು 'ಕ' ಮತ್ತು 'ಗಿ'ಗಳಿಗೆ 'ಖ' ಮತ್ತು 'ಹಿ'ಗಳಿಗೆ ಸ್ವೀಕರಿಸಿ, 'ಕ–ಹಿ'ಗಳನ್ನು ಭಿನ್ನಪಾಠಗಳಿಗೆ ಗುರುತಿಸಿದ್ದಾರೆ. ತಾವು 'ಕೆ' ಪ್ರತಿಯ ಪಾಠವನ್ನು ಸ್ವೀಕರಿಸಿರುವುದಾಗಿ ದಾಖಲಿಸಿದ್ದಾರೆ. ಇಲ್ಲಿ 'ಕೆ' ಪ್ರತಿಯೆಂದರೆ ಎಂ.ವಿ.ಸೀ.ಯವರು ಬಳಸಿಕೊಂಡಿರುವ ಆಧಾರಪ್ರತಿಯಲ್ಲಿ ಉಲ್ಲೇಖಿಸಿರುವ ಕಿಟ್ಟಲ್ ಅವರ ಸೈಕ್ಲೊಸ್ಟೈಲ್ ಪ್ರತಿ.

"ದುರುಳ ಧನುವನು ನಗುವ 'ಕನ್ನೆ'ಯ
'ತುರುಬು' ಕೊಯ್ಯುವೆನೆನುತ ಕಲಿ ಶಿಶುಪಾನೈತಂದ"
(ಕು.ಭಾ.ಆದಿಪರ್ವ,14ಸಂಧಿ–13ನೆ ಪದ್ಯ, 5–6ನೆ ಸಾಲು)

ಮೇಲಿನ ಪದ್ಯದಲ್ಲಿ 'ಕನ್ನೆ' ಎಂಬ ಪದಕ್ಕೆ 'ಪ್ರ'ಪ್ರತಿಯಲ್ಲಿ 'ಕೈನೆ' ಎಂಬ ಭಿನ್ನಪಾಠವಿದೆ. 'ಕೈನೆ' ಎಂದರೆ 'ದಾಸಿ', 'ಪರಿಚಾರಿಕೆ' ಎಂದು ಎಂ.ವಿ.ಸೀ.ಯವರು ಉಲ್ಲೇಖಿಸಿದ್ದಾರೆ. ಕನ್ನೆ ಎಂದರು ಕೈನೆ ಎಂದರು ಒಟ್ಟಾರೆ ಅರ್ಥದ ಸ್ವಾರಸ್ಯವೇನು ಬದಲಾಗುವುದಿಲ್ಲ. ಇದು ಪಾಂಡಿತ್ಯವಿರುವ ಲಿಪಿಕಾರರಿಂದ ಆಗುವಂತಹ ಪಾಠಾಂತರಗಳು ಸಂದರ್ಭಕ್ಕೆ ತಕ್ಕಂತೆ ಅದೇ ಅರ್ಥಬರುವ ಅಥವಾ ಆ ಪದಕ್ಕೆ, ಆ ಸಾಲಿಗೆ, ಅರ್ಥ ಹೊಂದಾಣಿಕೆಯಾಗುವ ಪದಗಳನ್ನು ಪಾಂಡಿತ್ಯವಿರುವ ಲಿಪಿಕಾರರು ಸೇರಿಸುವುದು ಪಾಠಾಂತರ ಭಿನ್ನತೆಗೆ ಕಾರಣವಾಗುತ್ತದೆ. ಇಂತಹ ಉದ್ದೇಶಿತ ಸ್ಖಾಲಿತ್ಯಗಳು ಕವಿಯ ಮೂಲ ಪಾಠ ಯಾವುದೆಂಬುದನ್ನೆ ಮರೆ ಮಾಡುತ್ತವೆ.

ಅದೇ ರೀತಿಯಾಗಿ 'ತುರುಬು' ಎಂಬ ಪದಕ್ಕೆ ಎರಡು ರೀತಿಯ ಪಾಠಾಂತರಗಳು ದೊರೆಯುತ್ತವೆ. ಅವೆಂದರೆ:–

ಅ) (ರುರಬ) (ಪ್ರ)

ಆ) ರುರವ (ಅ,ಸ,ಕೆ)

ಮೇಲಿನ ಪಾಠಾಂತರಕ್ಕೆ ಸಂಬಂಧಿಸಿ ಹೇಳುವುದಾದರೆ 'ತುರುಬು' ಎಂಬ ಪಾಠವೇ ಸರಿ ಎನಿಸುತ್ತದೆ. 'ಕನ್ನೆಯ ತುರುಬು' ಎಂಬುದು ಅರ್ಥ ಸ್ಪಷ್ಟತೆ ನೀಡುತ್ತದೆ. ಆದರೆ 'ಕನ್ನೆಯ ರುರಬ' ಎಂಬುದಾಗಲಿ 'ಕನ್ನೆಯ ರುರವ' ಎಂಬುದಾಗಲಿ ಅರ್ಥ ಸ್ಪಷ್ಟತೆ ನೀಡುವುದಿಲ್ಲ.

ಎಂ.ವಿ.ಸೀ.ಯವರು 'ರುರಬ' ಎಂಬುದನ್ನು ಊಹಾತ್ಮಕ ಪಾಠವಾಗಿ ನೀಡಿದ್ದಾರೆ. 'ರುರವ', 'ತುರುಬು' ಎಂಬುದನ್ನು ಭಿನ್ನಪಾಠವಾಗಿ ಉಲ್ಲೇಖಿಸಿದ್ದಾರೆ. ಅರ್ಥ ಸ್ಪಷ್ಟತೆಯ ದೃಷ್ಟಿಯಿಂದ ಕೆ.ಆರ್.ಶೇಷಗಿರಿಯವರ (ಕಅಸಂ) ಪಾಠವೇ ಸರಿಯಾಗಿದೆ. ಎಂ.ವಿ.ಸೀ.ಯವರು 'ರುರಬ' ಎಂಬುದಕ್ಕೆ 'ಉರುಬು', 'ಉರ್ಪು', ಉಬ್ಬು' ಎಂದು ಸೂಚಿಸಿ ಇದಕ್ಕೆ ಗರ್ವ, ಕೊಬ್ಬು, ಎಂಬ ಅರ್ಥವನ್ನು ಸೂಚಿಸಿದ್ದಾರೆ. 'ರುರಬ' ಎಂಬ ಪಾಠ ಬರಬಹುದೆಂದು ಊಹಿಸಿದ್ದಾರೆ.

"ಮಾನಭಂಗದ ಮೊದಲ ಮನೆ 'ಯನೆ'
ಮಾನಿನಿಯರಪ ಹಾಸ್ಯಮೀ -------

ಮೇಲಿನ ಪದ್ಯದ ಸಾಲಿನಲ್ಲಿ 'ಮನೆಯನೆ' ಎಂಬಲ್ಲಿ 'ಯನೆ' ಎಂಬ ಎರಡಕ್ಷರಕ್ಕೆ 'ಪ್ರ' ಪ್ರತಿಯಲ್ಲಿ 'ಯೀ' ಎಂಬ ಒಂದೇ ಒಂದು ಅಕ್ಷರವಿದೆ. 'ಮನೆಯನೆ' ಎಂಬುದಕ್ಕೂ 'ಮನೆಯೀ' ಎಂಬುದಕ್ಕೂ ಅರ್ಥ ವ್ಯತ್ಯಾಸವಿದೆ. ಇದು 'ಭಿನ್ನಾರ್ಥ ಪ್ರತಿನಿಧಾನಕ್ಕೆ' ಉದಾಹರಣೆಯಾಗಿದೆ. 'ಕುಮಾ', 'ತ,' ಓ' ಪ್ರತಿಗಳಲ್ಲಿ 'ಮನೆಯನೆ' ಎಂಬ ಪಾಠವೇ ಬಂದಿದೆ. ಪಾಠ ಸ್ವೀಕರಣೆಯಲ್ಲಿ ಬಹು ಪ್ರತಿಗಳಿರುವ ಏಕಪಾಠಕ್ಕೆ ಆದ್ಯತೆಯಿರುವುದರಿಂದ ಇಲ್ಲಿ 'ಮನೆಯನೆ' ಎಂಬ ಪಾಠವೇ ಸರಿಯೆನಿಸುತ್ತದೆ.

"ಮಿಡುಕದಿರೆ ಮಂಡಳಿನೆ 'ಝಾ'ಡಿಸಿ"
(ಕು.ಭಾ.ಆದಿಪರ್ವ-14ನೆ ಸಂಧಿ-24ನೆ ಪದ್ಯ, 2ನೆ ಸಾಲು)

ಮೇಲಿನ ಪದ್ಯದ ಸಾಲಿನ ಪದ್ಯದಲ್ಲಿ 'ಝಾಡಿಸಿ' ಎಂಬುದಕ್ಕೆ 'ಪ್ರ' ಪ್ರತಿಯಲ್ಲಿ 'ಜಾಡಿಸಿ' ಎಂದಿದೆ. ಅಲ್ಪಪ್ರಾಣ ಮಹಾಪ್ರಾಣಾಕ್ಷರವಾಗುವುದಕ್ಕೆ (ಝಾ ಮತ್ತು ಜಾ) ಇದು ಉದಾಹರಣೆ 'ಜ-ಝ' ಎಂಬುದು ಅರ್ಥ ಭಿನ್ನತೆ ಉಂಟುಮಾಡುವುದಿಲ್ಲ.

'ಜಾಡಿಸಿ' ಎಂಬುದನ್ನು ತೇಲಿಸಿ ಉಚ್ಚರಿಸಿದರೆ, 'ಝ' ಎಂಬುದನ್ನು ಒತ್ತಿ ಉಚ್ಚರಿಸಬೇಕು. ಅಂದರೆ ಇಲ್ಲಿ ಉಚ್ಚಾರಣೆಯಲ್ಲಿ ಮಾತ್ರ ಭಿನ್ನತೆ ಉಂಟಾಗುತ್ತದೆ. ಲಿಪಿಕಾರ ಬೇರೊಬ್ಬರು ಹೇಳುವಾಗ, ತಾನು ಬರೆದು ಕೊಳ್ಳುವಾಗ ಉಚ್ಚಾರಣೆಯ ಅಸ್ಪಷ್ಟತೆಯಿಂದ ಈ ರೀತಿಯ ಪಾಠಾಂತರಗಳು ಉಂಟಾಗುತ್ತದೆ. ಅದೇ ರೀತಿಯಾಗಿ ಸಾಮಾನ್ಯ ಲಿಪಿಕಾರರಿಂದ ಅಥವಾ ಅಕ್ಷರಜ್ಞಾನ ಸ್ಪಷ್ಟವಾಗಿಲ್ಲದ ಲಿಪಿಕಾರರಿಂದಲೂ ಈ ರೀತಿ ತಪ್ಪುಗಳಾಗುತ್ತವೆ. ಕೆಲವೊಮ್ಮೆ ಬೇರೆ ಭಾಷೆಗಳ ಪ್ರಭಾವ ಲಿಪಿಕಾರನ ಮೇಲಿದ್ದರೂ ಸಹಾ ಅಲ್ಪಪ್ರಾಣ ಮಹಾಪ್ರಾಣವಾಗುವುದು, ಹ್ರಸ್ವ-ದೀರ್ಘವಾಗುವುದು ಸರ್ವೇಸಾಮಾನ್ಯವಾಗಿರುತ್ತದೆ. ಆದರೆ ಇಂತಹ ಕಡೆಗಳಲ್ಲಿ ಪಾಠನಿರ್ಣಯ ಸುಲಭ. 'ಜಾಡಿಸಿ'ಎಂದು ಸಾಮಾನ್ಯವಾಗಿ ಬಳಸುತ್ತೇವೆ ಹೊರತು 'ಝಾಡಿಸಿ' ಎಂಬ ಮಹಾಪ್ರಾಣವನ್ನಲ್ಲ.

ಆದ್ದರಿಂದ ಇಲ್ಲಿ ಎಂ.ವಿ.ಸೀ.ಯವರ ಆಯ್ಕೆಯೇ ಸರಿಯಾಗಿದೆ ಎನ್ನಬಹುದು.

"ಧ್ವತನಲಾ ಪಾಂಚಾಲನೆನುತಿಳಿದನು 'ವ'ರಾಸನವ"

(ಕು.ಭಾ.ಆದಿಪರ್ವ.14ನೆ ಸಂಧಿ-26ನೆ ಪದ್ಯ, 6ನೆ ಸಾಲು)

ಇದಕ್ಕಿರುವ ಭಿನ್ನಪಾಠಗಳು:-

ಅ) 'ಶ'ರಾ (ಓ)

ಆ) ನಿಜಾ (ಪ್ರ)

ಇ) ವರಾ (ಕುಮಾ, ತ)

ಇದು ಭಿನ್ನಾರ್ಥ ಪ್ರತಿನಿಧಾನಕ್ಕೆ ಉದಾಹರಣೆಯಾಗಿದೆ. 'ಶರಾ', 'ವರಾ' 'ನಿಜಾ' ಈ ಮೂರು ಪದಗಳು ಒಂದಕ್ಕೊಂದು ಅರ್ಥದಲ್ಲಾಗಲಿ, ರೂಪದಲ್ಲಾಗಲಿ ಸಾದೃಶ್ಯವಿಲ್ಲ. 'ಶರಾ' ಮತ್ತು 'ವರಾ' ಎಂಬಲ್ಲಿ ಕೇವಲ ಒಂದಕ್ಷರದಿಂದ (ಶ-ವ) ಅರ್ಥ ಬದಲಾವಣೆಯಾಗಿದೆ. 'ನಿಜಾ ಎಂಬುದು' 'ಪ್ರ' ಪ್ರತಿಯಲ್ಲಿನ ಪಾಠ. ಎಂ.ವಿ.ಸೀ.ಯವರು 'ವರಾ' ಎಂಬುದನ್ನು ಪಾಠಾಂತರ ಪಟ್ಟಿಯಲ್ಲಿ ಸೇರಿಸಿ 'ನಿಜಾ' ಎಂಬ ಪಾಠವನ್ನು ಸ್ವೀಕರಿಸಿದ್ದಾರೆ.

ಇದನ್ನು ಕಿಟ್ಟೆಲ್ ಅವರ ಸೈಕ್ಲೋಸ್ಟೈಲ್ ಪ್ರತಿಯಿಂದ (ಕೆ) ಸ್ವೀಕರಿಸಿರುವುದಾಗಿ ತಿಳಿಸಿದ್ದಾರೆ.

"ನೆನೆದ ತಿಲವ್ರೋಮೇಣದೌಪಾ"

(ಕು.ಭಾ.ಆದಿಪರ್ವ 15ನೆ ಸಂಧಿ–17ನೆ ಪದ್ಯ, 4ನೆ ಸಾಲು)

ಕೆಲವು ಸಲ ಲಿಪಿಕಾರನ ಗಮನಕ್ಕೆ ಬಾರದೆಯೇ ಆಕಸ್ಮಿಕವಾಗಿ ಪಾಠಾಂತರಗಳು ಉಂಟಾಗುತ್ತವೆ. ಅದಕ್ಕೆ ಈ ಮೇಲಿನ ಸಾಲಿನಲ್ಲಿ 'ನೆನೆದ ಎಂಬಲ್ಲಿ' 'ನೆ' ಎಂಬ ಅಕ್ಷರ ಉದಾಹರಣೆಯಾಗಿದೆ. 'ಪ್ರ' ಪ್ರತಿಯಲ್ಲಿ ಇದಕ್ಕೆ 'ನನೆದ' ಎಂಬ ಪಾಠವಿದೆ. ಪ್ರಾರಂಭದ ಅಕ್ಷರ 'ನೆ'ಗೆ ಬದಲಾಗಿ 'ನ' ಎಂಬ ಭಿನ್ನಪಾಠವಿದೆ. ನೆ>ನ ಎಂಬುವು ಸೂಕ್ಷ್ಮವಾದ ವ್ಯತ್ಯಾಸದಿಂದ ಉಂಟಾಗಿರುವ ಪಾಠಾಂತರ. ಇದು ಬರೆಯುವ ಆತುರದಲ್ಲಿ ಗಮನಕ್ಕೆ ಬಾರದೆ ಆಗುವ ಪಾಠಾಂತರವಾಗಿದೆ. ಮನುಷ್ಯ ಸಹಜವಾದ ಬೇಸರಿಕೆ, ಆಲಸ್ಯ, ಸೋಮಾರಿತನ ಮೊದಲಾದ ಕಾರಣಗಳಿಂದ ಲಿಪಿಕಾರ ಅನುದ್ದೇಶಿತ ಕಾರಣದಿಂದ ಈ ರೀತಿಯ ತಪ್ಪುಗಳನ್ನು ಮಾಡುತ್ತಾನೆ. 'ಕುಮಾ', 'ತ', 'ಓ' ಪ್ರತಿಗಳಲ್ಲಿ 'ಕಅಸಂ' ಪ್ರತಿಯ 'ನೆನೆದ' ಎಂಬ ಪಾಠವೇ ಬಂದಿವೆ. ಎಂ.ವಿ.ಸೀ.ಯವರು ತಮ್ಮ ಆಧಾರಪ್ರತಿಯಲ್ಲಿನ 'ನನೆದ' ಎಂಬ ಪಾಠವನ್ನು ಸ್ವೀಕರಿಸಿರುವುದಾಗಿ ಉಲ್ಲೇಖಿಸಿದ್ದಾರೆ.

"ರರ'ಸ' ಹಂತಿಯ ಹರಿಯನಭಿವಂದಿಸಿದನಕ್ಷಿಯಲಿ'

(ಕು.ಭಾ.ಆದಿಪರ್ವ 15ನೆ ಸಂಧಿ–26ನೆ ಪದ್ಯ, 3ನೆ ಸಾಲು)

ಮೇಲಿನ 'ರರ 'ಸ' ಎಂಬ ಪಾಠಕ್ಕೆ 'ಪ್ರ' ಪ್ರತಿಯಲ್ಲಿ ಕೊನೆಯ ಅಕ್ಷರ 'ಸ'ಗೆ ಬದಲಾಗಿ 'ಸು' ಎಂಬ ಅಕ್ಷರವಿದೆ. ಅಂದರೆ 'ರರಸು' ಎಂದು ಬಂದಿದೆ. ಈ ಪದವನ್ನು ಇದಕ್ಕೆ ಮೊದಲಿನ ಸಾಲಿಗೆ ಕೂಡಿಸಿಕೊಂಡು ಓದಿದಾಗ 'ಯಾದವರರಸ', 'ಯಾದವರರಸು' ಎಂದಾಗುತ್ತದೆ.

ಅಂದರೆ ಇಲ್ಲಿ ಅರ್ಥಕ್ಕೆ ಯಾವುದೇ ತೊಂದರೆಯಿಲ್ಲ. 'ಯಾದವರ-ಅರಸ', 'ಯಾದವರಅರಸು' ಎಂದು ಬಿಡಿಸಿ ಓದಿಕೊಳ್ಳಬಹುದು. 'ಅರಸ', 'ಅರಸು' ಎಂಬುದಕ್ಕೆ ಮೂಲಭೂತ ವ್ಯತ್ಯಾಸವೇನು ಇಲ್ಲ. ಇದು ಲಿಪಿಕಾರನ ಗಮನಕ್ಕೆ ಬಾರದೆ ಆಗಿರುವ ದೋಷವಾಗಿದೆ. ಆದರೆ ಇಂತಹ ಕಡೆಗಳಲ್ಲಿ ಮೂಲಪಾಠ ಯಾವುದೆಂದು ನಿರ್ಧರಿಸುವುದು ಸಾಧ್ಯವಾಗುವುದಿಲ್ಲ.

" ತಾಯೆ ಚಿತ್ತೈಸಿದಿರೆಯೆನೆ ಕ'ಡೆ'

ವಾಯದಳು----------

(ಕು.ಭಾ.ಆದಿಪರ್ವ 16ನೆ ಸಂಧಿ-6ನೆ ಪದ್ಯ, 4ನೆ ಸಾಲು)

'ಕಡೆವಾಯಿ' ಎಂಬ ಪಾಠದಲ್ಲಿ 'ಡೆ'ಗೆ ಬದಲಾಗಿ ಎಂ.ವಿ.ಸೀ.ಯವರು 'ಡ' (ಕಡವಾಯಿ) ಎಂಬ ಪಾಠ ಭಿನ್ನತೆಯನ್ನು ಸ್ವೀಕರಿಸಿದ್ದಾರೆ. 'ಡ'-'ಡೆ' ಯಾಗಿರುವುದು ಲಿಪಿಕಾರನ ಅನುದ್ದೇಶಿತ ಸ್ಖಾಲಿತ್ಯ. ಆದರೆ ಎಂ.ವಿ.ಸೀ.ಅರ್ಥ ಸ್ಪಷ್ಟತೆಯನ್ನು ಗಮನಿಸಿ 'ಕಡವಾಯಿ' ಎಂಬುದನ್ನು ಸ್ವೀಕರಿಸಿದ್ದಾರೆ. 'ಕಡವಾಯಿ' ಎಂದರೆ 'ದಾಟು' ಎಂದು ಅರ್ಥ. ಆದ್ದರಿಂದ ಎಂ.ವಿ.ಸೀ. ಸ್ವೀಕೃತ ಪಾಠವೇ ಇಲ್ಲಿ ಸರಿಇರಬಹುದು. 'ಕುಮಾ', 'ತ', 'ಓ' ಪ್ರತಿಗಳಲ್ಲಿ 'ಕಡವಾಯಿ' ಎಂಬ 'ಕಅಸಂ' ಪ್ರತಿಯ ಪಾಠವೇ ಸ್ವೀಕೃತವಾಗಿದೆ.

" 'ಅ'ವರನು ಪಚರಿಸೇಳುರಚಿಸು"

(ಕು.ಭಾ.ಆದಿಪರ್ವ 16ನೆ ಸಂಧಿ-25ನೆ ಪದ್ಯ-4ನೆ ಸಾಲು)

ಮೇಲಿನ ಸಾಲಿನಲ್ಲಿ 'ಅವರು' ಎಂಬುದಕ್ಕೆ 'ಇವರು' ಎಂಬ ಪಾಠಾಂತರವಿದೆ. ಎಂ.ವಿ.ಸೀ.ಸಂಪಾದಿತ 'ಪ್ರ' ಪ್ರತಿಯಲ್ಲಿ 'ಅ'ಗೆ ಬದಲಾಗಿ 'ಈ' ಎಂಬ ಅಕ್ಷರವಿದೆ. 'ಅವರು' 'ಇವರು' ಎಂಬ ಪದಗಳು ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗುವ ವಿಭಿನ್ನ ಪದಗಳಾದರೂ ಒಟ್ಟಾರೆ ಪದ್ಯದ ಸ್ವಾರಸ್ಯದ ದೃಷ್ಟಿಯಿಂದ ಅರ್ಥಭಿನ್ನತೆಯುಂಟು ಮಾಡುವುದಿಲ್ಲ.

ಎರಡು ಪದಗಳು ಸೂಚಿಸಬೇಕಾಗಿರುವುದನ್ನು 'ಸರ್ವನಾಮ'ವಾಗಿ ಸೂಚಿಸುತ್ತದೆ. ಇಂತಹ ಪಾಠಾಂತರಗಳು ಲಿಪಿಕಾರರ ಅನ್ಯಥಾಜ್ಞಾನದಿಂದ ಉಂಟಾಗುವ ಪಾಠಾಂತರಗಳಾಗಿವೆ. ಈ ರೀತಿಯ ಪಾಠಾಂತರಗಳಲ್ಲಿ ಮೂಲಪಾಠ ಯಾವುದೆಂದು ತಿಳಿಯುವುದಿಲ್ಲ.

" ತಂದ ಬಹುವಿಧವಸ್ತು 'ಕಾ'ರವ
ನಂದು ಕೊಟ್ಟನು----------
(ಕು.ಭಾ.ಆದಿಪರ್ವ 17ನೆ ಸಂಧಿ–5ನೆ ಪದ್ಯ–4ನೆ ಸಾಲು)

ಮೇಲಿನ 'ಕಾರವ' ಎಂಬ ಪಾಠದಲ್ಲಿ 'ಕಾ'ಗೆ ಬದಲಾಗಿ 'ಭಾರವ' ಅಂದರೆ 'ಭಾ'ಎಂಬ ಭಿನ್ನಪಾಠವಿದೆ. ಎಂ.ವಿ.ಸೀ.ಸಂಪಾದಿತ 'ಪ್ರ'ಪ್ರತಿಯಲ್ಲಿ 'ಭಾ' ಸ್ವೀಕೃತ ಪಾಠವಾಗಿದ್ದು, 'ಕಾ' ಎಂಬುದನ್ನು ಪಾಠಾಂತರ ಪಟ್ಟಿಯಲ್ಲಿ ನೀಡಿದ್ದಾರೆ. ಉಳಿದಂತೆ 'ಕುಮಾ', 'ಓ', 'ತ' ಪ್ರತಿಗಳಲ್ಲಿ 'ಕಾರವ' ಎಂಬ ಪಾಠವೇ ಸ್ವೀಕೃತವಾಗಿದೆ. 'ಮುರಾರಿ ಬಹುವಿಧವಸ್ತು ಕಾರವ ನಂದು ಕೊಟ್ಟನು' ಎಂಬುದಕ್ಕಿಂತ 'ಭಾರವ ನಂದು ಕೊಟ್ಟನು' ಎಂಬುದೇ ಇಲ್ಲಿ ಹೆಚ್ಚು ಹೊಂದಿಕೊಳ್ಳುತ್ತದೆ. ಆದರೆ ಇದೇ ಸರಿಯಾದ ಪಾಠವೆಂದು ನಿರ್ಧರಿಸುವುದು ಸುಲಭವಾದ ಕೆಲಸವಲ್ಲ. ಪಾಂಡಿತ್ಯವುಳ್ಳ ಲಿಪಿಕಾರರು, ಪದಗಳನ್ನು ಹೆಣೆಯುವು ಸಾಮರ್ಥ್ಯವಿರುವ ಲಿಪಿಕಾರರಿಂದ ಮಾತ್ರ ಇಂತಹ ಪಾಠಾಂತರಗಳು ಉಂಟಾಗುತ್ತವೆ.

ಈ ರೀತಿಯಾಗಿ ಹಲವು ಪಾಠಾಂತರಗಳನ್ನು ನಾಲ್ಕು ನೆಲೆಗಳಲ್ಲಿ ಗುರುತಿಸಬಹುದು. ಇಷ್ಟೇ ಅಲ್ಲದೆ ಇನ್ನು ಕೆಲವು ವಿಶಿಷ್ಟ ಸ್ಖಾಲಿತ್ಯದಿಂದಾದ ಪಾಠಾಂತರಗಳು, ವಿಚ್ಛೇದಿತಸ್ಖಾಲಿತ್ಯದಿಂದ, ಪಾಠಗ್ರಂಥಿಗಳಿಂದಾದ ಪಾಠಾಂತರಗಳನ್ನು 'ಕುಮಾರವ್ಯಾಸ ವಿರಚಿತ ಆದಿಪರ್ವ'ದಲ್ಲಿ ಹೇರಳವಾಗಿ ಗುರುತಿಸಬಹುದು.

ವಿಶಿಷ್ಟರೀತಿಯ ಪಾಠಾಂತರಗಳಲ್ಲಿ ಇಡೀ ಪದ್ಯಗಳು, ಸಂಧಿಗಳು ಅಥವಾ ಪರಿಚ್ಛೇದಗಳು, ಇಡೀ ಗ್ರಂಥಗಳು ಇವುಗಳನ್ನು ಅಧಿಕ ಪಾಠವಾಗಿ ಪ್ರಕ್ಷೇಪ ಮಾಡುವುದು. (Insertion, Interpolation), ಪಾಠಾಂತರಕ್ಕೆ ಕಾರಣವಾಗುತ್ತವೆ. ಇದರಲ್ಲಿ ಡಿ.ಎಲ್.ನರಸಿಂಹಚಾರ್ ಅವರು ಕೆಲವು ವಿಧಾನಗಳನ್ನು ಗುರುತಿಸುತ್ತಾರೆ. ಅವೆಂದರೆ:

ಅ) ಒಂದು ಗ್ರಂಥದ ಒಂದೆಡೆಯಿರುವ ಪದ್ಯವನ್ನೊ, ಗದ್ಯವನ್ನೊ ಅದೇ ಗ್ರಂಥದ ಇನ್ನೊಂದೆಡೆ ಪುನ: ಸೇರಿಸುವುದು ಕುಮಾರವ್ಯಾಸಭಾರತದ ಆದಿಪರ್ವದಲ್ಲಿ ಇದಕ್ಕೆ ಉದಾಹರಣೆ ಸಿಗುವುದಿಲ್ಲ. ಆದರೆ ಉಳಿದಂತೆ 'ಭೀಷ್ಮಪರ್ವ'ದಲ್ಲಿ ಇರುವುದನ್ನು ಡಿ.ಎಲ್.ನರಸಿಂಹಚಾರ್ ರವರು ಗುರುತಿಸಿದ್ದಾರೆ.

ಆ) ಒಂದೇ ಪದ್ಯ ಸ್ವಲ್ಪ ಪಾಠ ವ್ಯತ್ಯಾಸಗಳೊಡನೆ ಇನ್ನೊಂದೆಡೆ ಅಧಿಕವಾಗಿ ಪುನರ್ ಲಿಖಿತವಾಗಿರಬಹುದು. ಇದಕ್ಕೆ ಪ್ರಾರಂಭದಲ್ಲಿ 'ಪದ್ಯ-ಪದ್ಯಗಳ' ಪಾಠಾಂತರ ವಿಶ್ಲೇಷಣೆಯಲ್ಲಿ ಉದಾಹರಣೆಯನ್ನು ನೀಡಲಾಗಿದೆ. ಓರಿಯಂಟಲ್ ಲೈಬ್ರರಿಯ ವಿ.ಶ್ಯಾಮಚಾರಿ ಸಂಪಾದಿತ ಕೃತಿಯಲ್ಲಿ ಈ ರೀತಿಯ ಪಾಠಾಂತರಗಳು ವಿಪುಲವಾಗಿ ದೊರೆಯುತ್ತದೆ.

ಇ) ಒಂದು ಕಾವ್ಯದ ಪದ್ಯಗಳನ್ನು ಇನ್ನೊಂದು ಕಾವ್ಯದ ಸಮಾನ ಸಂದರ್ಭದಲ್ಲಿ ಸೇರಿಸುವುದು. ಈ ರೀತಿಯ ಪಾಠಾಂತರ 'ಆದಿಪರ್ವ'ದಲ್ಲಿ ಸಿಗುವುದಿಲ್ಲ.

ಈ) ಹೊಸದಾಗಿ ಸೇರಿಸುವುದು 'ಓರಿಯಂಟಲ್ ಲೈಬ್ರರಿ'ಯ ಪ್ರತಿಯಲ್ಲಿ ಇದಕ್ಕೆ ವಿಪುಲ ಉದಾಹರಣೆಗಳು ಸಿಗುತ್ತವೆ. 'ಆದಿಪರ್ವ' ಒಂದನ್ನೇ ಎರಡು ಸಂಪುಟಗಳಲ್ಲಿ ತಂದಿರುವುದು ಇದಕ್ಕೆ ನಿದರ್ಶನವಾಗಿದೆ.

ಕೆಲವು ಸಲ ಲಿಪಿಕಾರ ಕವಿಯ ಪದ್ಯಗಳೊಂದಿಗೆ ತನ್ನದು ಇರಲಿ ಎಂದು ಸೇರಿಸುವುದರಿಂದ ಇಡೀ ಪದ್ಯವೇ ಪ್ರಕ್ಷೇಪವಾಗುತ್ತದೆ. ಹೊಸ ಪದ್ಯ ಸಾಲುಗಳನ್ನು, ಪದ್ಯಗಳನ್ನು, ಅಕ್ಷರ ವ್ಯತ್ಯಾಸವನ್ನು ಮಾಡುವುದು ಇವೆಲ್ಲವುದರಿಂದಲೂ ಪಾಠಗಳಲ್ಲಿ ವಿಭಿನ್ನತೆ ಉಂಟಾಗುತ್ತದೆ.

ಈ) ಸಂಗ್ರಹವಾಗಿರುವುದನ್ನು ವಿಸ್ತರಿಸುವುದು, ಪಾಂಡಿತ್ಯವುಳ್ಳ ಲಿಪಿಕಾರರು ಸಂದರ್ಭಕ್ಕೆ ತಕ್ಕಂತೆ, ವರ್ಣನೆಗೆ ಅವಕಾಶವಿರುವ ಕಡೆ ವಿಸ್ತರಿಸಿ ಬರೆದಿರುವುದಕ್ಕೆ ಆದಿಪರ್ವದಲ್ಲಿ ಉದಾಹರಣೆಗಳಿವೆ. ಉದಾಹರಣೆಗೆ ಪ್ರಾರಂಭದ ದೇವತಾಸ್ತುತಿ ಪದ್ಯಗಳು, ಕೌರವರ-ಪಾಂಡವರ ಬಾಲ್ಯ, ಆಟದ ಬಗ್ಗೆ ಹೇಳುವಾಗ, ದ್ರೌಪದಿಯ ಸ್ವಯಂವರ ಮೊದಲಾದ ಕಡೆಗಳಲ್ಲಿ ಈ ರೀತಿಯ ಪಾಠ ಭಿನ್ನತೆಯನ್ನು ನೋಡಬಹುದು. ಈ ರೀತಿ ಹಲವು ನೆಲೆಗಳಲ್ಲಿ ಕುಮಾರವ್ಯಾಸ ವಿರಚಿತ ಆದಿಪರ್ವದಲ್ಲಿ ಪಾಠಾಂತರಗಳನ್ನು ವಿಶ್ಲೇಷಿಸಬಹುದು. ಆದರೆ ಪ್ರತಿಯೊಂದು ಪಾಠಾಂತರವನ್ನು ಗುರುತಿಸಲು ಮತ್ತು ವಿಶ್ಲೇಷಿಸಲು ಈ ಸಂಪ್ರಬಂಧದಲ್ಲಿ ಸಾಧ್ಯವಾಗಿಲ್ಲ. ಪಾಠಾಂತರಗಳು ಅಧಿಕವಾಗಿರುವುದರಿಂದ ಇದು ಸಾಧ್ಯವಾಗಿಲ್ಲ. ಮತ್ತೊಂದು ಕಾರಣವೆಂದರೆ ಅಧ್ಯಯನದ ವ್ಯಾಪ್ತಿ ಮತ್ತು ಕಾಲವಕಾಶ ಸಮಗ್ರವಾಗಿ ಎಲ್ಲಾ ಪಾಠಾಂತರಗಳನ್ನು ಗುರುತಿಸಿ ವಿಶ್ಲೇಷಿಸಿದ್ದೆ ಆದರೆ 'ಆದಿಪರ್ವ' ಒಂದರಲ್ಲಿಯೇ ಒಂದು ಮಹಾಪ್ರಬಂಧದವನ್ನು ರಚಿಸಬಹುದು. ಅಷ್ಟರಮಟ್ಟಿಗೆ ಇದು ವಿಶಾಲವಾದ ಕ್ಷೇತ್ರವಾಗಿದೆ.

ಪಾಠಾಂತರಗಳ ವಿಶ್ಲೇಷಣೆಗೆ ಸಂಬಂಧಿಸಿ ಹೇಳುವುದಾದರೆ ಎಲ್ಲಾ ಪಾಠಗಳಿಗೂ ಇದು ಸರಿ, ಇದು ತಪ್ಪು, ಇದು ಉತ್ತಮ ಅಥವಾ ಸೂಕ್ತ ಎಂದು ನಿರ್ಧರಿಸಲು ಮತ್ತು ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ. (ಕೆಲವು ಕಡೆ ಇದು ಸಾಧ್ಯವಾಗಿದೆ.) ಈ ರೀತಿಯ ವಿಶ್ಲೇಷಣೆಗೆ ಹೆಚ್ಚಿನ ಕಾಲವಕಾಶ, ಚರ್ಚೆ, ಓದು, ಆಧಾರಗಳು ಅವಶ್ಯಕ.

ಆದ್ದರಿಂದಲೇ ಈ ಸಂಪ್ರಬಂಧದಲ್ಲಿ ಕೆಲವು ಕಡೆ ಶುದ್ಧಪಾಠಗಳ ನಿರ್ಧಾರದ ಗೋಜಿಗೆ ಹೋಗದೆ, ಇತರೆ ಪ್ರತಿಗಳಲ್ಲಿನ ಪಾಠಾಂತರಗಳನ್ನು ಇಟ್ಟುಕೊಂಡು, ಪಾಠಾಂತರ ಉಂಟಾಗಲು ಕಾರಣವೇನಿರಬಹುದೆಂಬುದರತ್ತ ಗಮನಿಸಲಾಗಿದೆ.

ಒಟ್ಟಾರೆ ಕುಮಾರವ್ಯಾಸಭಾರತ 'ಆದಿಪರ್ವ'ದಲ್ಲಿ ಪಾಠಾಂತರಗಳು ಅಧಿಕವಾಗಿದ್ದು ಅದನ್ನು ನಾಲ್ಕು ನೆಲೆಗಳಲ್ಲಿ ಹಲವು ಉದಾಹರಣೆಗಳ ಮೂಲಕ ಮೇಲ್ಕಂಡಂತೆ ವಿಶ್ಲೇಷಿಸಬಹುದು.

ಅಧ್ಯಾಯ –6
ಸಮಾರೋಪ

ಸಮಾರೋಪ

'ಕುಮಾರವ್ಯಾಸ ಭಾರತ' ಒಂದು ಮಹಾಸಾಗರವಿದಂತೆ. ಅದರಲ್ಲಿ ಮೊದಲ ಪರ್ವವಾದ 'ಆದಿಪರ್ವ'ದಲ್ಲಿನ ಪಾಠಾಂತರಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ಹೊರತಂದಿರುವ ಕೆ.ಆರ್.ಶೇಷಗಿರಿಯವರ ಸಂಪಾದಕತ್ವದ 'ಕುಮಾರವ್ಯಾಸ ವಿರಚಿತ ಆದಿಪರ್ವ'ವನ್ನು ಆಧಾರ ಪ್ರತಿಯನ್ನಾಗಿ ಇಟ್ಟುಕೊಂಡು ಉಳಿದ ಗ್ರಂಥಗಳೊಡನೆ ತುಲನಾತ್ಮಕವಾಗಿ ಪಾಠಾಂತರಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಪ್ರಮುಖವಾಗಿ ಪದ್ಯ, ಪದ, ಸಾಲು, ಅಕ್ಷರ ಹೀಗೆ ನಾಲ್ಕು ನೆಲೆಗಳಲ್ಲಿ ಈ ಅಧ್ಯಯನ ಸಾಗಿರುವುದು ವಿಶೇಷ.

ಪದ್ಯಗಳ ಪಾಠಾಂತರಕ್ಕೆ ಹೆಚ್ಚು ಉದಾಹರಣೆ ಸಿಗುವುದಿಲ್ಲ. ಆದರೆ ಪ್ರಕ್ಷೇಪಗಳಿಂದಾಗಿ ಒಂದು ಕೃತಿಗೂ ಮತ್ತೊಂದು ಕೃತಿಗೂ ಪದ್ಯಗಳ ಸಂಖ್ಯೆಯಲ್ಲಿ ವ್ಯತ್ಯಾಸ ಮತ್ತು ಪಲ್ಲಟಗಳನ್ನು ಈ ಸಂಪ್ರಬಂಧದಲ್ಲಿ ಸಂಕ್ಷಿಪ್ತ ಉದಾಹರಣೆಗಳ ಮೂಲಕ ವಿವರಿಸಲಾಗಿದೆ.

ಅದೇ ರೀತಿಯಾಗಿ ಪದ, ಸಾಲು, ಅಕ್ಷರಗಳಿಗೆ ಸಂಬಂಧಿಸಿದಂತೆ ಹಲವು ಉದಾಹರಂಣೆಗಳ ಮೂಲಕ ವಿಶ್ಲೇಷಣೆ ಮಾಡಲಾಗಿದೆ. ಈ ಮೂಲಕ ಕವಿ ಮೂಲಪಾಠ ಅಥವಾ ಶುದ್ಧಪಾಠ ಯಾವುದಿರಬಹುದು? ಪಾಠಾಂತರಕ್ಕೆ ಕಾರಣವೇನು? ಉದ್ದೇಶಪೂರ್ವಕವಾಗಿ ಅಥವಾ ಉದ್ದೇಶರಹಿತವಾಗಿ ಉಂಟಾಗಿರುವ ಸ್ಖಾಲಿತ್ಯಗಳೆ? ಅಕ್ಷರಸಾದೃಶ್ಯ, ಭ್ರಾಂತಿ ಮೊದಲಾದ ಕಾರಣಗಳಿಂದಾಗಿ ಪಾಠಾಂತರ ಉಂಟಾಗಿದೆಯೆ? ಮೊದಲಾದ ಅಂಶಗಳನ್ನೆಲ್ಲಾ ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಕುಮಾರವ್ಯಾಸನ ಕಾಲ, ಶೈಲಿ, ಭಾಷಾರೂಪ ಮೊದಲಾದವುಗಳನ್ನೆಲ್ಲಾ ಗಮನದಲ್ಲಿರಿಸಿಕೊಂಡು ಅದಷ್ಟು ತನ್ನ ವ್ಯಾಪ್ತಿಯನ್ನು ಮೀರದೆ, ಇರುವ ಕಾಲಾವಕಾಶದಲ್ಲಿ ಪಾಠಾಂತರಗಳ ವಿಶ್ಲೇಷಣೆಯನ್ನು ಸಂಕ್ಷಿಪ್ತವಾಗಿ ಮಾಡಿರುವುದು ಈ ಅಧ್ಯಯನದ ವಿಶೇಷವಾಗಿದೆ.

ಪರಾಮರ್ಶನ ಗ್ರಂಥಗಳು

ಕ್ರ ಸ	ಲೇಖಕರ ಹೆಸರು	ಕೃತಿಯ ಹೆಸರು	ಪ್ರಕಾಶಕರು
1	ಕಲಬುರ್ಗಿ.ಎಂ.ಎಂ.	ಕನ್ನಡಗ್ರಂಥಸಂಪಾದನಶಾಸ್ತ್ರ	ಶಾರದಾ ಮಂದಿರ ಮೈಸೂರು, 1970
2	ಕುವೆಂಪುಮತ್ತು ಮಾಸ್ತಿ ವೆಂಕಟೇಶ್‌ಅಯ್ಯಂಗಾರ್	ಕರ್ಣಾಟಕಭಾರತಕಥಾಮಂಜರಿ	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, 1985
3	ನಾ.ಗೀತಾಚಾರ್ಯ	ಹಸ್ತಪ್ರತಿಶಾಸ್ತ್ರ ವಿವೇಚನೆ	ಸ್ನೇಹನಿಧಿ ಬಳಗ ಬೆಂಗಳೂರು, 2000
4	ಎಲ್.ಗುಂಡಪ್ಪ	ಕರ್ನಾಟಕಭಾರತಕಥಾಮಂಜರಿ (ಗದ್ಯಾನುವಾದ)	ಹೇಮಂತಸಾಹಿತ್ಯ ಪ್ರಕಾಶನ,ಬೆಂಗಳೂರು 2002
5	ಡಿ.ಎಲ್.ನರಸಿಂಹಚಾರ್	ಕನ್ನಡಗ್ರಂಥಸಂಪಾದನೆ	ಡಿ.ವಿ.ಕೆ.ಮೂರ್ತಿ ಪ್ರಕಾಶಕರು,ಮೈಸೂರು 2005(ತೃತೀಯಮುದ್ರಣ)
6	ಬೋರೆಗೌಡಚಿಕ್ಕಮರಳಿ	ಕುಮಾರವ್ಯಾಸಒಂದು ಅಧ್ಯಯನ	ಅನಿಕೇತನ ಪ್ರಕಾಶಕರು ಮಂಡ್ಯ, 1999
7	ರಹಮತ್‌ತರೀಕೆರೆ,(ಸಂ)	ಕುಮಾರವ್ಯಾಸಭಾರತ– ಸಾಂಸ್ಕೃತಿಕ ಮುಖಾಮುಖಿ	ಪ್ರಸಾರಾಂಗಕನ್ನಡ ವಿ.ವಿ. ಹಂಪೆ, 2004
8	ಶಾಮರಾಯ.ತ.ಸು(ಸಂ)	ಕುಮಾರವ್ಯಾಸಭಾರತ (ಸಂಗ್ರಹ)	ಸಾಹಿತ್ಯ ಅಕಾಡೆಮಿ ದೆಹಲಿ, 1972
9	ಕೆ.ಆರ್.ಶೇಷಗಿರಿ (ಸಂ)	ಕುಮಾರವ್ಯಾಸವಿರಚಿತ– ಆದಿಪರ್ವ	ಕನ್ನಡ ಅಧ್ಯಯನ ಸಂಸ್ಥೆ ಮೈಸೂರು.ವಿ.ವಿ.1972

10	ಶ್ರೀನಿವಾಸ ಹಾವನೂರು	ಹೊಸಗನ್ನಡದ ಅರುಣೋದಯ	ಕನ್ನಡಪುಸ್ತಕಪ್ರಾಧಿಕಾರ ಬೆಂಗಳೂರು, 2000
11	ಶ್ಯಾಮಚಾರಿ.ವಿ. (ಸಂ)	ಕರ್ಣಾಟಕಮಹಾಭಾರತ (ಸಂಪುಟ 1 ಮತ್ತು 2)	ಸರ್ಕಾರಿಓರಿಯಂಟಲ್ ಲೈಬ್ರರಿ,ಮೈಸೂರು 1912, 1913
12	ಸಣ್ಣಯ್ಯ.ಬಿ.ಎಸ್.	ಹಸ್ತಪ್ರತಿಶಾಸ್ತ್ರ ಪರಿಚಯ	ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ಬೆಂ.1992
13	ಎಂ.ವಿ.ಸೀತಾರಾಮಯ್ಯ (ಸಂ)	ಕುಮಾರವ್ಯಾಸಭಾರತ ಸಂಗ್ರಹ	ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ಬೆಂ. 1990
14	ಎಂ.ವಿ.ಸೀತಾರಾಮಯ್ಯ ಮತ್ತು ಚಿದಾನಂದಮೂರ್ತಿ (ಸಂ)	ಹಸ್ತಪ್ರತಿಶಾಸ್ತ್ರ	ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ಬೆಂ. 1983
15	ಸೀತಾರಾಮ್ ಜಾಗೀರ್ ದಾರ್	ಗ್ರಂಥಸಂಪಾದನಾಶಾಸ್ತ್ರ ಪರಿಚಯ	ಕನ್ನಡ ಸಾಹಿತ್ಯ ಸಂಘ ರಂಗಂಪೇಟೆ, 1978
16	ಸಂಗಮೇಶಸವದತ್ತಿಮಠ	ಕನ್ನಡಸಾಹಿತ್ಯಸಂಶೋಧನೆ ಮಾರ್ಗಮತ್ತು ಇತಿಹಾಸ	ರೂಪರಶ್ಮಿ ಪ್ರಕಾಶನ ಧಾರವಾಡ 2006